ಎಂದು ಹೇಳುತ್ತಿದ್ದಾರೆ. ಅವರು ಹೇಳಿದ ಹಾಗೆ ಬಡ್ಡಿ ಹಚ್ಚುವಂತಹ ಶಕ್ತಿ ಸಹ ರೈತರಲ್ಲಿಲ್ಲ. ಆ ಕಾರಣದಿಂದ ನಬಾರ್ಡ್‌ನವರ ಕೂಡ ಮಾತನಾಡಿಕೊಂಡು ಬಡ್ಡಿ ಕೊಡುವುದನ್ನು ಸಹ ಪೋಸ್ಟ್ ಪೋನ್ ಮಾಡಿಸುವುದು; ಇನ್‌ಕ್ಲೂಡಿಂಗ್ ಬಡ್ಡಿ ಮಾಡಿಸುವುದಿಲ್ಲ. ಬಡ್ಡಿ ಪೋಸ್ಟ್ ಪೋನ್ ಮಾಡಿ ಕನ್‌ವರ್ಷನ್ ಮಾಡುವಂತಹ ಪ್ರಯತ್ನ ಮಾಡುತ್ತೇವೆ.

(6) ಅಲ್ಪಕಾಲಾವಧಿ ಚರ್ಚೆ

ವಿಷಯ: ರೈತರ ಪಂಪ್‌ಸೆಟ್‌ಗಳಿಗೆ ಒಂದು ಹಾರ್ಸ್ ಪವರ್‌ಗೆ 300 ರೂ ಮುಂದುವರಿಸುವ ಬಗ್ಗೆ.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಉಪಾಧ್ಯಕ್ಷರೆ, ಅನೇಕ ಪ್ರಶ್ನೆಗಳನ್ನು ನಾನು ಇಲ್ಲಿ ಕೇಳಿದೆ. ವಿದ್ಯುತ್ ಜನರೇಷನ್‌ಗೂ ವಿದ್ಯುತ್ ವಿತರಣೆಗೂ ಬಂದಿರುವಂತಹ ಸಮಸ್ಯೆಯಿಂದಾಗಿ ಅನೇಕ ವಿದ್ಯುತ್ ವೈಫಲ್ಯಗಳು ಬರುತ್ತಿವೆ. ಈ ವಿದ್ಯುತ್ ವೈಫಲ್ಯಗಳಿಂದಲೇ ಅನೇಕ ರೀತಿಯಲ್ಲಿ ಮಾರ್ಚ್ ತಿಂಗಳಲ್ಲಿಯೇ ಷಟ್‌ಡೌನ್ ಆರಂಭವಾಗಿದೆ. ಜನರು ಇವತ್ತು ತತ್ತರಿಸುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ರೈತರ ಬವಣೆ ಏನು ಎಂದು ಒಂದು ದೊಡ್ಡ ಪ್ರಶ್ನೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಜನವರಿಯಿಂದ ಮಾರ್ಚ್ ತನಕ, ಸಾಧಾರಣವಾಗಿ ಮೇ ತನಕ ಮಾತ್ರ ದಿವಸಕ್ಕೆ ನಾಲ್ಕು ಗಂಟೆ ಮಾತ್ರ ರೈತರು ಪಂಪಿಂಗ್‌ಗೋಸ್ಕರ ವಿದ್ಯುತ್ ಅನ್ನು ಉಪಯೋಗ ಮಾಡುತ್ತಿದ್ದಾರೆ. ಹೀಗಿದ್ದರೂ ಕೂಡ ಈ ವಿದ್ಯುತ್ ವೈಫಲ್ಯದಿಂದ, ಷಟ್ ಡೌನ್‌ಗಳಿಂದಾಗಿ ಅವರಿಗೆ ಸರಿಯಾಗಿ ವಿದ್ಯುತ್ತನ್ನು ಉಪಯೋಗ ಮಾಡಲು ಸಾಧ್ಯವಾಗುತ್ತಿಲ್ಲ. ಅಂತಹ ಸಂದರ್ಭದಲ್ಲಿ ಕೂಡ ಸನ್ಮಾನ್ಯ ನಾಣಯ್ಯನವರು ಏನು ಹೇಳಿದ್ದಾರೆ, ಎಂದರೆ ಪಂಪ್‌ಸೆಟ್ ಮೇಲೆ 500 ರೂಪಾಯಿ ಏರಿಸುವಂತಹದು ಮತ್ತು ಮೀಟರನ್ನು ಅಳವಡಿಸುವಂತಹದ್ದು. ಈ ಎರಡರ ಬಗ್ಗೆ ನಮ್ಮ ಜಿಲ್ಲೆಯಿಂದ ಸ್ಪಷ್ಟವಾದ ವಿರೋಧವನ್ನು ನಾವು ವ್ಯಕ್ತ ಪಡಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುವುದು ಅಂದರೆ ಕೃಷಿಗೆ ಹಿಂದೆ ಯಾವ ರೀತಿ ಒಂದು ಹಾರ್ಸ್ ಪವರ್‌ಗೆ 300 ರೂಪಾಯಿ ಎಂದು ನಿಗದಿ ಪಡಿಸಿದ್ದರೋ ಅದೇ ದರವನ್ನು ಮುಂದುವರಿಸಬೇಕು ಮತ್ತು ಯಾವುದೇ ರೀತಿಯಲ್ಲಿ 500 ರೂಪಾಯಿಗಳನ್ನು ಇಲ್ಲಿ ಅಳವಡಿಸಬಾರದು ಎಂಬ ಒತ್ತಾಯವನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡಲಿಕ್ಕೆ ಇಚ್ಛಿಸುತ್ತೇನೆ.

+ ಶ್ರೀ ಡಿ.ವಿ.ಸದಾನಂದ ಗೌಡ (ಪುತ್ತೂರು): ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದ ಬಗ್ಗೆ ಈಗಾಗಲೇ ಪ್ರಸ್ತಾಪ ಆಗಿದೆ. ನಮಗೆಲ್ಲಾ ಗೊತ್ತಿರುವ ಹಾಗೆ ಕೆ.ಇ.ಬಿ ಯೂನಿಟ್‌ಗೆ 1.45ರ ಪ್ರಕಾರ ಮೀಟರ್ ಹಾಕಿ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಕೆ.ಇ.ಬಿ. ಮಂತ್ರಿಗಳು ಇಲ್ಲ. ಯಾರೂ ಇಲ್ಲ. ಇದು ಮಹತ್ವದ ವಿಚಾರ.

ಉಪಾಧ್ಯಕ್ಷರು: ಮಂತ್ರಿಗಳನ್ನು ಕರೆಯಲಿಕ್ಕೆ ಹೋಗಿದ್ದಾರೆ, ನಾನು ಮಾನ್ಯ ಪ್ರಕಾಶ್‌ರವರಿಗೆ ಹೇಳಿದ್ದೇನೆ. ಮಾನ್ಯ ದರ್ಶನಾಪುರ್ ಅವರು ಬಂದರು, ತಾವು ಮುಂದುವರಿಸಿ

ಶ್ರೀ ಡಿ.ವಿ.ಸದಾನಂದಗೌಡ: ಈಗಾಗಲೇ ನಾವು ಪ್ರಸ್ತಾಪ ಮಾಡಿದ ರೀತಿಯಲ್ಲಿ ಹಿಂದೆ ಹಾರ್ಸ್ ಪವರ್‌ಗೆ 500 ರೂಪಾಯಿ, ತೋಟಗಾರಿಕಾ ಇಲಾಖೆಗೆ ಸಂಬಂಧಪಟ್ಟಿದ್ದಕ್ಕೂ, ಕೃಷಿ ಇಲಾಖೆಯಿಂದ ಆಗುವುದಕ್ಕೆ 300 ರೂಪಾಯಿ ಎಂದು ನಿಗದಿ ಪಡಿಸಿದ್ದೆವು. ಇದರ ಜೊತೆಯಲ್ಲಿ ಸರ್ಕಾರ ಒಂದು ವಿಚಾರವನ್ನು ಹೇಳಿತ್ತು, ಕೆ.ಇ.ಬಿ.ಗೆ ಮೀಟರ್ ಹಾಕಿದಂತಹ ಸಂದರ್ಭದಲ್ಲಿ ಯೂನಿಟ್‌ಗೆ 1.45 ರಂತೆ ಹಾಕಿ ಮೀಟರನ್ನು ಅಳವಡಿಸುವುದು ಎಂದು ನಿಶ್ಚಯ ಮಾಡಿದ್ದರು. ಇದರಲ್ಲಿ ಈಗ ವ್ಯತ್ಯಾಸಗಳು ಏನಾಗಿವೆ ಎಂದರೆ ಭತ್ತದ ಬೆಳೆಗೆ ಮತ್ತು ಬಾಕಿ ತೋಟಗಾರಿಕಾ ಬೆಳೆಗೆ ಇರುವಂತಹ ವ್ಯತ್ಯಾಸವನ್ನೂ ಕೂಡ ನಾವು ನೋಡುವಂತಹ ಅವಶ್ಯಕತೆ ಇದೆ. ಏಕೆಂದು ಹೇಳಿದರೆ ಭತ್ತದ ಬೆಳೆಗೆ ದಿನಕ್ಕೆ 24 ಗಂಟೆ ಕೂಡ ನೀರು ಬೇಕಾಗುವಂತಹ ಸಂದರ್ಭ ಇದೆ. ಆದರೆ ಪ್ಲಾಂಟೇಷನ್ ಕ್ರಾಫ್ಸ್ ಏನು ಇದೆ, ಅದಕ್ಕೆ ದಿನಕ್ಕೆ 24 ಗಂಟೆ ನೀರು ಬೇಕಾಗಿಲ್ಲ. ಅಡಿಕೆ ಬೆಳೆ ಅಥವಾ ಕಾಫಿಗೆ ಸ್ಪ್ರಿಂಕ್ಲರ್ ಅಳವಡಿಕೆ ಮಾಡುವಂತಹ ಸಂದರ್ಭಗಳಲ್ಲಿ ಕೇವಲ ಡಿಸೆಂಬರ್‌ನಿಂದ ಮೇ ತನಕ ನಾವು ನೀರನ್ನು ಉಪಯೋಗ ಮಾಡಬೇಕಾದಂತಹ ಸಂದರ್ಭಗಳು ಬರುತ್ತದೆ. ಅದೂ ಕೂಡ ದಿನವೂ ಸ್ಪ್ರಿಂಕ್ಲರ್ ಅಳವಡಿಸಿದರೆ ವಾರಕ್ಕೆ ಎರಡು ಬಾರಿ ಅಥವಾ ಬರೇ ಮೂರು ಗಂಟೆಗಳ ಕಾಲ ನಾವು ಸ್ಪ್ರಿಂಕ್ಲರ್‌ನ್ನು ಅಳವಡಿಕೆ ಮಾಡುತ್ತಿದ್ದೇವೆ. ಅಥವಾ ತುಂತುರು ನೀರಾವರಿಯನ್ನು ನಾವು ಮಾಡುವುದಿದ್ದರೆ ದಿನಕ್ಕೆ ಒಂದು ಗಂಟೆಗಳಷ್ಟು ಕಾಲ ನೀರನ್ನು ಉಪಯೋಗ ಮಾಡುತ್ತೇವೆ. ಈಗಾಗಲೇ ಏನು ಮಾಡಿದ್ದಾರೆಂದರೆ 500 ರೂಪಾಯಿ ಪ್ರಕಾರ ವಸೂಲಿ ಮಾಡಬೇಕೆಂದು ನೋಟೀಸ್‌ಗಳನ್ನು ಕೊಟ್ಟಿದ್ದಾರೆ. 500 ರೂಪಾಯಿಗಳನ್ನು ವಸೂಲಿ ಮಾಡದಿದ್ದರೆ ಫ್ಯೂಸ್ ತೆಗೆಯುತ್ತೇವೆನ್ನುವಂತಹ ವಿಚಾರಗಳನ್ನು ಕೂಡ ಹೇಳಿದ್ದಾರೆ. ಈ ಹಿಂದೆ ಏನಾಗಿತ್ತು ಎಂದರೆ, ಚುನಾವಣಾ ಪೂರ್ವದಲ್ಲಿ ನಾವು ಇದನ್ನು ಸರ್ಕಾರದ ಜೊತೆ ಪ್ರಸ್ತಾಪ ಮಾಡಿದಾಗ, ಸರ್ಕಾರ ಏನು ಹೇಳಿತ್ತು ಎಂದರೆ 300 ರೂಪಾಯಿ ಮಾತ್ರ ವಸೂಲಿ ಮಾಡಿ. 500 ರೂಪಾಯಿಗಳನ್ನು ವಸೂಲಿ ಮಾಡಬೇಡಿ ಎಂದು ಹೇಳುವಂತಹ ವಿಚಾರವನ್ನು ಪ್ರಸ್ತಾಪ ಮಾಡಿತ್ತು ಎಂಬ ವಿಚಾರವನ್ನು ಮಾನ್ಯ ವಿದ್ಯುತ್ ಸಚಿವರು ಹೇಳಿದ್ದಾರೆ. ಆದರೆ ಕೆ.ಇ.ಬಿ. ಇಲಾಖೆಯವರು ಏನು ಮಾಡುತ್ತಾರೆ? ನಮ್ಮ ಜಿಲ್ಲೆಗಳಲ್ಲಿ ಮತ್ತು ಈಗ ಶಿವಮೊಗ್ಗ ಜಿಲ್ಲೆಗಳಲ್ಲಿ ಏನು ಮಾಡಿದ್ದಾರೆ ಎಂದರೆ, 500 ರೂಪಾಯಿಗಳನ್ನು ಬಲಾತ್ಕಾರವಾಗಿ ವಸೂಲಿ ಮಾಡುತ್ತಾರೆ. ಅದಲ್ಲದೆ ಈಗ ನೀರಾವರಿಯ ಕಾಲ. ಈಗ ನಾವು ವರ್ಷ ಪೂರ್ತಿ ಬೆಳೆಸಿದಂತಹ ಬೆಳೆಗೆ ಏನಾದರೂ

ಕೆ.ಇ.ಬಿ.ಯವರು ಫ್ಯೂಸನ್ನು ತೆಗೆದರೆ ತಕ್ಷಣ ಇದರಿಂದ ನಮ್ಮ ಬೆಳೆಗೆ ತೊಂದರೆ ಆಗುತ್ತದೆ. ಈಗಾಗಲೇ ನಾವು ಕೇಳಿಕೊಂಡ ಪ್ರಕಾರ 300 ರೂಪಾಯಿ ಹಾರ್ಸ್ ಪವರ್‌ಗೆ ಮಾಡುವುದರಲ್ಲಿ ಏನೂ ವ್ಯತ್ಯಾಸ ಇಲ್ಲ. ನಾವೂ ಒಪ್ಪಿಕೊಳ್ಳುತ್ತಿದ್ದೇವೆ. ನಾವು ಕಟ್ಟಲಿಕ್ಕೂ ತಯಾರು ಇದ್ದೇವೆ. ಅಥವಾ ಅವರು ಮೀಟರ್ ಅಳವಡಿಸುವುದು ಇದ್ದರೆ ಒಂದು ಯೂನಿಟ್‌ಗೆ 1.45 ಪೈಸೆಯಷ್ಟು ಧಾರಣೆ ಮಾಡಿದರೆ, ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ.

1.30 ಪಿ.ಎಂ.

ತಕ್ಷಣ ಆ 300 ರೂಪಾಯಿ ಮಾತ್ರ ರೈತರಿಂದ ವಸೂಲು ಮಾಡಬೇಕು ಯಾರಿಗೆ 500 ರೂ ಎಂದು ನೋಟಿಸ್ ಕೊಟ್ಟಿದ್ದಾರೋ ಅಷ್ಟು ವಸೂಲು ಮಾಡಬಾರದು. ಆ ರೀತಿ ಸರ್ಕಾರ ಆದೇಶ ಮಾಡಬೇಕು. ಮತ್ತು ಯಾರಿಂದ ಬಲಾತ್ಕಾರವಾಗಿ 500 ರೂ ವಸೂಲು ಮಾಡಿದ್ದಾರೆ ಅದರಲ್ಲಿ 200 ರೂಗಳನ್ನು ಮುಂದಿನ ಬಿಲ್‌ಮೊತ್ತಕ್ಕೆ ಅಡ್ಜಸ್ಟ್ ಮಾಡಬೇಕು. ಈ ಬಗ್ಗೆ ಜಿಲ್ಲಾಮಂತ್ರಿಗಳೊಡನೆ ನಾವು ಮಾತನಾಡಿದಾಗ ಆ ರೀತಿ ವಸೂಲು ಮಾಡುವುದಿಲ್ಲವೆಂದು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಎರಡನೆಯದಾಗಿ ನಗರಗಳಲ್ಲಿ ಯಾವುದೇ ಪವರ್ ಕಟ್ ಇಲ್ಲ. ಆದರೆ ಗ್ರಾಮಾಂತರಗಳಲ್ಲಿ ವಿಶೇಷವಾಗಿ ಕಟ್ ಮಾಡುತ್ತಿದ್ದಾರೆ. ಈ ಪೀಕ್ ಸೀಸನ್ ಆದ ಮಾರ್ಚ್, ಏಪ್ರಿಲ್, ಮೇಗಳಲ್ಲಿ ನಮ್ಮ ತೆಂಗು, ಕಾಫಿ, ಅಡಿಕೆ ತೋಟಗಳು ಯಾವುದೇ ಇರಬಹುದು ಅವಕ್ಕೆ ಕರೆಂಟ್ ಕೊಡದಿದ್ದರೆ ನಮಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಕನಿಷ್ಠ ಮಳೆ ಬೀಳುವವರೆಗಾದರೂ ರೈತರಿಗೆ ನಗರದಲ್ಲಿ ಯಾವರೀತಿ ಕೊಡುತ್ತಾರೋ ಅದೇರೀತಿ ಕೊಡಬೇಕು ಮತ್ತು 300 ರೂ ಮಾತ್ರ ವಸೂಲು ಮಾಡುವಂತೆ ತಕ್ಷಣ ಆದೇಶ ಹೊರಡಿಸಬೇಕೆಂದು ಸರ್ಕಾರಕ್ಕೆ ಆಗ್ರಹಮಾಡುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಅಧ್ಯಕ್ಷರೇ, ರಾಜ್ಯದಲ್ಲಿ ನೂರಕ್ಕೆ 75 ಭಾಗ ಜನ ಅವಲಂಬಿಸಿರುವುದು ಕೃಷಿ ಉದ್ಯಮ. ರಾಜ್ಯಕ್ಕೆ ಬೇಕಾದ ಆಹಾರ ಕೊಡುವ ಉದ್ಯಮಕ್ಕೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುವ ರೈತರ ಮೇಲೆ ಅಗಾಧವಾದ ಒಂದು ಪ್ರಹಾರವನ್ನು ವಿದ್ಯುತ್ ಇಲಾಖೆಯ ಮೂಲಕ ಈ ಸರ್ಕಾರ ಮಾಡಿದೆ. ಇತ್ತೀಚೆಗೆ ವಿದ್ಯುತ್ ಇಲಾಖೆಯನ್ನು ಸುಧಾರಣೆ ಮಾಡುತ್ತೇವೆ ಎಂದು ಹೇಳಿದರು ಮುಖ್ಯಮಂತ್ರಿಗಳ ಅಧೀನದಲ್ಲಿರುವ ಈ ಇಲಾಖೆಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟನ್ನು ಕೊಡಲಿಲ್ಲ. ಕಳೆದ ಮೂರು ವರ್ಷಗಳಿಂದ ನಾವು ಪ್ರಸ್ತಾಪ ಮಾಡುತ್ತಲೇ ಬಂದೆವು, ವಿದ್ಯುತ್ ಇಲಾಖೆಯಲ್ಲಿ ಸುಧಾರಣೆ ತನ್ನಿ, ಸಾಕಷ್ಟು ವಿದ್ಯುತ್ ಕೊಡಿ, ಸರ್ಕಾರಕ್ಕೆ ನೌಕರಿ ಕೊಡಲಿಕ್ಕೆ ಸಾಧ್ಯವಿಲ್ಲ ಆದ್ದರಿಂದ ಕೃಷಿಗೆ ಆದ್ಯತೆ ಕೊಡಿ ಎಂದು ಆದರೆ ಏನೇನೂ ಪರಿಣಾಮಗಳು ವ್ಯತ್ಯಾಸಗಳು ವಿದ್ಯುತ್ ಇಲಾಖೆಯಲ್ಲಿ ಆಗಲಿಲ್ಲ. ನೂರಕ್ಕೆ 23 ಭಾಗ ಟ್ರಾನ್ಸ್‌ಮಿಷನ್ ಲಾಸ್ ಆಗುತ್ತಿದೆ ಅಂದರು. ಅದನ್ನು ತಡೆಯುವುದಕ್ಕೆ ಏನು

ಮಾಡಿದಿರಿ ಎಂದು ಕೇಳಿದರೆ ಏನೂ ಇಲ್ಲ. ಕೃಷಿಗೆ ಪುಕ್ಕಟೆ ವಿದ್ಯುತ್ ಕೊಟ್ಟರೆ ಭಾರಿ ನಷ್ಟ ಎಂದು ಬೊಬ್ಬೆ ಹೊಡೆದಿರಿ. ಕೃಷಿಯಿಂದ ಬಂದ ಆಹಾರ ಪದಾರ್ಥವನ್ನು ಇವತ್ತು ಇಡೀ ರಾಜ್ಯದ ಜನ ಹಂಚಿಕೊಳ್ಳುತ್ತಿದ್ದಾರೆ. ಆಹಾರ ಬೆಳೆಯದೇ ಹೋದರೆ ಇಡೀ ರಾಜ್ಯದ ಜನ ಹಾಹಾಕಾರ ಮಾಡಬೇಕಾಗುತ್ತದೆ. ಬೇರೆ ಕಡೆಯಿಂದ ಆಮದು ಮಾಡಿಕೊಳ್ಳುವ ಪರಿಸ್ಥಿತಿ ತಪ್ಪಿಸಿರುವ ರೈತರಿಗೆ ಯಾವ ರೀತಿ ಗಮನ ಕೊಡಬೇಕೋ ಅದನ್ನು ನೀವು ಕೊಡಲಿಲ್ಲ. ರವಾನೇ ನಷ್ಟವನ್ನು ತಪ್ಪಿಸಲಿಲ್ಲ, ಏನೂ ವ್ಯತ್ಯಾಸ ಕಾಣಲಿಲ್ಲ. ಬದಲು ಇನ್ನೂ ಜಾಸ್ತಿಯಾಗಿದೆ. ಕೇವಲ ರವಾನೇ ನಷ್ಟನಲ್ಲ, ವಿದ್ಯುತ್ತನ್ನು ಕದಿಯುತ್ತಿರುವ ಉದ್ದಿಮೆಗಳವರ ಮೇಲೆ ನೇರವಾಗಿ ಕ್ರಮ ನೀವು ತೆಗೆದುಕೊಳ್ಳದೆ, ಕದಿಯುವವರ ಜೊತೆ ನೀವು ಶಾಮೀಲಾಗಿ, ನಿಮ್ಮ ಅಧಿಕಾರಿಗಳಿಂದ, ಉದ್ದಿಮೆಪತಿಗಳಿಂದ ಸಾಕಷ್ಟು ನಷ್ಟವಾಗುತ್ತಿದೆ. ಅದರ ಬಗ್ಗೆ ಏನೂ ಯೋಚನೆ ಮಾಡಲಿಲ್ಲ ನೀವು. ಇವತ್ತು ನಗರಪ್ರದೇಶಗಳಿಗೆ ಅವ್ಯಾಹತವಾಗಿ ಕರೆಂಟ್ ಕೊಡುತ್ತಿದ್ದೀರಿ. ನೂರಕ್ಕೆ 80 ಭಾಗ ರೈತರು ಕೃಷಿ ಅವಲಂಬಿಸಿದ್ದು ರೈತರ ಬಗ್ಗೆ ನಿಮಗೆ ಕಳಕಳಿ ಇಲ್ಲದೆ ರೈತರ ನೇತೃತ್ವದ ಸರ್ಕಾರ ಎಂದು ಬಾಯಲ್ಲಿ ಹೇಳಿದರೂ ಕೂಡ ರೈತರಿಗೆ ಕೇವಲ 3ರಿಂದ 4 ಗಂಟೆ ಕೊಡುತ್ತೀರಿ, ಅದೂ ಕೂಡ ನಿಯಮಿತವಾಗಿ ಕೊಡಲಿಲ್ಲ. ನೀವು ರೈತರಿಗೆ ನಷ್ಟ ಭರ್ತಿ ಮಾಡಿಕೊಡಬೇಕಾಗಿದೆ. ರೈತರಿಗೆ ಅನಿಯಮಿತವಾಗಿ ಪೂರೈಕೆ ಮತ್ತು ಶಕ್ತಿಯುತವಾದ ವಿದ್ಯುತ್ ಕೊಡದೇ ಇರುವುದರಿಂದ ರೈತರ ಪಂಪ್‌ಸೆಟ್‌ಗಳು ಆಗಾಗ ಸುಟ್ಟುಹೋಗುತ್ತಿರುವುದು, ಸಾಕಷ್ಟು ನಷ್ಟ ನಾವು ಅನುಭವಿಸುತ್ತಿದ್ದೇವೆ. 6 ಘಂಟೆ ಕೊಡುತ್ತೇವೆಂದರೆ ನಿಯಮಿತವಾಗಿ 6 ಗಂಟೆ ವಿದ್ಯುತ್ ನಮಗೆ ಕೊಡಿ. ಅದನ್ನೂ ಕೊಡಲಿಲ್ಲ. ಕೇಳಿದರೆ ಇವತ್ತು ಮಹಾರಾಷ್ಟ್ರದಿಂದ ಕರೆಂಟ್ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳುತ್ತೀರಿ. ಸರ್ಕಾರಕ್ಕೆ ನಾನು ಕೇಳುತ್ತೇನೆ, ಅಧ್ಯಕ್ಷರೇ, ನಿಮಗೇನಾದರೂ ಯೋಜನೆ ಇದೆಯೇ, ನಿಮ್ಮ ಗ್ರಿಡ್ ಕೆಪ್ಯಾಸಿಟಿ ಏನು? ಗ್ರಿಡ್‌ನ ಕೆಪ್ಯಾಸಿಟಿ ಜಾಸ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು? ಬೇಕಾದಾಗ ಕಿತ್ತುಹಾಕಿಬಿಡುತ್ತೀರಿ, ಯಾವಾಗ ಕತ್ತಲಾಗುತ್ತದೆ, ಯಾವಾಗ ವಿದ್ಯುತ್ ಬರುತ್ತದೆ ನಮ್ಮ ಹಣೆಬರಹ ಗಟ್ಟಿ ಇದ್ದರೆ ಮಾತ್ರ, ರೈತರು ಈಗ ಮನೆಯಲ್ಲಿ ಮಲಗುವುದಿಲ್ಲ. ರಾತ್ರಿ ಹಗಲು ಜಮೀನಿನಲ್ಲಿ ಹೋಗಿ ಮಲಗುವಂತಹ ಸ್ಥಿತಿ ಇವತ್ತು ಬಂದಿದೆ. ಏಕೆಂದರೆ ಯಾವಾಗ ಕರೆಂಟ್ ಹೋಗುತ್ತದೆಯೋ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಚಾತಕಪಕ್ಷಿಯಂತೆ ದೇವರ ಮೇಲೆ ಭಾರ ಹಾಕಿಕೊಂಡು ಪಂಪ್‌ಹೌಸ್‌ನ ಶೆಡ್‌ನಲ್ಲಿ ಮಲಗುವಂತಹ ಪರಿಸ್ಥಿತಿ, ರೈತರನ್ನು ಭಿಕಾರಿ ಮಾಡಿದ್ದೀರಿ ನೀವು. ರೈತರನ್ನು ಮನೆ ಬಿಡಿಸಿದ್ದೀರಿ. ಇಂತಹ ಅನಾಹುತ ಮಾಡಿದ್ದೀರಿ. 750 ಕೋಟಿ ರೂಗಳನ್ನು ಕೆಪಿಸಿಗೆ ನೀವು ಕೊಡುವುದಿದೆ. ಏಕೆ ಕೊಡುತ್ತಾ ಇಲ್ಲ? ಅವರು ಹೇಳುತ್ತಾರೆ, ಕಲ್ಲಿದ್ದಲು ಕೊಂಡುಕೊಳ್ಳುವುದಕ್ಕೆ ನಮಗೆ ಹಣ ಇಲ್ಲ, ಇವರು ಕಟ್ಟುತ್ತಾ ಇಲ್ಲ ಎಂದು ತಾವು ಹಣ ಎಲ್ಲಾ ವಸೂಲು ಮಾಡುತ್ತಿದ್ದೀರಿ ಅದೆಲ್ಲಿ ಹೋಗುತ್ತದೆ ಎಂದು. ನಮಗೂ ಗೊತ್ತಿಲ್ಲ. ನನ್ನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅರ್ಜಿ ಹಾಕಿಕೊಂಡವರಿಗೆ 6 ವರ್ಷಗಳಿಂದ ಕರೆಂಟ್

ಕೊಡಲಿಲ್ಲ. ಹಣ ಕಟ್ಟಲು ತಯಾರಿದ್ದಾರೆ, ಕೊಡಲಿಲ್ಲ. ಕೇಳಿದರೆ ಹೇಳುತ್ತಾರೆ, ನಮಗೆ ವೈರ್‌ನ ತೊಂದರೆಯುಂಟು ಕಂಬದ ತೊಂದರೆಯುಂಟು. ಸಂಗ್ರಹವಾಗಿರುವ ಹಣವನ್ನು ನೀವು ಕೆಪಿಸಿಗೂ ಕಟ್ಟುತ್ತಾ ಇಲ್ಲ, ವೈರ್‌ನವರಿಗೂ ಕಟ್ಟುತಾ ಇಲ್ಲ, ಹಾಗಾದರೆ ಆ ಹಣ ಎಲ್ಲಿಗೆ ಹೋಯಿತು? ಆ ವಿದ್ಯುತ್ ಇಲಾಖೆಯನ್ನು ಮುಚ್ಚಿಬಿಡಿ. ಗೌರವ ತರುವಂತಹ ಇಲಾಖೆಯಲ್ಲ ಅದು. ನಮ್ಮ ವಿನಂತಿ, ಇಲಾಖೆಯನ್ನು ಮುಚ್ಚಿ ಬೇರೆ ಖಾಸಗಿಯವರಿಗಾದರೂ ವಹಿಸಿಕೊಡಬೇಕು. ಇಲ್ಲದಿದ್ದರೆ ಇದರಲ್ಲಿ ಅರ್ಥ ಏನಾದರೂ ಉಳಿದಿದೆಯಾ ಹೇಳಿ? 300 ರೂಪಾಯಿ ಇದ್ದುದು 500 ರೂಪಾಯಿ ವಸೂಲು ಮಾಡುತ್ತೀರಿ, ಏನು ದರ್ಬಾರು ನಿಮ್ಮದು? ನಮ್ಮ ಬೇಜವಾಬ್ದಾರಿಯಿಂದ, ನಿಮ್ಮ ಹೊಣೆಗೇಡಿ ಅಧಿಕಾರಿಗಳಿಂದಾಗಿ ಇವತ್ತು ವಿದ್ಯುತ್ ಇಲಾಖೆ ನಷ್ಟ ಅನುಭವಿಸುತ್ತಿದೆಯೇ ಹೊರತು ಬಳಕೆದಾರರ ಮೇಲೆ ಏಕೆ ಪದೇಪದೇ ಹೇರುತ್ತೀರಿ ಇದನ್ನು? ವಿದ್ಯುತ್‌ರೇಟ್ ಜಾಸ್ತಿ ಆಯಿತು ಎಂದು ನಾವು ಕೈಬಿಟ್ಟರೆ, ಬೆಳೆಯುವುದೇ ಇಲ್ಲ ಅಂದರೆ ಈ ರಾಜ್ಯದ ಆರ್ಥಿಕಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟುತ್ತದೆ? ಬೇರೆ ಯಾವ ದೂರದೃಷ್ಟಿತನ ಇಲ್ಲದೆ, ಸರ್ಕಾರ ಗಮನಹರಿಸದೇ ಬೇಕಾಬಿಟ್ಟಿ ಯಾವತ್ತೆಂದರೆ ಆವತ್ತು ಕರೆಂಟ್‌ಬಿಲ್ ಜಾಸ್ತಿ ಮಾಡುತ್ತೀರಿ. ಇಲ್ಲದೇ ಇರುವ ಕರೆಂಟ್‌ಗೆ ನಾವು ದುಡ್ಡು ಕೊಡಬೇಕೇ? ಯಾವ ನ್ಯಾಯ ಇದೆ ಹೇಳಿ? ಇದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ತತಕ್ಷಣ 500 ರೂ ತೆಗೆದುಹಾಕಬೇಕು, ವಿದ್ಯುತ್ ಇಲಾಖೆಗೆ ಕಾಯಕಲ್ಪ ಕೊಡುವ ದೃಷ್ಟಿಯಿಂದ ಶೀಘ್ರವಾಗಿ ಯೋಚನೆ ಮಾಡಬೇಕು. ರೈತರು ಉಪಯೋಗಿಸುವ ವಿದ್ಯುತ್ತನ್ನು ನಿಯಮಿತವಾಗಿ ಸರಬರಾಜು ಮಾಡಲೇಬೇಕು. ಇದನ್ನು ಸರ್ಕಾರ ಜವಾಬ್ದಾರಿ ಎಂದು ತೆಗೆದುಕೊಳ್ಳಬೇಕು, ಇದನ್ನು ಮಾಡದೇಹೋದರೆ ಇಡೀ ರಾಜ್ಯದ ರೈತರು ಕ್ಷೋಭೆಗೆ ಒಳಗಾಗುವಂತಹ ಪರಿಸ್ಥಿತಿ ಇದೆ. ಇದನ್ನು ತಡೆಗಟ್ಟಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಉಪಾಧ್ಯಕ್ಷರೇ, ಕಳೆದ ಬಾರಿ ವಿದ್ಯುತ್‌ಗೆ ಹೆಚ್ಚಿಗೆ ದರ ಹಾಕಿದಾಗ ಮುಖ್ಯಮಂತ್ರಿಗಳು ಇಲ್ಲಿ ನಿಂತು ನಮಗೆ ತಮಾಷೆ ಮಾಡಿದರು, ನಿಮಗೆ 24 ಗಂಟೆ ವಿದ್ಯುತ್ ಕೊಡುತ್ತೇವೆ ಎಂದು, ರೈತರಿಗೆ ಪುಗಸಟ್ಟೆ ವಿದ್ಯುತ್ ಕೊಟ್ಟಿದ್ದರಿಂದಾಗಿ ಕೆ.ಇ.ಬಿ. ಲಾಸಾಗಿ ಹೋಯಿತು, ರೈತರು ಕೇಳುತ್ತಿದ್ದಾರೆ ನಮಗೆ ವಿದ್ಯುತ್ ಕೊಡಿ, ದುಡ್ಡು ಕೊಡಲು ತಯಾರಿದ್ದೇವೆ ಎಂದು ಹೇಳಿ 1200 ಕೋಟಿ ರೂಗಳ ವಿದ್ಯುತ್ ಹೆಚ್ಚಳವನ್ನು ರಾಜ್ಯದ ಜನರ ಮೇಲೆ ಹೊರಿಸಿದರು. ಆಗ ನಾವೆಲ್ಲಾ ವಿರೋಧಪಕ್ಷದವರು ವಿರೋಧಿಸಿದಾಗ ಇಲ್ಲಿ ಕೂತುಕೊಂಡವರು ಮಾತ್ರ ವಿರೋಧಿಸುತ್ತಾರೆ ರಾಜ್ಯದಲ್ಲಿ ಯಾರೂ ವಿರೋಧಿಸುತ್ತಾ ಇಲ್ಲ ಎಂದು ಹೇಳಿದರು. ನಾನು ಆಗ ನಿಮ್ಮ ಬಿಲ್ ಹೋಗಲಿ ಆಮೇಲೆ ಗೊತ್ತಾಗುತ್ತದೆ ಎಂದು ಹೇಳಿದಾಗ ನಿಮ್ಮ ಮನೆ ಬಿಲ್ ಎಷ್ಟೆಷ್ಟು ಎಂದು ನನಗೇ ಕೇಳಿದರು. ಈ ರೀತಿ ತಮಾಷೆ ಪ್ರಾಮಾಣಿಕತನವಲ್ಲದ ವಿಚಾರಧಾರೆಗಳಿಂದ ಕೆ.ಇ.ಬಿ.ಯನ್ನು ಬೆಳೆಸಿಕೊಂಡು

ಹೋದರು. ರೈತರಿಗೆ 500 ರೂ ತೆರಿಗೆ ಹಾಕಿದ ಮೇಲೆ ಇವರು ವಿದ್ಯುತ್ ಕೊಟ್ಟರೆ? ಕೊಟ್ಟಿಲ್ಲ. ರೈತರು ಇವತ್ತೂ ಹಿಂದೆ ನರಳುತ್ತಿದ್ದಂತೆಯೇ ನರಳುತ್ತಿದ್ದಾರೆ. ಒಂದು ತಿಂಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಎಲ್ಲೆಲ್ಲಿ ರೈತರ ಫ್ಯೂಸ್ ಇದೆ ಅಲ್ಲೆಲ್ಲಾ ವಿದ್ಯುತ್‌ದರ ಪಾವತಿ ಮಾಡಲಿಲ್ಲ ಎಂದು ಕಿತ್ತುಕೊಂಡು ಹೋದರು. ಈಗ ಬೇಸಿಗೆಯಲ್ಲಿ ಯಾವರೀತಿ ರೈತ ನೀರನ್ನು ಬೆಳೆಗೆ ಹರಿಸಬೇಕು. ಇದರ ಬಗ್ಗೆ ದಯವಿಟ್ಟು ಹೇಳಬೇಕು. ಇಷ್ಟೇ ಅಲ್ಲ ಅನಿರ್ದಿಷ್ಟಾವಧಿಯ ಹೊಸರೀತಿಯ ನಿಲುಗಡೆ ಯಾವಾಗ ಎಂದು ಇಲ್ಲ, 15 ದಿವಸಗಳಿಂದ ಮಧ್ಯರಾತ್ರಿ ಒಂದು ಗಂಟೆಗೆ ನಿಲುಗಡೆ ಮಾಡುವುದು ಪರೀಕ್ಷೆ ಬಂತು, 12 ಗಂಟೆತನಕ ಮಕ್ಕಳು ಓದುತ್ತಿರುತ್ತಾರೆ ಒಂದು ಗಂಟೆಗೆ ವಿದ್ಯುತ್ ನಿಲುಗಡೆ ಮಾಡುವುದು ಎರಡೂವರೆ ಗಂಟೆಗೆ ವಿದ್ಯುತ್ ನಿಲ್ಲಿಸುವುದು ಬೆಳಿಗ್ಗೆ 4 ಗಂಟೆಗೆ ನಿಲ್ಲಿಸುವುದು ಕೊನೆಗೆ, ನಗರದವರಿಗೆ ಕೊಡುತ್ತಿದ್ದಾರೆ ಎಂದು ಇವರು ಹೇಳಿದರು, ಇಲ್ಲ ಸ್ವಾಮಿ ಉಡುಪಿ, ಮಂಗಳೂರು ನಗರ ಪರಿಮಿತಿಗಳಲ್ಲೂ 10ರಿಂದ 12 ಗಂಟೆ ನಿಲುಗಡೆ ಮಾಡುವುದು, ಆಮೇಲೆ 2ರಿಂದ 4 ಗಂಟೆವರೆಗೆ ನಿಲುಗಡೆ ಮಾಡುವುದು ನಾವು ಅಧಿಕಾರಿಗಳನ್ನು ಕೇಳಿದರೆ ದೈನಂದಿನ ಲೋಡ್‌ಶೆಡ್ಡಿಂಗ್ ಏನಿದೆ ಅದಲ್ಲದೇ ರಾಮಗುಂಡಂನಲ್ಲಿ ಹಾಳಾಗಿದೆ, ಶಿವಮೊಗ್ಗದಲ್ಲಿ ಹಾಳಾಗಿದೆ, ಮಧ್ಯದಲ್ಲಿ ಹೇಗೆ ಎಲ್ಲಿ ತೆಗೆಯುತ್ತಾರೋ ಎಂಬುದು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಶಾಲಾಮಕ್ಕಳು ಓದುವಾಗ ಬೆಳಿಗ್ಗೆ ಲೈಟಿಲ್ಲ, ರಾತ್ರಿಗೆ, ಲೈಟಿಲ್ಲ ಹಾಗಾದರೆ ಅವರು ಪರೀಕ್ಷೆಯಲ್ಲಿ ಪಾಸಾಗುವುದು ಹೇಗೆ? ಒಂದು ಕಡೆ ಇದು ವಿದ್ಯಾರ್ಥಿಗಳ ಬವಣೆ. ಸಣ್ಣಕೈಗಾರಿಕೆಗಳು ಸಾಕಷ್ಟು ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೆಎಫ್‌ಎಸ್‌ಸಿಯಿಂದ ಮತ್ತು ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಸಾಲ ತೆಗೆದುಕೊಂಡು ಸ್ವತಃ ಉದ್ಯೋಗ ಮಾಡಲು ಸಣ್ಣಕೈಗಾರಿಕೆಗಳನ್ನು ಅಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ಸರ್ಕಾರ ಸಹಾಯಧನ ರೂಪದಲ್ಲಿ ಕೊಟ್ಟರೂ, ಇವತ್ತು ವಿದ್ಯುತ್ ಇಲ್ಲದೆ ಉತ್ಪಾದನೆಯಾಗದೆ ಸಾಲ ಮರುಪಾವತಿ ಮಾಡಲು ಆಗುತ್ತಾ ಇಲ್ಲ. ಸಾಲ ಕೊಟ್ಟ ರಾಷ್ಟ್ರೀಕೃತ ಬ್ಯಾಂಕುಗಳು ಎಲ್ಲಾ ಸಣ್ಣ ಕೈಗಾರಿಕೆಗಳನ್ನು ಜಪ್ತಿ ಮಾಡಲು ಹೊರಟಿದ್ದಾರೆ. ಇವತ್ತು ವಿದ್ಯುತ್ ಇಲಾಖೆಯ ಅವ್ಯವಸ್ಥೆಯಿಂದ ಎಷ್ಟೊಂದು ಸಣ್ಣ ಕೈಗಾರಿಕಾದಾರರು ಜಪ್ತಿಯಾಗುತ್ತಿದ್ದಾರೆ. ಇಷ್ಟು ಅಲ್ಲದೆ ಇವತ್ತು ಮತ್ತೆ ವಿದ್ಯುತ್ ದರ ಜಾಸ್ತಿಮಾಡಿದ್ದೀರಿ, ಇವರು ವಿದ್ಯುತ್‌ಗೆ 1200 ಕೋಟಿ ರೂ.ಗಳ ಹೊಸ ತೆರಿಗೆ ತೆಗೆದುಕೊಂಡಿದ್ದೀರಿ ಅದಕ್ಕೆ ಏನು ಉತ್ತರ ಕೊಡುತ್ತೀರಿ? ಈ ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿಯಲ್ಲಿ ಪರಿಹಾರ ಕೊಡುತ್ತೀರಿ? ಇನ್ನೊಂದು ಕಡೆ ಮೀನುಗಾರಿಕಾ ಉದ್ಯೋಗ ಕೂಡ ಇವತ್ತು ವಿದ್ಯುತ್ ಕಡಿತದಿಂದ ಬಹಳಷ್ಟು ತೊಂದರೆಗೆ ಒಳಗಾಗಿದೆ. ಏಕೆಂದರೆ ಮೀನು ಹಿಡಿದುಕೊಂಡು ಬಂದ ಮೇಲೆ ಐಸ್‌ನವರು ಐಸ್ ಇಲ್ಲ ಎಂದು ಹೇಳುತ್ತಿದ್ದಾರೆ. ವಿದ್ಯುತ್ ಇಲ್ಲದೆ ನಾವು ಯಾವ ರೀತಿ ಶೀತಲ ಮಂಜುಗಡ್ಡೆ ಕೊಡುವುದು ಎಂದು ಹೇಳುತ್ತಾರೆ. ಮಂಜುಗಡ್ಡೆ ಇಲ್ಲದೆ ಇದ್ದರೆ ನಾವು ಮೀನುಗಳನ್ನು ಶೇಖರಣೆ ಮಾಡಲು ಆಗುವುದಿಲ್ಲ. ತಂದತಹ ಮೀನುಗಳನ್ನು ಸಮುದ್ರಕ್ಕೆ ಬಿಸಾಡುವಂತಹ ಪರಿಸ್ಥಿತಿ ಬಂದಿದೆ. ಈ ರೀತಿ ಅವ್ಯವಸ್ಥೆಯ ಆಗರವಾಗಿರತಕ್ಕಂತಹ

ಕೆ.ಇ.ಬಿ.ಯ ಬಗ್ಗೆ ಸರ್ಕಾರದ ನೀತಿ ಏನು ಇದೆ ಎನ್ನುವುದನ್ನು ದಯಮಾಡಿ ಉತ್ತರಿಸಬೇಕು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರಿಸಬೇಕಾಗಿತ್ತು, ಏಕೆಂದರೆ ಅವತ್ತು ನಮ್ಮನ್ನು ಬಹಳ ಹಾಸ್ಯಾಸ್ಪದವಾಗಿ ತೆಗಳಿದ್ದಾರೆ. ಈ ರೀತಿ ತೆರಿಗೆ ವಸೂಲಿ ಮಾಡಿ ರಾಜ್ಯದ ಜನತೆಗೆ ಅನ್ಯಾಯ ಮಾಡುವುದು ಆದರೆ ನಾವು ಇದಕ್ಕೆ ವಿರೋಧವಾಗಿ ಉಗ್ರವಾದ ಹೋರಾಟವನ್ನು ಮಾಡಬೇಕಾಗುತ್ತದೆ.

+ ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಉಪಾಧ್ಯಕ್ಷರೆ, ಪ್ರತಿ ಸಾರಿ ನಾವು ಈ ವಿಷಯವನ್ನು ಚರ್ಚೆ ಮಾಡುತ್ತಲೇ ಇದ್ದೇವೆ. ಆದರೆ ಇದಕ್ಕೆ ಪರಿಹಾರ ಸಿಗಲಿಲ್ಲ. ತುಮಕೂರು, ಚಿತ್ರದುರ್ಗ, ಕೋಲಾರ ಜಿಲ್ಲೆಗಳಲ್ಲಿ ಶೇ.80 ಭಾಗ ಇವತ್ತು ವಿದ್ಯುತ್ ಹಾಗು ನೀರಾವರಿಯನ್ನು ಅವಲಂಬಿಸಿದ್ದಾರೆ. ಇವತ್ತು ರೈತ ಸಂಪೂರ್ಣವಾಗಿ ಬೋರ್‌ವೆಲ್ ನೀರಿನ ಮೂಲಕವೇ ಬೆಳೆಯನ್ನು ತೆಗೆಯಬೇಕು. ಇವತ್ತು ಬೋರ್‌ವೆಲ್ ಮುಖಾಂತರ ನೀರು ತೆಗೆಯಬೇಕಾದರೆ ವಿದ್ಯುತ್ ಬೇಕೇ ಬೇಕು. ಆದರೆ ಇವತ್ತು ರೈತನ ಸ್ಥಿತಿ ಯಾವ ರೀತಿಯಾಗಿದೆ ಎಂದರೆ ಬೆಳೆ ಬೆಳೆಯಲು ಹಾಕಿದ ಬಂಡವಾಳ ಕೂಡ ವಾಪಸ್ಸು ಬರದಂಥ ಪರಿಸ್ಥಿತಿ ಇದೆ. ನಾವು ನಾಚಿಕೆ ಪಡುವಂತಹ ಸಂದರ್ಭ ಇದು ನಾವು ಯಾವುದೇ ಹಳ್ಳಿಗೆ ಹೋದರೂ ರೈತರು ಜನಪ್ರತಿನಿಧಿಗಳ ಮೇಲೆ ಬೀಳುತ್ತಾರೆ, ಅಧಿಕಾರಿಗಳ ಮೇಲೆ ಬೀಳುತ್ತಾರೆ. ಅವರ ಕಷ್ಟವನ್ನು ನೋಡಿದಾಗ ನಮಗೆ ಕಣ್ಣಲ್ಲಿ ನೀರು ಬರುತ್ತದೆ. ಇವತ್ತು ಅಧಿಕಾರಿಗಳು ಎಲ್ಲಾ ಕಡೆ ಹೋಗಿ 6 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇವತ್ತು ಸಭೆಯಲ್ಲಿ ಸಚಿವರಿದ್ದಾರೆ ಅವರು ಧೈರ್ಯದಿಂದ ಹೇಳಲಿ, ಇವತ್ತು ರೈತರಿಗೆ 6 ಗಂಟೆಗಳ ಕಾಲ ಸತತವಾಗಿ ಬೋರ್‌ವೆಲ್ ನಡೆಸಲು ವಿದ್ಯುತ್ ಕೊಡುತ್ತೇವೆ ಎಂದು. 6 ಗಂಟೆಗಳಲ್ಲಿ 60 ಸಾರಿ ಟ್ರಿಪ್ ಆಗುತ್ತದೆ. ಬಹುಶಃ ಇವತ್ತು ಇಲ್ಲಿ ಮಾತನಾಡಿರತಕ್ಕ ಎಲ್ಲಾ ಸದಸ್ಯರ ಕ್ಷೇತ್ರಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ಇದನ್ನು ನೋಡಿ ನಮಗೆಲ್ಲಾ ಬಹಳ ದುಃಖವಾಗುತ್ತದೆ. ದಯಮಾಡಿ ಸರ್ಕಾರ ಒಂದು ನಿರ್ಧಿಷ್ಟವಾದ ನಿಲುವನ್ನು ತೆಗೆದುಕೊಂಡು ರೈತರಿಗೆ ಆಗಿರತಕ್ಕ ಅನ್ಯಾಯದಲ್ಲಿ, ಸಂಪೂರ್ಣವಾಗಿ ಅಲ್ಲದಿದ್ದರೂ ಅಸಂಪೂರ್ಣವಾಗಿ ಪರಿಹಾರ ಕೊಡುತ್ತೀರಿ ಎನ್ನುವ ನಂಬಿಕೆಯೂ ನಮಗೆ ಇಲ್ಲ, ಅದರಲ್ಲಿ ಸ್ವಲ್ಪಮಟ್ಟಿಗಾದರೂ ಪರಿಹಾರ ಕೊಡುವ ಚಿಂತನೆ ಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ. ಒಂದು ಉದಾಹರಣೆ ಹೇಳಬೇಕಾದರೆ ಹೆಬ್ಬೂರು ಎಂಬ ಸಬ್ ಸ್ಟೇಶನ್‌ನಲ್ಲಿ ಅಲ್ಲಿ ಇಂಜನಿಯರ್ ಇಲ್ಲ, ಯಾವುದೋ ಊರಿನಿಂದ ಬರುತ್ತಾರೆ ಎಂದು ಹೇಳುತ್ತಾರೆ. ಅವರಿಗೆ ಕ್ವಾಟರ್ಸ್ ಮಾಡಿಕೊಟ್ಟಿದ್ದೀರಿ ಆದರೂ ಅವರು ಅಲ್ಲಿ ಇರುವುದಿಲ್ಲ. ರಾತ್ರಿ ವಿದ್ಯುತ್ ಟ್ರಿಪ್‌ಆದರೆ ಅಲ್ಲಿ ಹೋಗಿ ಕೇಳಿದರೆ ನಮಗೆ ಯಾರಿಗೂ ಗೊತ್ತಿಲ್ಲ ಎಂದು ಹೇಳುತ್ತಾರೆ. ರೈತರು ಸ್ಟೇಶನ್ನಿಗೆ ಹೋಗಿ ಇಂಜನಿಯರನ್ನು ಕೇಳಿದರೆ, ಅವರು ಇಲ್ಲ ನಾಳೆ ಬರುತ್ತಾರೆ, ಇಲ್ಲ ನಾಡಿದ್ದು ಬರುತ್ತಾರೆ ಎಂದು ಅಲ್ಲಿ ಇದ್ದವರು ಹೇಳುತ್ತಾರೆ. ಆದ್ದರಿಂದ ಇಂತಹ ಸ್ಟೇಶನ್‌ಗಳು ಏನು ಇವೆ ಇವುಗಳನ್ನು ಸರಿಯಾಗಿ

ಸೂಪರ್‌ಸೈಸ್ ಮಾಡುವಂತಹ ಅಧಿಕಾರಿಗಳ ಮೇಲೆಯೂ ನೀವು ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೈತರು ರೊಚ್ಚಿಗೇಳುತ್ತಾರೆ, ಆಗ ನಿಮಗೆ ಅವರನ್ನು ಎದುರಿಸಲು ಆಗುವುದಿಲ್ಲ. ಇವತ್ತು ನಾವು ಯಾವುದೇ ಹಳ್ಳಿಗೆ ಹೋದರೂ ಅಲ್ಲಿಯ ರೈತರಿಗೆ ಸರಿಯಾದ ಉತ್ತರ ಕೊಡಲು ನಮಗೆ ಆಗುತ್ತಾ ಇಲ್ಲ ಅಂತಹ ಸ್ಥಿತಿಗೆ ನಾವು ತಲುಪಿದ್ದೇವೆ. ರೈತರನ್ನು ರೊಚ್ಚಿಗೆಬ್ಬಿಸಿ ಸರ್ಕಾರ ಇಕ್ಕಟಿನಲ್ಲಿ ಸಿಕ್ಕಿಹಾಕಿಕೊಳ್ಳದಂತೆ ಪರಿಹಾರ ದೊರಕಿಸಿಕೊಂಡು ಪ್ರಯತ್ನ ಮಾಡಬೇಕು. ನೀವು ರೈತರಿಗೆ ಹೇಳಿ ಈ ರೀತಿಯ ಸಮಸ್ಯೆಗಳು ಇವೆ, ಅದಕ್ಕೆ ನಾವು ಈ ರೀತಿ ಮಾಡುತ್ತೇವೆ ಎನ್ನುವುದನ್ನಾದರೂ ನೀವು ಹೇಳುವುದಿಲ್ಲ. ಸ್ಥಿತಿ ಬಹಳ ಹದಗೆಡುವುದಕ್ಕಿಂತ ಮುಂಚೆ ಸರ್ಕಾರ ಎಚ್ಚೆತ್ತು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

+ ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಉಪಾಧ್ಯಕ್ಷರೆ, ಕೋಲಾರ ಮತ್ತು ನಮ್ಮ ಇತರ ಬಯಲು ಸೀಮೆ ಪ್ರದೇಶದಲ್ಲಿಯ ರೈತರು ನೇರವಾಗಿ ವಿದ್ಯುತ್ ನೀರಾವರಿ ವ್ಯವಸ್ಥೆಯನ್ನು ಅವಲಂಬಿಸಿದವರು. ಇವತ್ತು ಅವರ ಪರಿಸ್ಥಿತಿ ಹೇಗಿದೆ ಎಂದರೆ ಬಹುಶಃ ಹಿಂದೆ ಯಾವ ಕಾಲದಲ್ಲಿಯೂ ಈ ಸ್ಥಿತಿ ಅವರಿಗೆ ಬಂದಿಲ್ಲ. ಕಳೆದ 15 ದಿವಸಗಳಿಂದ ಕನಿಷ್ಟ 2 ಗಂಟೆಗಳ ಕಾಲ ವಿದ್ಯುತ್ ಅವರಿಗೆ ದೊರೆಯುತ್ತಾ ಇಲ್ಲ. ಇವತ್ತು ಸಂಪೂರ್ಣವಾಗಿ ರೈತರು ಕಂಗಾಲಾಗಿದ್ದಾರೆ. ಅವರ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ರೈತರು ಇಂತಹ ಶೆಡ್ಯುಲ್ಡ್ ಪವರ್ ಸಪ್ಲೈಯನ್ನು ನಾವು ನೋಡೇ ಇಲ್ಲ ಎಂದು ಹೇಳುತ್ತಿದ್ದಾರೆ. ಶೆಡ್ಯೂಲ್ಡ್ ಎನ್ನತಕ್ಕದನ್ನು ಮರತೇ ಹೋಗಿದ್ದಾರೆ. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶೆಡ್ಯೂಲ್‌ನ್ನು ತೆಗೆದು ಹಾಕಿದ್ದಾರೆ. ಕೆ.ಇ.ಬಿ.ಮೊನ್ನೆ ಒಂದು ಪ್ರಕಟಣೆ ಹೊರಡಿಸಿದೆ, ಅದು ಅರ್ಬನ್ ಏರಿಯಾಕ್ಕೆ ಶೆಡ್ಯೂಲ್ ಫಿಕ್ಸ್ ಮಾಡಿದ್ದಾರೆ, ಗ್ರಾಮಾಂತರ ಪ್ರದೇಶಗಳಲ್ಲಿ ಶೆಡ್ಯೂಲ್ ಫಿಕ್ಸ್ ಮಾಡೇ ಇಲ್ಲ. ಇದರ ಅರ್ಥ ಎಲ್ಲಿ ಪವರ್ ಸಿಗುತ್ತದೆ ಅಲ್ಲಿಯ ರೈತರು ಬೆಳೆಯಬೇಕು, ಎಲ್ಲಿ ಪವರ್ ಸಿಗುವುದಿಲ್ಲ ಅಲ್ಲಿಯ ರೈತರು ಸಾಯಬೇಕು ಎನ್ನುವುದು ಕೆ.ಇ.ಬಿ.ಯವರು ನಿರ್ಧಾರ ತೆಗೆದುಕೊಂಡಿದ್ದಾರೆ. ಅಲ್ಲದೆ ವಿದ್ಯುತ್ ದರವನ್ನು ಏರಿಕೆ ಮಾಡಿದ್ದೀರಿ. ಕನಿಷ್ಠ ಒಂದು ಸಮಯವನ್ನು ನಿಗದಿ ಮಾಡಿ ಆ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡದಿದ್ದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ ಎನ್ನುವುದನ್ನು ಸರ್ಕಾರ ಇಷ್ಟು ನಿರ್ಲಕ್ಷ್ಯವಾಗಿ ತೆಗೆದುಕೊಳ್ಳುತ್ತದೆ ಎನ್ನುವುದನ್ನು ನಾವು ಹಿಂದೆಂದೂ ಕಂಡಿಲ್ಲ, ಪರಿಸ್ಥಿತಿ ಬಹಳ ಹದಗೆಟ್ಟಿದೆ. ಇವತ್ತು ಕೋಲಾರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಎಲ್ಲಿ ನೋಡಿದರೂ ರೈತರು ಕಂಗಾಲಾಗಿದ್ದಾರೆ. ಇಲ್ಲಿ ಸರ್ಕಾರ ಇದೆಯಾ, ಇದನ್ನು ಕೇಳುವವರು ಯಾರಾದರೂ ಇದ್ದಾರೆಯೇ, ವಿದ್ಯುತ್ ಮಂಡಳಿಯವರನ್ನು ಯಾರಾದರೂ ಕೇಳುವವರು ಇದ್ದಾರೆಯೇ ಎಂದು ಕೇಳುವಂತಹ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಒಂದು ಸೂಕ್ತ ಕಾಲಕ್ಕೆ ಮಳೆ ಬಾರದೆ ಹಿಂಗಾರು, ಮುಂಗಾರು ಬೆಳೆಗಳು ನಾಶವಾಗಿ ರೈತರು ಸಾಯುತ್ತಿದ್ದಾರೆ, ಸ್ವಲ್ಪ ನಾಲ್ಕುನೂರು, ಐದು ನೂರು ಅಡಿಯಲ್ಲಿರುವ ನೀರನ್ನು ಎತ್ತಿ

ಒಂದು ಎಕರೆ ಎರಡು ಎಕ್ಕರೆಯಷ್ಟು ಬೆಳೆಯನ್ನು ಇಟ್ಟುಕೊಂಡಿರುವಂತಹ ತೋಟವನ್ನು ನೋಡಿದರೆ ರೈತನ ಹೊಟ್ಟೆ ಉರಿಯುತ್ತಿದೆ. ವಿದ್ಯುತ್ ಮಂಡಳಿಗೆ ಮನವಿ ಕೊಟ್ಟು, ಧರಣಿ ಮಾಡಿದರೂ ಕೂಡ ಯಾರು ಇದರ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾ ಇಲ್ಲ. ಅಲ್ಲಿ ಇರತಕ್ಕ ಸ್ಥಳೀಯ ಅಧಿಕಾರಿಗಳು ಹೇಳುತ್ತಾರೆ ಮೇಲಿನ ಕೆ.ಇ.ಬಿ.ಯವರು ಆಜ್ಞೆ ಮಾಡಿದ್ದಾರೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ವಿದ್ಯುತ್‌ನಲ್ಲಿ ಕಡಿತ ಮಾಡಿದ್ದಾರೆ ನಾವು ಏನು ಮಾಡಲು ಸಾಧ್ಯ ಎನ್ನುತ್ತಾರೆ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಕನಿಷ್ಟ 10 ಗಂಟೆಗಳ ಕಾಲ ವಿದ್ಯುತ್ ಕೊಡಬೇಕು ಎಂದು. ಕನಿಷ್ಟ ಮಾರ್ಚ್, ಎಪ್ರಿಲ್ ಮತ್ತು ಮೇ-ಮೂರು ತಿಂಗಳುಗಳಲ್ಲಾದರೂ ವಿದ್ಯುತ್ ಕೊಡದೇ ಹೋದರೆ ರೈತರನ್ನು ಇವರೇ ಕೊಲೆ ಮಾಡಿದಂತೆ ಆಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ರೈತರು ಸೋತು ಸುಣ್ಣವಾಗಿದ್ದಾರೆ, ಅವರಿಗೆ ಮತ್ತೆ ಅದೇ ಪರಿಸ್ಥಿತಿ ಬರುವಂತಹ ಅವಕಾಶ ಮಾಡಿಕೊಡಬೇಡಿ. ಹಿಂದೆ ಸರ್ಕಾರ ಇಂತಹ ಸಮಯದಲ್ಲಿ ಹೈಟೆನ್‌ಷನ್ ಮತ್ತು ಲೋ ಟೆನ್‌ಷನ್‌ಗಳಿಗೆ ಪವರ್‌ಕಟ್ ಮಾಡಿ ರೈತರಿಗೆ ಕೊಟ್ಟಂತಹ ನಿದರ್ಶನಗಳು ಇವೆ. ಇವತ್ತು ಕೆ.ಇ.ಬಿ.ಯವರು ಒಂದು ಘೋಷಣೆಯನ್ನು ಮಾಡಿದ್ದಾರೆ, ಎಂತಹ ಸಂದರ್ಭದಲ್ಲಿಯೂ ನಾವು ಅರ್ಬನ್ ಏರಿಯಾಗಳಿಗೆ ಮತ್ತು ಕೈಗಾರಿಕೆಗಳಿಗೆ ವಿದ್ಯುತ್ ಕಡಿತ ಮಾಡುವುದಿಲ್ಲ ಎಂದು. ರೈತರಿಗೆ ಒದಗಿರುವ ಇಂತಹ ಪರಿಸ್ಥಿತಿಯಲ್ಲಿ ಕನಿಷ್ಟ ಬೇರೆ ವರ್ಗಗಳಿಗೆ ವಿದ್ಯುತ್ ಕಡಿತ ಮಾಡಿ ರೈತರಿಗೆ ಕೊಡದೇ ಹೋದರೆ ಖಂಡಿತವಾಗಿ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಪರಿಸ್ಥಿತಿ ಹೀಗಿದೆ. ಇನ್ನು 15 ದಿನಗಳವರೆಗೆ ಇದೇ ಪರಿಸ್ಥಿತಿ ಮುಂದುವರೆದರೆ ರೈತರು ಕೆ.ಇ.ಬಿ.ಯ ಮೇಲೆ ಧಾಳಿ ಮಾಡುವುದರಲ್ಲಿ ಸಂಶಯವೇ ಇಲ್ಲ ಎಂದು ಸರ್ಕಾರವನ್ನು ಎಚ್ಚರಿಕೆ ಮಾಡುತ್ತಿದ್ದೇನೆ. ಕನಿಷ್ಟ 10 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಬೇಕು ಎಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ): ಮಾನ್ಯ ಉಪಾಧ್ಯಕ್ಷರೆ, ಕೋಲಾರ, ತುಮಕೂರು, ಬೆಂಗಳೂರು ರೂರಲ್ ಭಾಗದಲ್ಲಿ ವಿದ್ಯುತ್ ಅಷ್ಟೋ ಇಷ್ಟೋ ಇರುತ್ತಾ ಇದ್ದದ್ದು ಈಗ ಅದೂ ನಿಂತು ಹೋಗಿದೆ. ಎರಡು ಗಂಟೆ ಕಾಲ ಕೂಡ ಬರುವುದಿಲ್ಲ. 15 ದಿನಗಳಲ್ಲಿ ಒಮ್ಮೆ ಬರುತ್ತದೆ ಅದು ಕಣ್ಣು ಮುಚ್ಚಿ ತೆಗೆಯುವುದರಲ್ಲಿ ಹೋಗಿ ಬಿಡುತ್ತದೆ. ಹಳ್ಳಿಗಳಲ್ಲಿ ಕುಡಿಯುವ ನೀರಿಗೂ ಕೂಡ ಸಮಸ್ಯೆಯಾಗಿದೆ. ಕುಡಿಯುವ ನೀರಿಗಾಗಿ ಕೈ ಪಂಪ್‌ಗಳನ್ನು ಹಾಕಿದ್ದೇವೆ, ಅದು 180 ಅಡಿ ಮಾತ್ರ ಅದರ ಶಕ್ತಿ ಇದೆ. ಇವತ್ತು ಸುಮಾರು ಏಳುನೂರರಿಂದ ಎಂಟುನೂರು ಅಡಿ ಕೆಳಗೆ ಹೋಗಿದೆ. ಆದ್ದರಿಂದ ಕುಡಿಯುವ ನೀರೂ ಕೂಡ ಇವತ್ತು ಸಮಸ್ಯೆಯಾಗಿದೆ. ಸರ್ಕಾರದವರು ಹೇಳುತ್ತಿದ್ದಾರೆ ನಿಮಗೆ 14 ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆ ಎಂದು. ಆದರೆ ಈಗ ಎರಡು ಗಂಟೆಗಳೂ ಕೂಡ ಕರೆಂಟ್ ಬರುತ್ತಾ ಇಲ್ಲ. ನಮಗೆ ಕನಿಷ್ಟ 8 ರಿಂದ 10 ಗಂಟೆಯವರೆಗೆ ವಿದ್ಯುತ್ ಕೊಡಬೇಕು ಎಂದು ಹೇಳುತ್ತೇನೆ. ಎರಡನೆಯದಾಗಿ ಬಹಳ

ಮುಖ್ಯವಾದದ್ದು ಎಂದರೆ ಕಪ್ಪು ಮತ್ತು ಬೂದು ಎನ್ನತಕ್ಕ ಏರಿಯಾವನ್ನು ತಾಲ್ಲೂಕವಾರು ಮಾಡಿದ್ದಾರೆ. ಇವತ್ತು ಬಿಳಿ ಏರಿಯಾದಲ್ಲಿ ಇರುವ ರೈತ ಪಂಪ್‌ಸೆಟ್ ಕೇಳಿದರೆ ಅದಕ್ಕೆ ಎಷ್ಟೇ ಖರ್ಚಾದರೂ ಕೆ.ಇ.ಬಿ. ತುಂಬಿ ಅವನಿಗೆ ಕಂಬ, ಲೈನ್ ಎಲ್ಲಾ ಹಾಕಿ ಕೊಡುತ್ತಾರೆ. ಕಪ್ಪು ಮತ್ತು ಬೂದು ಎಂದು ಎಲ್ಲಿ ಡಿಕ್ಲೇರ್ ಮಾಡಿದ್ದಾರೆ ಆ ಜಾಗದಲ್ಲಿ ಎಲ್ಲಾ ಹಣವನ್ನೂ ರೈತರೇ ಕಟ್ಟಬೇಕಾಗಿದೆ. ಇವೊತ್ತು ನೀವು ಮುನ್ನೂರು ರೂಪಾಯಿಗಳಷ್ಟು ಹಣ ಏನು ವಿಧಿಸಿದ್ದೀರಿ, ಇದನ್ನು ರೈತರು ಕಟ್ಟುವುದಕ್ಕೆ ಹಿಂಜರಿಯುವುದಿಲ್ಲ. ಆದರೆ, ಇದಕ್ಕೆ ನಬಾರ್ಡ್‌ನಿಂದ ರೀ-ಫೈನಾನ್ಸ್ ಇಲ್ಲ ಎನ್ನುವ ಒಂದೇ ಕಾರಣದಿಂದ ಇದನ್ನು ರೈತರ ಮೇಲೆ ಹೇರಬಾರದು. ಇದು ಬಹಳ ಮುಖ್ಯ. ಇವೊತ್ತು ಆರು ತಿಂಗಳುಗಳ ಕಾಲ ಒಂದು ಬೋರ್‌ವೆಲ್‌ನಲ್ಲಿ ನೀರಿದ್ದರೆ, ಏಳನೇ ತಿಂಗಳಿನಿಂದ ಆ ಬೋರ್‌ವೆಲ್‌ನಲ್ಲಿ ನೀರು ಬತ್ತಿ ಹೋಗುತ್ತದೆ, ಆಗ ನಾವು ಮತ್ತೆ ಇನ್ನೊಂದು ಬೋರ್‌ವೆಲ್ ಅನ್ನು ಹಾಕಬೇಕಾಗುತ್ತದೆ. ಅಷ್ಟೊಂದು ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದುದರಿಂದ, ಈಗಾಗಲೇ ಕಪ್ಪು ಮತ್ತು ಬೂದು ಪ್ರದೇಶವೆಂದು ಏನು ಘೋಷಿಸಿದ್ದೀರಿ, ಅದನ್ನು ಈ ತಕ್ಷಣವೇ ತೆಗೆಯಬೇಕು ಮತ್ತು ಕೆ.ಇ.ಬಿ.ಯವರು ರೀ-ಫೈನಾನ್ಸ್‌ಗೋಸ್ಕರ ರೈತರ ಮೂಲಕ ಹಣ ವಸೂಲು ಮಾಡುತ್ತೇವೆಂದು ಏನು ಹೇಳಿದ್ದಾರೆ ಅದನ್ನೂ ಕೂಡ ತೆಗೆದು ಹಾಕಿ, ಸರ್ಕಾರ ಅಥವಾ ಕೆ.ಇ.ಬಿ.ಮೂಲಕವೇ ಈ ಹಣ ಕಟ್ಟಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತಾ, ಇವೊತ್ತು ವಿದ್ಯುತ್ ಸರಬರಾಜು ಮಾಡುವುದಾದರೆ ಮಧ್ಯದಲ್ಲಿ ಯಾವುದೇ ರೀತಿ ಅಡಚಣೆಯಾಗದಂತೆ ನಿಗದಿತವಾಗಿ ಕೊಡಬೇಕೆಂದೂ ಸಹ ತಮ್ಮ ಮೂಲಕ ಪ್ರಾರ್ಥಿಸಿಕೊಂಡು ಮತ್ತೊಮ್ಮೆ ಕಪ್ಪು ಮತ್ತು ಬೂದು ಪ್ರದೇಶವೆಂದು ಘೋಷಿಸಿರುವುದನ್ನು ತೆಗೆಯಬೇಕು ಮತ್ತು ಹಣವನ್ನು ಸರ್ಕಾರವಾಗಲೀ, ಕೆ.ಇ.ಬಿ.ಯಾಗಲೀ ಕಟ್ಟಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

+ ಶ್ರೀ ಆರ್.ಶ್ರೀನಿವಾಸ್ (ಮುಳಬಾಗಿಲು): ಸನ್ಮಾನ್ಯ ಉಪಾಧ್ಯಕ್ಷರೆ, ಈ ಸಮಸ್ಯೆ ಪಕ್ಷಾತೀತವಾಗಿದ್ದು, ಇದು ಕರ್ನಾಟಕ ರಾಜ್ಯದ ಎಲ್ಲಾ ರೈತರಿಗೂ ಅನ್ವಯಿಸುವಂಥ ಗಂಭೀರ ಸಮಸ್ಯೆಯಾಗಿರುವುದರಿಂದ ಇವೊತ್ತು ಇದರ ಫಲಿತಾಂಶವನ್ನು ನಾವುಗಳೆಲ್ಲರೂ ಕೂಡ ಈಗಾಗಲೇ ಅನುಭವಿಸಿದ್ದೇವೆ. ಬಹುಶಃ ನಮ್ಮ ಸರ್ಕಾರ ಈ ಸೋಲನ್ನು ಅನುಭವಿಸಬೇಕಾದರೆ ಮುಖ್ಯವಾದ ಕಾರಣ ಕೆ.ಇ.ಬಿ. ಎಂದರೆ ತಪ್ಪಾಗಲಾರದು. ಈಗಾಗಲೇ ಕೋಲಾರ ಜಿಲ್ಲೆ ಅನೇಕ ವಿಧದ ರೀತಿಯಲ್ಲಿ ಬರಪೀಡಿತ ಜಿಲ್ಲೆಯಾಗಿದ್ದು, ಅಲ್ಲದೆ, ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು ಅವಲಂಬಿಸಿರುವಂಥ ಜಿಲ್ಲೆಯಾಗಿರುವುದರಿಂದ ನಾವು ಪ್ರತ್ಯೇಕವಾದ ಕಷ್ಟ ಅನುಭವಿಸುತ್ತಿದ್ದೇವೆ. ಕೋಲಾರ ಮತ್ತು ಮುಳಬಾಗಿಲಿನಲ್ಲಿ ಸುಮಾರು 11 ಸಾವಿರ ಪಂಪುಸೆಟ್ಟುಗಳಿದ್ದರೂ ಕೂಡ ಕೇವಲ ಎರಡು ಸಬ್ ಸ್ಟೇಶನ್‌ಗಳಿದ್ದು, ಈ ಪೈಕಿ ಒಂದನ್ನು ಈಗಾಗಲೇ ಪ್ರಾರಂಭಿಸಿದ್ದು ಇನ್ನೊಂದನ್ನು ಕೆಲವೇ ದಿವಸಗಳಲ್ಲಿ ಪ್ರಾರಂಭಿಸುವ ವ್ಯವಸ್ಥೆ ಮಾಡಿದ್ದಾರೆ. ನಾನಾದರೂ ತಮಗೆ ಹೇಳುವುದಿಷ್ಟೆ. ಬಡ ರೈತ ಇವೊತ್ತಿನ ದಿವಸ ಬೋರ್‌ವೆಲ್ ಹಾಕಬೇಕಾದರೆ

ಸುಮಾರು ನಲವತ್ತು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಮತ್ತು ಅದಕ್ಕೆ ವಿದ್ಯುಚ್ಛಕ್ತಿ ಸಂಪರ್ಕ ತೆಗೆದುಕೊಳ್ಳಬೇಕಾದರೆ ಅಂದರೆ ಮೂರು ಕಂಬಗಳನ್ನು ಅಳವಡಿಸಿಕೊಳ್ಳತಕ್ಕಂಥ ಸರ್ವೀಸಿಗೆ ಕನಿಷ್ಠ ಪಕ್ಷ ಹತ್ತು ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಕಟ್ಟಬೇಕೆಂಬ ವ್ಯವಸ್ಥೆ ಇದೆ. ಒಂದು ಹೆಚ್.ಪಿ.ಗೆ ಮುನ್ನೂರು ರೂಪಾಯಿಗಳಷ್ಟು ಹಣವನ್ನು ಏನು ವಿಧಿಸಿದ್ದೀರಿ, ಇಡೀ ಒಂದು ವರ್ಷಕ್ಕೆ ಅಡ್ವಾನ್ಸ್ ಆಗಿ ಕಟ್ಟುವ ಒಂದು ವ್ಯವಸ್ಥೆ ಮಾಡಿರುವುದರಿಂದ ಮೀಟರ್ ಚಾರ್ಜ್ 900 ರೂಪಾಯಿಗಳು ಎಲ್ಲಾ ಸೇರಿ ಒಟ್ಟಾರೆ ಕನಿಷ್ಠ ಹದಿಮೂರು ಸಾವಿರ ರೂಪಾಯಿಗಳಿಂದ ಇಪ್ಪತ್ತು ಸಾವಿರ ರೂಪಾಯಿಗಳವರೆವಿಗೂ ವಿಧಿಸತಕ್ಕಂಥ ಒಂದು ವ್ಯವಸ್ಥೆಯಾಗುತ್ತಿದೆ. ಆದುದರಿಂದ ಈ ಪದ್ಧತಿಯನ್ನು ದಯವಿಟ್ಟು ಶೀಘ್ರವಾಗಿ ರದ್ದುಗೊಳಿಸತಕ್ಕಂಥ ವ್ಯವಸ್ಥೆ ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೇ, ನೋಟೀಸಿಗೆ ಯಾರು ಸಿಗ್ನೇಚರ್ ಮಾಡಿದ್ದಾರೆ, ಅವರಿಗೆ ಮೊದಲು ಮಾತನಾಡಲು ಅವಕಾಶ ಕೊಡಬೇಕು. ನಾನು ಇದಕ್ಕೆ ಸಿಗ್ನೇಟರಿ ಇರುವುದರಿಂದ ಮಾನ್ಯ ಅಧ್ಯಕ್ಷರು ಒಂದು ವಿಷಯದ ಚರ್ಚೆಗಾಗಿ ಕರೆದಿದ್ದರಿಂದ ನಾನು ಹೋಗಿದ್ದೆ.

ಉಪಾಧ್ಯಕ್ಷರು: ನಾನು ತಮ್ಮನ್ನು ಆಗಲೇ ಕರೆದಿದ್ದೆ, ತಾವು ಇರಲಿಲ್ಲ. ಶ್ರೀನಿವಾಸ್‌ರವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೋಟೀಸಿನಲ್ಲಿ ಯಾರು ಸಿಗ್ನೇಚರ್ ಮಾಡಿದ್ದಾರೆ, ಮೊದಲು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಅವಕಾಶ ಕೊಟ್ಟಿಲ್ಲವೆಂದು ಯಾರು ಹೇಳಿದ್ದು? ನಿಮ್ಮನ್ನು ಮಾತನಾಡಲು ಕರೆದಿದ್ದೆ, ಆಗ ನೀವು ಇರಲಿಲ್ಲ, ನಿಮ್ಮ ಪಕ್ಷದ ವತಿಯಿಂದ ಎಲ್ಲಾ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಡಿಯೂರಪ್ಪ ಆದ ನಂತರ ಯಾರಿಗೆ ಮಾತನಾಡಲು ಅವಕಾಶ ಕೊಡಬೇಕು? ನಾನು ತಮಗೆ ನೋಟೀಸ್ ಕೊಟ್ಟಿದ್ದೇನೆ. ಯಡಿಯೂರಪ್ಪನವರು ಇಲ್ಲವೆಂದರೆ ನಂತರ ಯಾರನ್ನು ಕರೆಯಬೇಕು?

ಉಪಾಧ್ಯಕ್ಷರು: ನಾನು ನಿಮ್ಮನ್ನು ಮಾತನಾಡಬಾರದೆಂದು ಹೇಳಲಿಲ್ಲ, ನಾನು ಕರೆದಾಗ ನೀವು ನಿಮ್ಮ ಸ್ಥಾನದಲ್ಲಿರಲಿಲ್ಲ. ದಯಮಾಡಿ ಕೇಳಿ, ನಿಮ್ಮ ಪಕ್ಷದ ಸದಸ್ಯರೆಲ್ಲರೂ ಮಾತನಾಡಿದ್ದಾರೆ.

+ ಶ್ರೀ ಆರ್.ಶ್ರೀನಿವಾಸ್: ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ರೈತರಿಗೆ ಏನು ಹಣ ನಿಗದಿ ಪಡಿಸಿದೆ, ಇದನ್ನು ತಕ್ಷಣ ರದ್ದುಗೊಳಿಸುವ ವ್ಯವಸ್ತೆ ಮಾಡಬೇಕಾಗಿದೆ

ಹಾಗೆಯೇ ಕಪ್ಪು ಮತ್ತು ಬೂದು ಪ್ರದೇಶವೆಂದು ಏನು ಘೋಷಿಸಲಾಗಿದೆ, ಇದನ್ನೂ ಸಹ ತಕ್ಷಣ ರದ್ದುಗೊಳಿಸಿ ಜಾರಿಗೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ, ಮುಳಬಾಗಿಲಿನಲ್ಲಿ ಈಗಾಗಲೇ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿರುವುದರಿಂದ, ಕೆಲವೇ ದಿವಸಗಳಲ್ಲಿ ಪ್ರತಿಭಟನೆ ಮಾಡುವುದಕ್ಕೆ ಎಲ್ಲರೂ ಸಿದ್ಧರಾಗಿದ್ದು, ಅದರಲ್ಲಿ ನಾನೂ ಕೂಡ ಪಾಲ್ಗೊಳ್ಳಬೇಕಾದ ವ್ಯವಸ್ಥೆಯಿರುವುದರಿಂದ ನಾನು ಈ ಮೂಲಕ ಸರ್ಕಾರಕ್ಕೆ ತಿಳಿಸುವುದೇನೆಂದರೆ, ಏನು ವಿದ್ಯುತ್ ಅವ್ಯವಸ್ಥೆಯಾಗಿದೆ, ದಿವಸಕ್ಕೆ ಆರು ಅಥವಾ ಹತ್ತು ಗಂಟೆಗಳ ಕಾಲವಾದರೂ ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಪೂರೈಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷರೆ, ನಾನು ಏನು ಹೇಳಲು ಹೊರಟೆನೆಂದರೆ, ನನ್ನನ್ನು ಅಧ್ಯಕ್ಷರು ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಲು ಕರೆದಿದ್ದರಿಂದ ನಾನು ಅವರ ಕೊಠಡಿಯಲ್ಲಿದ್ದೆ. ಆದಕಾರಣ, ಆಗ ನಾನು ಇರಲಿಲ್ಲ. ಈಗ ವಿಷಯವೇನೆಂದರೆ, ಕೆ.ಇ.ಬಿ.ಗೆ ಈಗ ಒಳ್ಳೆಯ ಅಧಿಕಾರಿಗಳು ಬಂದಿದ್ದು, ಸಂಸ್ಥೆಯನ್ನು ಉಳಿಸಬೇಕೆನ್ನುವ ದೃಷ್ಟಿಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಇದಕ್ಕೋಸ್ಕರ ಪ್ರಾರಂಭದಲ್ಲಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಕೆ.ಇ.ಬಿ.ಯನ್ನು ಉಳಿಸಲು ಹೋಗಿ ಇವರು ರೈತರನ್ನು ಸರ್ವ ನಾಶ ಮಾಡಲು ಹೊರಟಿದ್ದಾರೆ, ಇದಾಗಬಾರದು. ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಂ.ಸಿ.ನಾಣಯ್ಯನವರು ಮಡಿಕೇರಿಯಲ್ಲಿ 'ದಿ ಹಿಂದೂ' ಪತ್ರಿಕೆಗೆ ನೀಡಿದ ಸಂದರ್ಶನದ ಹೇಳಿಕೆ ದಿನಾಂಕ 25 ಫೆಬ್ರವರಿ, 98ರಂದು ಪ್ರಕಟವಾಗಿದೆ. ಏನೆಂದರೆ,

"The Government had decided to fix meters to the irrigation pumpsets in 3 months' time and was likely to charge Rs.1.45 per unit consumed by farmers." ಪ್ರಶ್ನೆಯೇನೆಂದರೆ, ಇವೊತ್ತು ಈ ಮಾತನ್ನು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ತಮಗೆ ಗೊತ್ತಿರುವಂತೆ ಹಿಂದೆ ಐ.ಪಿ.ಸೆಟ್ಟುಗಳಿಗೆ ಪೂರೈಸುತ್ತಿದ್ದ ವಿದ್ಯುಚ್ಛಕ್ತಿ ಉಚಿತವಾಗಿತ್ತು. ಆದರೂ ಆಗ ರೈತನ ಸ್ಥಿತಿಯೇನೂ ಸುಧಾರಣೆಯಾಗಲಿಲ್ಲ. ಇದಾದ ನಂತರ ನೂರು ರೂಪಾಯಿಗಳ ಶುಲ್ಕ ವಿಧಿಸಲಾಯಿತು. ಈ ಬಗ್ಗೆ ಕೆ.ಇ.ಬಿ. ಸ್ಥಿತಿಯನ್ನು ಗಮನಿಸಿ ಸದನ ಸಮಿತಿ ರಚನೆಯಾಗಿ ರೈತರಿಂದ ಛೀಮಾರಿ ಹಾಕಿಸಿಕೊಂಡರೂ ನಾವು ಸರ್ಕಾರಕ್ಕೆ ಸಹಕಾರ ಕೊಟ್ಟು ಪ್ರತಿ ಹೆಚ್.ಪಿ.ಗೆ ಮುನ್ನೂರು ರೂಪಾಯಿಗಳ ಶುಲ್ಕ ವಿಧಿಸಲು ಒಪ್ಪಿಕೊಂಡೆವು. ಏಕೆಂದರೆ, ಸರ್ಕಾರವಾಗಲೀ, ಕೆ.ಇ.ಬಿ.ಯಾಗಲೀ ನಡೆಯಬೇಕಾದರೆ ಹಾಗೆ ಎಲ್ಲವನ್ನೂ ಉದಾರವಾಗಿ, ಉಚಿತವಾಗಿ ಕೊಡುವುದಕ್ಕಾಗುವುದಿಲ್ಲ. ಹಾಗಿದ್ದರೂ ರೈತನ ಸ್ಥಿತಿ ಗೊತ್ತಿದ್ದೂ ಸಹ ಅದನ್ನು

ಮಾಡಿದ್ದೇವೆ. ಎರಡನೆಯದಾಗಿ, ಪ್ರತಿ. ಹೆಚ್.ಪಿ.ಗೆ ಮುನ್ನೂರು ರೂಪಾಯಿಗಳಷ್ಟು ಶುಲ್ಕ ವಿಧಿಸಿರುವುದರಿಂದ ರೈತ ಸಮೂಹ ಸಾಕಷ್ಟು ಸಂಕಷ್ಟದಲ್ಲಿ ಸಿಲುಕಿದೆ, ಗೊಂದಲವುಂಟಾಗಿದೆ, ಅವರುಗಳು ಬದುಕುವುದಕ್ಕಾಗದಿರುವಂಥ, ಉಸಿರು ಕಟ್ಟುವಂಥ ಸ್ಥಿತಿಯಲ್ಲಿದ್ದಾರೆ. ಈ ಬಗ್ಗೆ ಪ್ರಾಯೋಗಿಕವಾಗಿ ಅಧ್ಯಯನ ಮಾಡುವುದಕ್ಕೋಸ್ಕರ ಮಧುಗಿರಿಯಲ್ಲಿ ನೀವು ನೂರು ಮೀಟರ್‌ಗಳನ್ನು ಹಾಕಿದ್ದಿರಿ, ಅದೇ ರೀತಿ ಸಿರಾದಲ್ಲಿ, ಗುಬ್ಬಿಯಲ್ಲಿ ಹಾಕಿರುವುದನ್ನು ಕಿತ್ತು ಹಾಕಿದ್ದಾರೆ. ಬೇಕಾದರೆ ತಾವು ಲೆಕ್ಕ ತೆಗೆದು ನೋಡಿ, ಮೂರು ಕಡೆಗಳಲ್ಲಿ ಕಿತ್ತು ಹಾಕಿದ್ದಾರೆ. ಇದರಿಂದಾಗಿ ಸುಮಾರು ಲಕ್ಷಾಂತರ ರೂಪಾಯಿಗಳಷ್ಟು ಹಣ ಇವೊತ್ತು ನಿಮ್ಮ ಇಲಾಖೆ ಮೇಲೆ ಭಾರ ಬಿದ್ದಿದೆ. ಇದಕ್ಕೆ ತಾವು ಏನೋ ಹೇಳಬಹುದು: ಈ ಮೀಟರ್ ಹಾಕುತ್ತಿರುವಂಥಾದ್ದು ಶೇಕಡಾ 60 ಭಾಗದಷ್ಟು ವಿದ್ಯುತ್ ಉತ್ಪಾದನೆಯಲ್ಲಿ ರೈತರು ಕೃಷಿಗೆ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಉಪಯೋಗಿಸಿಕೊಳ್ಳುತ್ತಿದ್ದಾರೆಂಬುದನ್ನು ವಾಸ್ತವವಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಸ್ಯಾಂಪಲ್ ಆಗಿ ಅಲ್ಲಲ್ಲಿ ಮೀಟರ್ ಹಾಕುತ್ತೇವೆಂದು ಹೇಳುತ್ತಿದ್ದೀರಿ. ಅದಕ್ಕೆ ನಮ್ಮ ಅಭ್ಯಂತರವಿರಲಿಲ್ಲ. ಆದರೆ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಂ.ಸಿ.ನಾಣಯ್ಯನವರಂಥ ಒಬ್ಬರು ಜವಾಬ್ದಾರಿಯುತ ಸ್ಥಾನದಲ್ಲಿದ್ದು ಅಲ್ಲದೆ ಕ್ಯಾಬಿನೆಟ್ ದರ್ಜೆ ಸಚಿವರಾಗಿ ಮುಂದೆ ಇದನ್ನು ಮಾಡುವವರಿದ್ದೇವೆಂದು ಹೇಳಿದ ತರುವಾಯ ಈಗ ಮೀಟರ್ ಹಾಕುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಆಕ್ರೋಶ ಬಂದಿದೆ. ಇವೊತ್ತು ರಾಜ್ಯಾದ್ಯಂತ ಸುಮಾರು 12 ಲಕ್ಷದಷ್ಟು ಐ.ಪಿ. ಸೆಟ್‌ಗಳಿರಬಹುದು. ಸಾಮಾನ್ಯವಾಗಿ ಐದು ಹೆಚ್.ಪಿ, ಏಳೂವರೆ ಹೆಚ್.ಪಿ.ಗಳೇ ಇರುವಂತಾದ್ದು. ಆದರೆ, ಸರಾಸರಿ ಲೆಕ್ಕದಲ್ಲಿ ಆರು ಹೆಚ್.ಪಿ. ಇದೆಯೆಂದು ತೆಗೆದುಕೊಂಡರೆ ಒಬ್ಬ ರೈತ ವರ್ಷಕ್ಕೆ ರೂ. 1,800 ಗಳಂತೆ ಪ್ರತಿ ಹೆಚ್.ಪಿಗೆ. ಮುನ್ನೂರು ರೂಪಾಯಿಗಳಂತೆ ಕಟ್ಟಿದರೆ ರಾಜ್ಯಾದ್ಯಂತ ಇರುವ ಸುಮಾರು ಹನ್ನೆರಡು ಲಕ್ಷ ಪಂಪುಸೆಟ್ಟುಗಳಿಂದ ರೂ. 180ರಿಂದ 200 ಕೋಟಿ ರೂಪಾಯಿಗಳಷ್ಟು ಇವೊತ್ತು ಆದಾಯ ಬರುತ್ತಿದೆ. ಇವೊತ್ತು ನೀವು ಏನೋ ಮಾಡಲು ಹೊರಟಿದ್ದೀರಿ. ಶೇಕಡಾ 40ರಷ್ಟು ವಿದ್ಯುತ್ ಅನ್ನು ರೈತ ಉಪಯೋಗಿಸುತ್ತಿರುವುದರಿಂದ ಸಂಸ್ಥೆಗೆ ನಷ್ಟವಾಗುತ್ತದೆ, ಸಂಸ್ಥೆ ಉಳಿಯಬೇಕೆಂದರೆ ಪ್ರತಿ ಯೂನಿಟ್‌ಗೆ ಇಂತಿಷ್ಟು ಹಣ ವಿಧಿಸಬೇಕೆಂದು ಪ್ರಾರಂಭದಲ್ಲಿ ಮೊದಲ ಹೆಜ್ಜೆ ಇಟ್ಟು ಮೀಟರ್ ಹಾಕಲು ಹೊರಟಿದ್ದೀರಿ. ಇವರ ಪ್ರಕಾರ ದಿನಕ್ಕೆ 4-5 ಗಂಟೆ ಸಹ ವಿದ್ಯುತ್ ಸಿಗುತ್ತಿಲ್ಲ. ಇವರು ಹೇಳುವಂತೆ ಸರಾಸರಿ ಸುಮಾರು 8000 ಇಟ್ಟುಕೊಂಡರೂ ಒಂದು ತಿಂಗಳಿಗೆ 650ರಿಂದ 700 ಯೂನಿಟ್‌ಗಳಾಗುತ್ತದೆ. ಅಂದರೆ ದಿನವೊಂದಕ್ಕೆ 25ರಿಂದ 30 ಯೂನಿಟ್‌ಗಳಷ್ಟು ವಿದ್ಯುತ್ ಅನ್ನು 6 ಹೆಚ್.ಪಿ.ಸರಾಸರಿಯಲ್ಲಿ ತೆಗೆದುಕೊಂಡು 10-12 ಗಂಟೆಗಳ ಕಾಲ ಉಪಯೋಗಿಸಿದರೂ ಸಹ ಇವೊತ್ತು 25-30 ಯೂನಿಟ್ ಆಗುವುದಿಲ್ಲ. ಇವೊತ್ತು 4-5 ಗಂಟೆಗಳ ಕಾಲ ನೀವು ವಿದ್ಯುತ್ ಕೊಡದೆ ಶೇಕಡಾ 40 ಭಾಗದಷ್ಟು ವಿದ್ಯುತ್ ಅನ್ನು ನೀರಾವರಿಗೆ ಖರ್ಚು ಮಾಡುತ್ತಿದ್ದು, ಸುಮಾರು 8000 ಮಿಲಿಯನ್ ಯೂನಿಟ್

ವಿದ್ಯುತ್ ಅನ್ನು ಉಪಯೋಗಿಸಲಾಗುತ್ತಿದೆ. ಈ ರೀತಿಯಾದ ಲೆಕ್ಕವನ್ನು ನೀವು ಕೊಟ್ಟು ರೈತನ ಮೇಲೆ ಬರೆ ಎಳೆಯುವ ಕೆಲಸ ಮಾಡುತ್ತಿದ್ದೀರಿ. ಹಿಂದೆ 1981ರಲ್ಲಿ ಸನ್ಮಾನ್ಯ ಗುಂಡೂರಾವ್‌ರವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ದಯಾಳ್‌ರವರ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಮಾಡಲಾಯಿತು. ಅವರು ಟೆಕ್ನಿಕಲ್ ಎಕ್ಸ್‌ಪರ್ಟ್ ಆಗಿದ್ದರು. ಆವೊತ್ತೂ ಕೂಡ ಮೀಟರ್‌ಗಳನ್ನು ಅಳವಡಿಸಲಾಗಿತ್ತು. ಬಹುಶಃ ಮೀಟರುಗಳನ್ನು ಯಾವಾಗ ಕಿತ್ತು ಹಾಕಿದರೆಂದರೆ 1989ರಲ್ಲಿ ದಯಾಳ್‌ರವರು ತಮ್ಮ ಸಮಿತಿಯ ವರದಿ ಕೊಟ್ಟಂಥ ಸಂದರ್ಭದಲ್ಲಿ ಅವರು ಎರಡು ದೃಷ್ಟಿಯಿಂದ ವರದಿ ಕೊಟ್ಟಿದ್ದಾರೆ. ಮೀಟರ್ ಅಳವಡಿಕೆಯಿಂದ ರೈತನಿಗೆ ಲೈನ್‌ಮ್ಯಾನ್, ಮೀಟರ್ ರೀಡರ್ಸ್ ಮತ್ತೊಬ್ಬರಿಂದ ಕಿರುಕುಳ ಜಾಸ್ತಿಯಾಗಿದ್ದು, ಯಾವುದೋ ಕಾರಣಕ್ಕೆ ಮೀಟರ್ ಕೆಟ್ಟರೆ ಇಲ್ಲದಿರುವುದನ್ನೆಲ್ಲಾ ಲೆಕ್ಕ ಹಾಕಿ ರೈತನನ್ನು ಗೋಳು ಹುಯ್ದುಕೊಳ್ಳುವಂಥ ಕೆಲಸವಾಗುತ್ತಿದೆ, ರೈತನನ್ನು ಅಪರಾಧಿ ಮಾಡುವಂಥ ಸ್ಥಿತಿಗೆ ತರುತ್ತಿದ್ದು ಹೀಗಾಗಿ ಮೀಟರ್ ರೀಡರ್ಸ್ ಬೇಕು, ಬಿಲ್ ಮಾಡಲು ಬಿಲ್ ಕ್ಲರ್ಕ್ ಬೇಕು, ಸ್ಟೇಷನರಿ, ಪ್ರಿಂಟ್, ಇವೆಲ್ಲವನ್ನೂ ನೋಡಿದಾಗ ಆ ಕಾಲದಲ್ಲೂ ಸುಮಾರು ಐದು ಲಕ್ಷದಷ್ಟು ಪಂಪ್‌ಸೆಟ್ಟುಗಳಿದ್ದವು. ಸಮಿತಿಯ ವರದಿ ಏನೆಂದರೆ ಈ ಮೀಟರ್‌ಗಳನ್ನು ಅಳವಡಿಸುವುದಕ್ಕಿಂತ ಪ್ರತಿ ಹೆಚ್.ಪಿ.ಗೆ ಇಂತಿಷ್ಟು ಶುಲ್ಕ ವಿಧಿಸುವುದು ಬಹಳ ಸುಲಭ ಮತ್ತು ರೈತನನ್ನು ನೆಮ್ಮದಿಯಿಂದಿರಲು ಇಲಾಖೆಯವರು ಬಿಡುವುದಿಲ್ಲವಾದ್ದರಿಂದ ಪ್ರತಿ ಹೆಚ್.ಪಿ.ಗೆ ಐವತ್ತು ರೂಪಾಯಿಗಳಂತೆ ಸನ್ಮಾನ್ಯ ಶ್ರೀ ಗುಂಡೂವರಾವ್‌ರವರು ನಿಗದಿಪಡಿಸಿದರು ಮತ್ತು ಮೀಟರ್‌ಗಳನ್ನು ಕಿತ್ತುಹಾಕಿದರು.

2.00 ಪಿ.ಎಂ

ಈಗ ಅದೇ ದಯಾಳ್ ಸಮಿತಿಯ ವರದಿ ಅನ್ವಯವಾಗುತ್ತದಲ್ಲವೆ? ಅಂದು ಐದು ಲಕ್ಷ ಪಂಪುಸೆಟ್ಟುಗಳಿತ್ತು ಇಂದು 12 ಲಕ್ಷ ಇದೆ. ತಾವು ಮುಂದೆ ಪರ್‌ಯೂನಿಟ್ ಇಷ್ಟು ಬೆಲೆ ನಿಗದಿ ಮಾಡಬೇಕೆಂದಿದ್ದೀರಿ. ಆದರೆ ಇಂದು ತಾವು ಮಾಡಿರುವ ಮುನ್ನೂರು ರೂಪಾಯಿಗಳನ್ನೇ ಕಟ್ಟಲು ಆಗದಿರುವ ಸಂದರ್ಭದಲ್ಲಿ, ದಿನಕ್ಕೆ ಮೂರ್ನಾಲ್ಕು ಗಂಟೆಗಳ ಕಾಲ ವಿದ್ಯುತ್ ಸಿಗದಿರುವ ಈ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಪರ್ ಯೂನಿಟ್ ಬೆಲೆ ನಿಗದಿ ಮಾಡುವ ಕೆಲಸ ಮಾಡಬಾರದೆಂಬುದು ನಮ್ಮ ವಿನಂತಿ. ಮಾನ್ಯ ಪ್ರಕಾಶ್‌ರವರು, ಬೈರೇಗೌಡರು ಸುಮ್ಮ ಸುಮ್ಮನೆ ಯಡಿಯೂರಪ್ಪನವರೆ ಊಹೆ ಮಾಡಿಕೊಂಡು ಹೇಳುತ್ತಿದ್ದೀರೆಂದು ಹೇಳುತ್ತಾರೆ. ರೈತರಿಗೆ ಇಂಥ ದುಸ್ಥಿತಿ ಇರತಕ್ಕ ಕಾಲದಲ್ಲಿ, ಬೇರೆ ಬೇರೆ ಪರಿಣಾಮಗಳಿರುವ ಈ ಕಾಲದಲ್ಲಿ ಇರತಕ್ಕ ಮುನ್ನೂರು ರೂಪಾಯಿಗಳನ್ನು ಕಿತ್ತುಹಾಕಿ ಪರ್‌ಯೂನಿಟ್ ಹಾಕುವ ಸ್ಥಿತಿಯನ್ನು ನಾವೇಕೆ ಮೈಮೇಲೆ ಹಾಕಿಕೊಳ್ಳೋಣ; ನಮಗೆ ಇದರ ಬಗ್ಗೆ ಚಿಂತೆ ಇಲ್ಲ, ನೀವೇ ಊಹೆ ಮಾಡಿಕೊಂಡು ಹೇಳುತ್ತೀರೆಂದು ಅವರು ಹೇಳುತ್ತಾರೆ. ಆದರೆ ತಮ್ಮ ಕ್ಯಾಬಿನೆಟ್ ಸಚಿವರೊಬ್ಬರು ಇದರ ಬಗ್ಗೆ ಹೇಳಿರುವುದರಿಂದ ಇಡೀ ರಾಜ್ಯದಲ್ಲಿ ಅಲ್ಲೋಲಕಲ್ಲೋಲವಾಗಿದೆ. ರೈತ ವಿಧಿ

ಇಲ್ಲದೆ ಒಪ್ಪಿಗೆ ಇಲ್ಲದಿದ್ದರೂ ಸಹ ಈಗ ಮುನ್ನೂರು ರೂಪಾಯಿ ಕೊಡುತ್ತಿದ್ದಾನೆ. ಒಂದೆರಡು ಎಕರೆ ಇರತಕ್ಕ ರೈತ ಸಹ ಕೊಡುತ್ತಿದ್ದಾನೆ. ಈಗ ನೀರಿನ ಮಟ್ಟ ಬಹಳ ಕೆಳಕ್ಕೆ ಹೋಗಿರುವುದರಿಂದ ಅವನಿಗೆ ವರ್ಷಕ್ಕೆ ಎರಡುಮೂರು ಸಾವಿರ ರೂಪಾಯಿಗಳ ಆದಾಯ ಬರುತ್ತಿಲ್ಲ. ತರಕಾರಿ ಬೆಳೆಯುತ್ತಿಲ್ಲ, ಫಸಲನ್ನು ಬೆಳೆಯದಿರತಕ್ಕ ಪರಿಸ್ಥಿತಿ ಬಂದಿದೆ. ಇಂಥ ಸಂದರ್ಭದಲ್ಲಿ ಕೋಲಾರ ಜಿಲ್ಲೆಯನ್ನೇ ತಾವು ಕಣ್ಣು ಮುಂದಿಟ್ಟುಕೊಂಡು ಯಾವ ಕಾರಣಕ್ಕೂ ಸಹ ಇರತಕ್ಕ ವಿದ್ಯುತ್‌ನ್ನು ಇಂಪ್ರೂವ್ ಮಾಡುತ್ತೇವೆಂದು ಹೇಳಿದ್ದಿರಿ. ರಾಜ್ಯದ ಇತಿಹಾಸದಲ್ಲಿ ಮೊದಲಬಾರಿಗೆ ಒಂದೇ ಒಂದು ಇಲಾಖೆಯಲ್ಲಿ, ಕೆ.ಇ.ಬಿ.ಯೊಂದರಲ್ಲೇ ಸಾವಿರಕೋಟಿ ರೂಪಾಯಿಗಳ ತೆರಿಗೆಯನ್ನು ಗ್ರಾಹಕರ ಮೇಲೆ ಹಾಕಿದ್ದನ್ನು ಒಪ್ಪಿಕೊಂಡೆವು, ರೈತರಿಗೆ ಉಚಿತವಾದ ವಿದ್ಯುತ್ ಇತ್ತು, ಅದನ್ನು ನೂರು ರೂಪಾಯಿ ಮಾಡಿದಿರಿ, ಆನಂತರ ಮುನ್ನೂರು ಮಾಡಿದಿರಿ, ಅದನ್ನೂ ಒಪ್ಪಿಕೊಂಡೆವು, ಅದನ್ನೀಗ ನಿಧಾನವಾಗಿ ಮೀಟರ್ ಹಾಕಿ ರೈತರನ್ನು ಸರ್ವನಾಶ ಮಾಡತಕ್ಕ ಪ್ರಯತ್ನವನ್ನು ಯಾರೋ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಮಾಡಲು ಹೊರಟಿದ್ದೀರಿ. ಯಡಿಯೂರಪ್ಪ ರೈತರ ಬಗ್ಗೆ ಇಲ್ಲಿ ಮಾತನಾಡತಕ್ಕ ಅಗತ್ಯವೇನಿಲ್ಲ. ರೈತನಿಗೆ ಜೀವನ ಮಾಡಿಕೊಳ್ಳತಕ್ಕ ಶಕ್ತಿ ಇದೆ. ಈ ಸದನದ ಮೂಲಕ ಆ ಮೀಟರ್‌ಗಳನ್ನು ಕಿತ್ತುಹಾಕಿರಿ ಎಂದು ರೈತರಿಗೆ ಕರೆಕೊಡುತ್ತೇವೆ. ನಮಗೆ ನಮ್ಮ ಜವಾಬ್ದಾರಿಯೇನು ಎಂಬುದು ಗೊತ್ತಿದೆ. ನಾವೂ ಸಹ ಕೆಲವು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದೇವೆ. ತಾವು ಈವತ್ತಲ್ಲಾ ನಾಳೆ ಮೀಟರ್‌ನ್ನು ಅಳವಡಿಸಿ ಪರ್‌ಯೂನಿಟ್ ಬೆಲೆ ನಿಗದಿ ಮಾಡುವ ಕೆಲಸಕ್ಕೆ ಕೈಹಾಕಿದಿರಿಯೆಂದರೆ ಬಹುಶಃ ಸರ್ವನಾಶವಾದೀತು, ಇದಕ್ಕೆ ನಾಡಿನ ರೈತ ಅವಕಾಶ ಕೊಡುವುದಿಲ್ಲ. ನೀವು ಎಲ್ಲಿ ಮೀಟರ್ ಹಾಕಬೇಕು, ಎಷ್ಟು ವಿದ್ಯುತ್ ಬಳಕೆಯಾಗುತ್ತದೆ ಎಂಬ ಬಗ್ಗೆ ಸ್ಯಾಂಪಲ್ ಆಗಿ ಪರಿಶೀಲನೆ ಮಾಡಲು ರೈತರನ್ನು ಕನ್‌ವಿನ್ಸ್ ಮಾಡಿಕೊಂಡು ನಾಲ್ಕಾರುಕಡೆ ಹಾಕುವುದಾದರೆ ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಸಿ.ಬೈರೇಗೌಡ: ತಾವು ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ. ಕ್ಯಾಬಿನೆಟ್ ಸಚಿವರಾದ ಮಾನ್ಯ ನಾಣಯ್ಯನವರ ವರದಿಯು ಪತ್ರಿಕೆಯಲ್ಲಿ ಬರದಿದ್ದರೆ ನಾನು ಮಾತನಾಡುತ್ತಿರಲಿಲ್ಲ. ತಾವು ಆ ವರದಿಯನ್ನು ಅಲ್ಲಗಳೆಯುವ ಪ್ರಯತ್ನವನ್ನೂ ಸಹ ಮಾಡಲಿಲ್ಲ. ಆ ವರದಿ ಸರಿಯಲ್ಲವೆಂದು ಸರ್ಕಾರದಿಂದ ಕ್ಲಾರಿಫಿಕೇಷನ್ ಕೊಡಬೇಕಾಗಿತ್ತು. ಆ ರೀತಿ ಕ್ಲಾರಿಫಿಕೇಷನ್ ಕೊಡದಿದ್ದರೂ ಚಿಂತೆ ಇಲ್ಲ, ಆದರೆ ಐ.ಪಿ.ಸೆಟ್‌ಗಳಿಗೆ ಕನಿಷ್ಟ 8-10 ಗಂಟೆ ವಿದ್ಯುತ್‌ನ್ನು ಕೊಡಬೇಕು, ಹಾಗಿದ್ದರೆ ಮಾತ್ರ ಮುನ್ನೂರು ರೂಪಾಯಿ ಕೊಡುವುದು, ಇಲ್ಲದಿದ್ದರೆ ಅದನ್ನೂ ಸಹ ಕೊಡುವುದಿಲ್ಲ, ಇದರ ಬಗ್ಗೆ ಸದನದಲ್ಲಿ ಭರವಸೆ ಕೊಡಲಿ.

ಶ್ರೀ ಸಿ.ಬೈರೇಗೌಡ: ತಾವು ಹೆದರಿಸತಕ್ಕ ತಂತ್ರಕ್ಕೆ ಈ ಸದನವನ್ನು ಬಳಕೆ

ಮಾಡಿಕೊಳ್ಳತಕ್ಕದ್ದು ಸರಿಯಲ್ಲ. ಇದು ಬಹಳ ದುರಾದೃಷ್ಟಕರವಾದುದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಈಲ್ಡ್ ಆಗಿಲ್ಲ, ತಾವು ಇಲ್ಲಿದ್ದಾಗ ಏನು ಮಾತನಾಡುತ್ತಿದ್ದೀರೆಂದು ನನಗೆ ಗೊತ್ತಿದೆ. ಮುನ್ನೂರು ರೂಪಾಯಿಗಳನ್ನು ರೈತರು ಸರಿಯಾಗಿ ಕಟ್ಟಬೇಕೆಂದಿದ್ದರೆ 8-10 ಗಂಟೆಗಳಾದರೂ ಸರಿಯಾದ ರೀತಿ, ತಡೆರಹಿತ ವಿದ್ಯುತ್‌ನ್ನು ಕೊಡುವ ವ್ಯವಸ್ಥೆಯಾಗಬೇಕು. ಈಗ ಮೂರ್‍ನಾಲ್ಕು ಗಂಟೆಗಳ ಕಾಲ ಸಹ ವಿದ್ಯುತ್‌ನ್ನು ಕೊಡಲು ಆಗುತ್ತಿಲ್ಲ. ಎರಡನೆಯದಾಗಿ ಯಾವುದೇ ಕಾರಣಕ್ಕೂ ಮೀಟರ್ ಅಳವಡಿಸುವುದನ್ನು ರೈತ ಸಮುದಾಯ ಒಪ್ಪುವುದಿಲ್ಲ. ಯಡಿಯೂರಪ್ಪ ಒಪ್ಪಿಕೊಳ್ಳುವುದಲ್ಲ. ಜನರು ಒಪ್ಪಿಕೊಳ್ಳುವುದಿಲ್ಲ. ನಾವು ಒಪ್ಪಿಕೊಂಡು ಊರಿಗೆ ಹೋದರೆ ಬಡಿಗೆ ತೆಗೆದುಕೊಂಡು ನಮ್ಮ ಬೆನ್ನು ಹತ್ತುತ್ತಾರೆ, ಮಾನ್ಯ ಬೈರೇಗೌಡರೆ, ತಾವು ಮಂತ್ರಿಗಳಾಗಿದ್ದೀರಿ, ಒಳ್ಳೆಯ ಸ್ಥಾನದಲ್ಲಿದ್ದೀರಿ, ಈ ಹಿಂದೆ ವಾಟಾಳ್‌ನಾಗರಾಜ್‌ರವರ ಪಕ್ಕದಲ್ಲಿ ಕುಳಿತಿದ್ದಾಗ ಬೇರೆ ತರಹ ಇತ್ತು, ಕಡತ ತೆಗೆದುನೋಡಿದರೆ ತಿಳಿಯುತ್ತದೆ. ತಾವು ಒಂದು ನಿಮಿಷ ಕುಳಿತುಕೊಳ್ಳುತ್ತಿರಲಿಲ್ಲ. ಕೆ.ಇ.ಬಿ., ಕೋಲಾರ, ರೈತರು ಎಂದರೆ ಕುಣಿಯುತ್ತಿದ್ದಿರಿ. ಮಂತ್ರಿಯಾದಮೇಲೆ ಕೋಲಾರ ಮತ್ತು ರೈತರನ್ನು ಮರೆತುಬಿಟ್ಟಿರಿ. ಕೃಷಿ ಸಚಿವರಾದ ಮೇಲೆ ಏನು ಮಾಡುವುದಕ್ಕಾಗುತ್ತದೆ? ಯಾವಾಗಲೂ ಅಧಿಕಾರ ಸಿಕ್ಕಮೇಲೆ ಜನರ ಹಿತವು ಮರೆತುಹೋಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಬೈರೇಗೌಡರ ಕೈಯಲ್ಲಿ ಯಾವಾಗಲೂ ಬಡಿಗೆ ಇರುತ್ತದೆ: ಆದರೆ ಅವರ ಕೈಯಲ್ಲಿ ಇರುವುದಿಲ್ಲ:

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗೇನು ಬೈರೇಗೌಡರ ಕೈಯಲ್ಲಿ ಬಡಿಗೆ ಇದೆ ಅದನ್ನು ರೈತರು ಕಿತ್ತುಕೊಳ್ಳಬೇಕೆಂದು ಕೋಲಾರ ಜಿಲ್ಲೆಯವರು ತೀರ್ಮಾನ ಮಾಡಿದ್ದಾರೆ. ಕೋಲಾರದಲ್ಲಿ ಟೊಮ್ಯಾಟೋವನ್ನು ರಸ್ತೆಗೆ ರೈತರು ಎಸೆದರು, ಬೀದಿಪಾಲಾಗಿದ್ದರು. ಅದರ ಬಗ್ಗೆ ಇಲ್ಲಿ ಯಡಿಯೂರಪ್ಪ ಪ್ರಸ್ತಾಪ ಮಾಡಿದಾಗ, ಕೃಷಿಸಚಿವರ ಸ್ಥಾನವನ್ನು ಉಳಿಸಿಕೊಳ್ಳಲು ಎದ್ದುನಿಂತು ಯಾವ ಕಾರಣಕ್ಕೂ ನಾನು ಸಚಿವರಾಗಿರುವವರೆಗೆ 8-10 ಗಂಟೆ ವಿದ್ಯುತ್‌ನ್ನು ಕೊಡಿಸುತ್ತೇನೆ, ಯಾವುದೇ ಕಾರಣಕ್ಕೆ ಮೀಟರೀಕರಣಕ್ಕೆ ಅವಕಾಶ ಮಾಡಿಕೊಡುವುದಿಲ್ಲ, ಪರ್‌ಯೂನಿಟ್ ಇಷ್ಟು ಎನ್ನತಕ್ಕ ಪ್ರಶ್ನೆ ಬರುವುದಿಲ್ಲ ಎಂದು ಹೇಳದಿದ್ದರೆ ತಾವು ಕೋಲಾರಕ್ಕೆ ಹೋಗಿ ವಾಪಸ್ ಬರುವುದು ಕಷ್ಟವಾಗುತ್ತದೆ. ನಾಣಯ್ಯನವರ ಪತ್ರಿಕಾ ಹೇಳಿಕೆಯ ಬಗ್ಗೆ ನಾನಿಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಯಾವಾಗಲೂ ಅಧಿಕಾರಿಗಳು, ಸರ್ಕಾರದ ಮೂಲಕ ಸುದ್ದಿಯನ್ನು ಮುಟ್ಟಿಸುತ್ತಾರೆ, ಇದು ಎಷ್ಟರಮಟ್ಟಿಗೆ ಪರಿಣಾಮವಾಗುತ್ತದೆ, ಮೀಟರೀಕರಣವನ್ನು ಅಳವಡಿಸಿಕೊಳ್ಳಲು ರೈತ ಸಿದ್ಧನಾಗಿದ್ದಾನೋ, ಇಲ್ಲವೋ, ಪರ್

ಯೂನಿಟ್ ಇಷ್ಟು ಬೆಲೆಯಾಗುತ್ತದೆಂದರೆ ರೈತನ ಪ್ರತಿಕ್ರಿಯೆ ಏನು? ಅದೂ ಬಹಳ ಬುದ್ಧಿವಂತಿಕೆಯಿಂದ ಇಂಗ್ಲಿಷ್ ಪತ್ರಿಕೆಯಲ್ಲಿ ಬರುವಂತೆ ಮಾಡಿದಿರಿ. ಕನ್ನಡದ ಪತ್ರಿಕೆಗಳಲ್ಲಿ ಬಂದಿದ್ದರೆ ಬಡ ರೈತ ಎಲ್ಲೋ ಓದಿಕೊಳ್ಳುತ್ತಿದ್ದ. ಆದ್ದರಿಂದ ತಾವು ದಯಮಾಡಿ ಉತ್ತಮವಾದ ವಿದ್ಯುತ್ ಕೊಡಿ, ಈಗಲಾದರೂ ಬುದ್ಧಿ ಕಲಿಯಿರಿ. ಇಷ್ಟೆಲ್ಲಾ ಆದಮೇಲೆ ರೈತ ತಿರುಗಿಬಿದ್ದಿದ್ದಾನೆಂದರೆ ನಾನು ಮತ್ತೆ ಇದರ ಬಗ್ಗೆ ಹೇಳುವ ಅಗತ್ಯವಿಲ್ಲ. ನೀವು ಬುದ್ಧಿವಂತರಾಗಿದ್ದರೆ ನೂರು ರೂಪಾಯಿ ಇದ್ದದ್ದನ್ನು ಮುನ್ನೂರು ರೂಪಾಯಿ ಮಾಡಬಾರದಿತ್ತು. ಆದರೆ ಮಾಡಿಬಿಟ್ಟಿದ್ದೀರಿ. ಅದರ ಶಾಪ ತಮಗೆ ತಟ್ಟಿದೆ. ಮತ್ತೆ ಅದು ಮುಂದುವರೆಯಬಾರದೆಂದಿದ್ದರೆ ದಯಮಾಡಿ ಕನಿಷ್ಟ 8-10 ಗಂಟೆ ವಿದ್ಯುತ್ ಕೊಡಿ, ಎರಡನೆಯದಾಗಿ ಎಲ್ಲೂ ಮೀಟರ್ ಹಾಕಲು ಹೋಗಬೇಡಿ. ಮತ್ತೆ ಕೆ.ಇ.ಬಿ.ಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಹಿಂದೆ ನಾವೇನು ಹೋರಾಟ ಮಾಡಿದ್ದೆವೋ ಅದೇ ರೀತಿ ರೈತ ಸಮೂದಾಯ ಮೀಟರ್‌ಗಳನ್ನು ಕಿತ್ತುಬೀದಿಗೆ ಹಾಕಬೇಕು, ಲಾ ಅಂಡ್ ಆರ್ಡ್‌ರ್ ತೊಂದರೆ ಆದರೂ ಎದುರಿಸುತ್ತೇವೆ ಎಂದರೆ ಅದು ನಿಮ್ಮ ಹಣೆಬರಹ. ಏನು ಬೇಕಾದರು ಮಾಡಿಕೊಳ್ಳಿ. ವಿನಾಶಕಾಲೇ ವಿಪರೀತಿ ಬುದ್ಧಿ ಎಂಬಂತೆ, ಏನು ಬೇಕಾದರೂ ಮಾಡಿಕೊಳ್ಳಿ. ಯಾವುದೇ ಕಾರಣಕ್ಕೂ ಪರ್ ಯೂನಿಟ್ ಇಷ್ಟು ಬೆಲೆ ನಿಗದಿ ಮಾಡುವ ಯೋಚನೆಯೇನಿದೆ ಅದನ್ನು ಕೈಬಿಡಿ. ಗುಂಡೂರಾವ್‌ರವರ ಕಾಲದಲ್ಲಿ ದಯಾಳ್ ಸಮಿತಿಯನ್ನು ಮಾಡಿದ್ದರು, ಅದರ ವರದಿಯನ್ನು ತೆಗೆದುಕೊಂಡು ಮುಂದಾಗಿ. ಇವತ್ತು 12-13 ಲಕ್ಷ ಐ.ಪಿ.ಸೆಟ್ಟುಗಳಿಗೆ ಬಿಲ್ಲಿಂಗ್ ಮಾಡುವುದಕ್ಕೆ, ಮೀಟರ್‌ರೀಡರ್ಸ್, ಗುಮಾಸ್ತ ಮುಂತಾದ ದೊಡ್ಡ ಸಿಬ್ಬಂದಿಯನ್ನು ತೆಗೆದುಕೊಂಡು ರೈತರಿಗೆ ಕಿರುಕುಳ ಕೊಡುವ ವ್ಯವಸ್ಥೆಗೆ ಕೈಹಾಕಬೇಡಿ. ಕೆ.ಇ.ಬಿ. ಒಳ್ಳೆಯದಾಗುತ್ತದೆ, ಸಹಕಾರ ಕೊಟ್ಟಿದ್ದೇವೆ, ಒಳ್ಳೆಯ ಅಧಿಕಾರಿಗಳಿದ್ದಾರೆ, ತಮ್ಮ ಅಧಿಕಾರಿಗಳಿಗೆ ತಮ್ಮ ಇಲಾಖೆಗೆ ಹೆಚ್ಚು ಆದಾಯ ಬರಬೇಕು ಆ ಇಲಾಖೆ ಚೆನ್ನಾಗಿ ನಡೆಯಬೇಕೆಂದು ಯೋಚನೆ ಮಾಡುತ್ತಾರೆಯೇ ಹೊರತು ಬೇರೆ ಯೋಚನೆ ಇಲ್ಲ. ಈ ದೇಶಕ್ಕೆ ಅನ್ನ ಕೊಡುವಂಥ ಅನ್ನದಾತ ರೈತ ತಬ್ಬಲಿಯಾಗಿ ಕುಡಿಯುವುದಕ್ಕೆ ನೀರಿಲ್ಲದೆ ವಿಷ ತೆಗೆದುಕೊಂಡು ಸಾಯುವ ಸ್ಥಿತಿಗೆ ಬಂದಿದ್ದಾನೆ. ಇದನ್ನು ಅರ್ಥ ಮಾಡಿಕೊಂಡು ತಾವು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಸರ್ಕಾರ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

+ ಶ್ರೀ ವಾಟಾಳ್‌ನಾಗರಾಜ್ (ಚಾಮರಜನಗರ): ಮಾನ್ಯ ಉಪಾಧ್ಯಕ್ಷರೆ, ಬೈರೇಗೌಡರ ಮತ್ತು ಯಡಿಯೂರಪ್ಪನವರ ಕೋಪಾತಾಪವನ್ನು ನೋಡಿದರೆ ಅದು ಮೊದಲು ಇಷ್ಟು ಇರಲಿಲ್ಲ. ಮಾನ್ಯ ಪ್ರಕಾಶ್‌ರವರು ಬೈರೇಗೌಡರ ಕೈಯಲ್ಲಿ ಬಡಿಗೆ ಇದ್ದೇ ಇದೆಯೆಂದು ಹೇಳಿದ್ದಾರೆ, ಆದರೆ ಬೈರೇಗೌಡರು ಆ ಕೋಪವನ್ನು ಬಡಿಗೆಯ ಮೇಲೆ ಬಿಡುವುದಿಲ್ಲ. ಬಡಿಗೆಗೂ ಕೋಪಕ್ಕೂ ಸಂಬಂಧವಿಲ್ಲ. ಬೈರೇಗೌಡರು ಈ ಕಡೆ ಕುಳಿತಿದ್ದಾಗ ಪ್ರತಿ ದಿನ ಇದರ ಬಗ್ಗೆಯೇ ಚರ್ಚೆಯಾಗುತ್ತಿತ್ತು. ಆಗ ಮಾಲೂರು

ಶಾಸಕರ ಅಧ್ಯಕ್ಷತೆಯಲ್ಲಿ ಇದಕ್ಕಾಗಿ ಒಂದು ಸಮಿತಿಯೂ ಸಹ ರಚನೆಯಾಯಿತು. ವರದಿಯೂ ಬಂತು. ನನ್ನ ಚಾಮರಾಜನಗರ ಕ್ಷೇತ್ರದಲ್ಲಿ ಸುಮಾರು ಮೂರು ತಿಂಗಳಿನಿಂದ ನಿರಂತರವಾಗಿ ವಿದ್ಯುಚ್ಛಕ್ತಿ ದಿನಕ್ಕೆ ಒಂದು ಗಂಟೆಯ ಕಾಲವೂ ಬರುವುದಿಲ್ಲ. ಕೃಷಿ ಪಂಪುಸೆಟ್ಟುಗಳಿಗಿಂತ ಹೆಚ್ಚಾಗಿ ಕುಡಿಯುವ ನೀರಿನ ವ್ಯವಸ್ಥೆ ಸಹ ಹದಗೆಟ್ಟುಹೋಗಿದೆ. ಇದರ ಬಗ್ಗೆ ಅನೇಕ ಸಾರಿ ಒತ್ತಾಯಮಾಡಿ ಹೇಳಿದ್ದಾಯಿತು. ರೈತರು ಒಂದು ಕಡೆ ಕಂಗಾಲಾಗಿದ್ದಾರೆ. ಮತ್ತೊಂದು ಕಡೆ ಬಹಳ ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆಯಾಗಿದೆ. ವಿದ್ಯುಚ್ಛಕ್ತಿಯನ್ನು ನೇರವಾಗಿ ಅದಕ್ಕೆ ಸರಬರಾಜು ಮಾಡುವ ವ್ಯವಸ್ಥೆ ಹದಗೆಟ್ಟುಹೋಗಿದೆ. ಮೂರು ತಿಂಗಳಿನಿಂದ ಭೀಕರವಾದ ಕುಡಿಯುವ ನೀರಿನ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ವಿದ್ಯುಚ್ಛಕ್ತಿ ಮಂಡಳಿ ತೀವ್ರ ಕ್ರಮವನ್ನು ಕೈಗೊಂಡಿಲ್ಲ. ''ಕಪ್ಪು, ಬಿಳುಪು, ಬೂದು'' ಎಂದು ಪ್ರದೇಶವನ್ನು ವಿಂಗಡಣೆ ಮಾಡಿದ್ದೀರಿ; ಎಂದು ನನಗನ್ನಿಸುತ್ತದೆ. ಇದು ಬೇಕಾಗಿತ್ತೇ ಎಂಬುದು ನನ್ನ ನೇರ ಪ್ರಶ್ನೆ. ನಮ್ಮ ಹಿಂದುಳಿದ ಗಡಿಪ್ರದೇಶವಾದ ಚಾಮರಾಜನಗರದಲ್ಲೂ ''ಬೂದು ಪ್ರದೇಶ'' ಎಂದು ಘೋಷಿಸಲಾಗಿದೆ. ಇದು ಬಂದ ಮೇಲೆ ಒಂದು ಸಾವಿರ ಕೃಷಿ ಪಂಪುಸೆಟ್ಟುಗಳಿಗೆ ತಡೆಹಿಡಿದಿದ್ದಾರೆ. ಕಾರಣ ಬೂದು ಪ್ರದೇಶವಾಗಿರುವುದರಿಂದ ನಿಮಗೆ ಕೊಡುವುದಕ್ಕೆ ಆಗುವುದಿಲ್ಲವೆಂದಿದ್ದಾರೆ. ಇಡೀ ಚಾಮರಾಜನಗರ ಜಿಲ್ಲೆ ಕೃಷಿ ಪಂಪುಸೆಟ್ಟುಗಳಿಂದ ರೈತರುಗಳು ಬದುಕಿರತಕ್ಕಂತಹ ಒಂದು ಪ್ರಧೇಶವಾಗಿದೆ. ನೀವು ಅದನ್ನು ''ಬೂದು ಪ್ರದೇಶ'' ಎಂದು ಘೋಷಿಸಿದರೆ ಅಲ್ಲಿನ ಕೃಷಿಯಿಂದ ಬದುಕಿರುವ ರೈತರಿಗೆ ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಇದನ್ನು ಪುನರ್‌ಪರಿಶೀಲನೆ ಮಾಡಬೇಕು. ಬರೀ ನನ್ನ ಪ್ರದೇಶವೊಂದೇ ಅಲ್ಲ, ''ಬೂದು, ಕಪ್ಪು ಪ್ರದೇಶ'' ಎಂದು ಏನಿದೆ ಈ ಪ್ರದೇಶವನ್ನು ಖಂಡಿತಾ ತೆಗೆದುಹಾಕಬೇಕು. ಅದನ್ನು ತೆಗೆಯದಿದ್ದರೆ ಅಪಾಯವಾಗುತ್ತದೆ. ತಮಗೆ ನಾನು ಹೇಳುತ್ತೇನೆ, ಐ.ಪಿ.ಸೆಟ್‌ಗಳಿಗೆ ಈ ಮೀಟರನ್ನು ಅಳವಡಿಸಿದ್ದರಿಂದ ನಿಮಗೆ ಆದ ಲಾಭವೇನು? ನಷ್ಟವಾಯಿತು, ನೀವು ಅನುಭವಿಸಿದ್ದೀರಿ. ನಿಮ್ಮ ವಿದ್ಯುಚ್ಛಕ್ತಿ ಮಂಡಳಿಯ ಈಗಿನ ಅಧ್ಯಕ್ಷರಾಗಲಿ, ಅವರಿಗೆ ಹೇಳುತ್ತಾ ಇಲ್ಲ, ಹಿಂದೆ ಒಬ್ಬರು ಅಧ್ಯಕ್ಷರಿದ್ದರು ಅವರದು ಒಂದು ರೀತಿ ಮಿಲಿಟರಿ ಪ್ರಭುತ್ವವಾಗಿತ್ತು. ಅವರು ಮಿಲಿಟರಿಯಿಂದ ಬಂದಿದ್ದರಿಂದ ಮಿಲಿಟರಿ ಪ್ರಭುತ್ವವಾಗಿತ್ತು. ಆ ರೀತಿ ನಡೆದುಕೊಂಡರು. ಅವರ ಮಾತನ್ನು ನೀವು ಕೇಳಿದಿರಿ. ನೀವು ಮೀಟರನ್ನು ಅಳವಡಿಸಿ ಆ ರೈತರ ನೋವು ನಿಮಗೇಕೆ. ಇದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ನಿಮ್ಮ ಸರ್ಕಾರ ಲೋಕಸಭೆಯಲ್ಲಿ ಇಷ್ಟು ಹೀನಾಯವಾಗಿ ಸೋಲಬೇಕಾದರೆ ನಿಮ್ಮ ಸರ್ಕಾರದ ಜನವಿರೋಧಿ ನೀತಿಯೇ ಕಾರಣ. ಈಗಲೂ ನಾನು ಹೇಳುತ್ತಿದ್ದೇನೆ. ಮುಂದೆ ಇನ್ನು ಎರಡು ವರ್ಷಗಳ ಕಾಲ ಅಧಿಕಾರದಲ್ಲಿ ಇರಬೇಕು ಎನ್ನತಕ್ಕಂತಹ ಆಸೆ ಆಶೋತ್ತರಗಳನ್ನು ಇಟ್ಟುಕೊಂಡಿರತಕ್ಕಂಥವರು ಮತ್ತೆ ಚುನಾವಣೆಯಲ್ಲಿ ನಿಮ್ಮ ಸರ್ಕಾರ ಬರಬೇಕು ಅಂತ ಚಿಂತನೆಯನ್ನು ನೀವು ಮಾಡುತ್ತಿದ್ದರೆ ನಾಳೆಯಿಂದ ಈ ಮೀಟರ್

ವ್ಯವಸ್ಥೆಯನ್ನು ಕಿತ್ತುಹಾಕಿ ವಿದ್ಯುಚ್ಛಕ್ತಿ ಸರಬರಾಜನ್ನು ಪ್ರಾಮಾಣಿಕವಾಗಿ ಎಲ್ಲಾ ರೈತರಿಗೂ ಯಾವುದೇ ತೊಂದರೆ ಇಲ್ಲದಂತೆ ನೀವು ಮಾಡುವುದಾದರೆ ಸ್ವಲ್ಪ ಜನ ನಿಮ್ಮ ಜೊತೆ ಉಳಿಯುತ್ತಾರೆ. ಇಲ್ಲದಿದ್ದರೆ ಪ್ರಾಮಾಣಿಕವಾಗಿ ಹೇಳುತ್ತೇನೆ ಖಂಡಿತ ಉಳಿಯುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಿದ್ಯುಚ್ಛಕ್ತಿ ಶಾಕ್ ಹೊಡೆದಿದೆ, ಅದಕ್ಕೆ ಹೀಗಾಗಿದೆ ಎನ್ನುತ್ತೀರೋ?

ಮಾನ್ಯ ಸದಸ್ಯರು: ಶಾಕೋ ಅಥವಾ ಶಾಪವೋ?

ಶ್ರೀ ವಾಟಾಳ್‌ನಾಗರಾಜ್: ಅದಕ್ಕೋಸ್ಕರವಾಗಿ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ವಸ್ತುಸ್ಥಿತಿ. ಅವರೆಲ್ಲರೂ ಇದನ್ನು ಒಪ್ಪುತ್ತಾರೆಂದು ನನಗೆ ಅನ್ನಿಸುತ್ತದೆ. ಅಧಿಕಾರಿಗಳ ಮಾತನ್ನು ಕೇಳಿ ಈ ತೀರ್ಮಾನಕ್ಕೆ ತಾವು ಬರಬಾರದು ಎಂದು ಹೇಳುತ್ತಾ ನನ್ನ ಕ್ಷೇತ್ರದ ಬಗ್ಗೆ ನಾನು ಹೇಳುತ್ತಿದ್ದೇನೆ. 3 ತಿಂಗಳಿಂದ ವಿದ್ಯುಚ್ಛಕ್ತಿ ಇಲ್ಲದಿರುವುದರಿಂದ ಒಂದು ರೀತಿಯಲ್ಲಿ ಅದನ್ನು ರಾಜ್ಯದಿಂದ ಬೇರ್ಪಡಿಸಿದಂತಾಗಿದೆ. ಚಾಮರಾಜನಗರವೆಂದು ಹೊಸ ಜಿಲ್ಲೆ ಆದ ಮೇಲೆ ಈ ರಾಜ್ಯವನ್ನು ಬಿಟ್ಟು ಬೇರೆ ಕಡೆ ಕಳುಹಿಸುವಂತಹ ವ್ಯವಸ್ಥೆ ಆಗಿದೆ. ಇದನ್ನು ನಿಮ್ಮ ಇಲಾಖೆ ಮಾಡುತ್ತಿದೆ, ಅದಕ್ಕೆ ದಯವಿಟ್ಟು ತಾವು ಇದನ್ನು ಮಾಡಬಾರದು ಎನ್ನುವ ಮಾತನ್ನು ತಮಗೆ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ.

(ಗೊಂದಲ)

+ ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಈ ಸಮಸ್ಯೆ ಕೇವಲ ಕೋಲಾರ, ಮೈಸೂರು, ಚಾಮರಾಜನಗರಗಳಲ್ಲಿ ಮಾತ್ರವಲ್ಲ. ಇಡೀ ರಾಜ್ಯದಲ್ಲಿ ಇದೆ. ಆದ್ದರಿಂದ ಇದರ ಬಗ್ಗೆ ಮಾತನಾಡಲು ಎಲ್ಲರಿಗೂ ಸ್ವಲ್ಪ ಅವಕಾಶ ಮಾಡಿಕೊಡಬೇಕಾಗುತ್ತದೆ.

ಉಪಾಧ್ಯಕ್ಷರು: ತಾವು ಹಿರಿಯ ಸದಸ್ಯರಾಗಿದ್ದೀರಿ. ಇದರ ಬಗ್ಗೆ ಮಾತನಾಡುವುದಕ್ಕೆ ನೋಟೀಸ್‌ನಲ್ಲಿ ತಾವು ಸಹಿ ಹಾಕಿದ್ದಿರಾ? ಒಂದಿಬ್ಬರಿಗೆ ಮಾತನಾಡಲು ಅವಕಾಶ ಕೊಟ್ಟರೆ ತಾವು ಅದಕ್ಕೆ ಅಡ್ಡಿ ಮಾಡಬಾರದು. ಮಂತ್ರಿಗಳು ಉತ್ತರ ಕೊಡುತ್ತಾರೆ. ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿ. ಈಗ ದಯಮಾಡಿ ಕುಳತುಕೊಳ್ಳಿ.

(ಗೊಂದಲ)

ಶ್ರೀ ಸಿ.ಆರ್.ಸಗೀರ್ ಅಹಮದ್: ದಯಮಾಡಿ ನನಗೆ ಮಾತನಾಡಲು 2 ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು: ಈ ರೀತಿ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಗಂಗಹನುಮಯ್ಯ (ಮಧುಗಿರಿ): ಮಾನ್ಯ ಉಪಾಧ್ಯಕ್ಷರೆ ನನ್ನ ತಾಲ್ಲೂಕಿನಲ್ಲಿ ವಿಚಾರ ಬೇರೆಯೇ ಇದೆ. ಆ ವಿಚಾರ ಬೇರೆಯೇ ಇದೆ. ಆ ವಿಚಾರವನ್ನು ನಾನು ಹೇಳಬೇಕಾಗುತ್ತದೆ... ದಯಮಾಡಿ ನನಗೆ ಅವಕಾಶವನ್ನು ಕೊಡಿ. ಮಧುಗಿರಿ ತಾಲ್ಲೂಕಿನಲ್ಲಿ ವಿದ್ಯುತ್ ಮೀಟರ್ ಅಳವಡಿಸುತ್ತಿದ್ದಾರೆ. ರೈತರು ನನ್ನನ್ನು ಏನು ಕೇಳುತ್ತಿದ್ದಾರೆಂದರೆ ನೀವು ಶಾಸಕರಾಗಿದ್ದು ಮೀಟರನ್ನು ಅಳವಡಿಸಲು ಕೆ.ಇ.ಬಿ.ಯವರು ನಿಮ್ಮನ್ನು ಕೇಳಿದ್ದಾರಾ? ನೀವು ಹೇಗೆ ಒಪ್ಪಿಕೊಂಡಿದ್ದೀರಿ? ಜಿಲ್ಲೆಯ ಎಲ್ಲಾ ಕಡೆ ಎಲ್ಲಿಯೂ ಮೀಟರನ್ನು ಅಳವಡಿಸಿಲ್ಲ. ಮಧುಗಿರಿ ತಾಲ್ಲೂಕಿನಲ್ಲಿ ಮಾತ್ರ ಈಗ ಪ್ರಾಯೋಗಿಕವಾಗಿ ಅಳವಡಿಸುತ್ತೇನೆಂದು ಹೋಗಿದ್ದಾರೆ. ಆದರೆ, ನಿಮ್ಮನ್ನು ಯಾರು ಕೂಡ ಕೇಳಲಿಲ್ಲವೇ ಎಂದು ಎಲ್ಲಾ ರೈತರು ನನ್ನ ಮೇಲೆ ತಿರುಗಿ ಬಿದ್ದಿದ್ದಾರೆ. ದಯಮಾಡಿ ಮೀಟರನ್ನು ಅಳವಡಿಸಬೇಡಿ. ಮೀಟರನ್ನು ಅಳವಡಿಸುವುದಾದರೆ ನಾನು ಇವತ್ತು ಆಡಳಿತ ಪಕ್ಷದಲ್ಲಿರಬಹುದು, ಆದರೆ ವಿರೋಧಪಕ್ಷದವರು ಏನು ಕೆಲಸ ಮಾಡುತ್ತಾರೆ ಆ ಕೆಲಸವನ್ನು ನಾನೂ ಕೂಡ ಮಾಡಬೇಕಾಗುತ್ತದೆ. ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಡಿ. ಇದು ಚಿಂತಾಜನಕವಾಗಿರತಕ್ಕ ಸಮಸ್ಯೆ. ಮುಂದೆ ವೋಲ್ಟೇಜ್‌ನ ವಿಚಾರದಲ್ಲಿ ಹೇಳುವುದಾದರೆ ಈಗಾಗಲೇ ನನ್ನ ಎಲ್ಲಾ ಸ್ನೇಹಿತರು ಹೇಳಿದ್ದಾರೆ. ನೀವು ವಿದ್ಯುತ್‌ನ್ನು ಕೊಡುವುದಾದರೆ ದಿನದಲ್ಲಿ 2 ಗಂಟೆಯಾದರೂ ಸಮರ್ಪಕವಾಗಿ ಕೊಡಿ. ಅದರಲ್ಲೂ ನಮ್ಮ ಭಾಗದಲ್ಲಿ ಮಳೆ ಆಗಿಲ್ಲ. ವಿದ್ಯುತ್ ಕೊಡುವುದಾದರೆ ಎಷ್ಟಾದರೂ ವೋಲ್ಟೇಜ್ ಇರಲಿ, ಕೊಡಿ. ನಿಮ್ಮಲ್ಲಿ ವೋಲ್ಟೇಜ್ ಇರುವುದಿಲ್ಲ. ರಾತ್ರಿ ಹೊತ್ತು ಹಳ್ಳಿ ಕಡೆ ಹೋದಾಗ ಇವತ್ತು ನಮ್ಮ ಕಡೆ ಮಳೆ ಆಗದಿರುವ ಕಾರಣ ನೀರಿಗೆ ತೀವ್ರ ಅಭಾವ ಆಗಿದೆಯಲ್ಲದೆ ನೀರಿನ ಮಟ್ಟ ಸುಮಾರು 300 ರಿಂದ 500 ಅಡಿ ಕೆಳಗೆ ಹೋಗಿದೆ. ಕುಡಿಯುವ ನೀರಿಗೆ ಬಹಳ ಹಾಹಾಕಾರವಾಗಿದೆ. ಪಂಪ್, ಮೋಟಾರ್ ಎಲ್ಲಾ ವ್ಯವಸ್ಥೆ ಇದ್ದರೂ ವೋಲ್ಟೇಜ್ ಇಲ್ಲದ ಕಾರಣ ನೀರನ್ನು ಮೇಲೆತ್ತಲಾಗುತ್ತಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಇವತ್ತು ಪೂರೈಸುವ ಕೆಲಸ ತಕ್ಷಣ ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ.

+ ಶ್ರೀ ಸಿ.ಆರ್.ಸಗೀರ್‌ಅಹಮದ್ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಅಭಾವದ ಬಗ್ಗೆ ಕೇವಲ ಕೋಲಾರ, ಮೈಸೂರು, ಚಾಮರಾಜನಗರ ಜಿಲ್ಲೆಗಳಷ್ಟೇ ಅಲ್ಲ. ಶಾಖ ಇಡೀ ರಾಜ್ಯದ ಬೇರೆಬೇರೆ ಜಿಲ್ಲೆಗಳಿಗೂ ತಟ್ಟಿದೆ. ನಮ್ಮ ಜಿಲ್ಲೆಯ ಸಮಾಚಾರವು ಇದೇ ರೀತಿ ಆಗಿದೆ. ಮುಂದೆ ಏನೆಂದು ಹೇಳಿದರೆ ವಿದ್ಯುತ್ ಕಡಿತಗೊಳಿಸುವುದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಈ ರಾಜ್ಯದ ಜನರಿಗೆ ಮಾಹಿತಿಯನ್ನು ನೀಡಲಿಲ್ಲ. ಅವರ ಸಮಯ, ಸಂದರ್ಭ ನೋಡಿಕೊಂಡು ವಿದ್ಯುತ್ತನ್ನು ಕಡಿತಗೊಳಿಸುವುದರಲ್ಲಿ ಬರೀ ರೈತರಿಗಷ್ಟೇ ಅಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವಂತಹ ಗ್ರಾಮಸ್ಥರಿಗೂ ಕೂಡ ಇದರಿಂದ ಅನಾನುಕೂಲವಾಗಿದೆ.

ಕೊಳವೆಬಾವಿಗಳಲ್ಲಿ ಅಳವಡಿಸುವಂತಹ ಮೋಟಾರುಗಳು, ಅದರ ಜೊತೆಗೆ ವಿದ್ಯುತ್ತನ್ನು ಸರಬರಾಜಿಗೆಂದು ಖಚಿತ ಮಾಡಿರುವಂತದ್ದು ಹೀಗೆ ಲಕ್ಷಾಂತರ ರೂಪಾಯಿಗಳ ನಷ್ಟದಲ್ಲಿ ಇವತ್ತು ರೈತರು ತಮ್ಮ ಜೀವನವನ್ನು ಕಳೆಯುತ್ತಿದ್ದಾರೆ. ಸರ್ಕಾರದವರು ಯಾವಾಗ ವಿದ್ಯುತ್‌ನ್ನು ಕಡಿತಗೊಳಿಸುತ್ತಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ರೈತರು ಎಷ್ಟೋ ಪಂಪುಸೆಟ್ಟುಗಳು ಇವತ್ತು ಸುಟ್ಟು ಹೋಗಿರುವುದರ ಬಗ್ಗೆ ಆ ಕುರಿತು ಜಿಲ್ಲಾಧಿಕಾರಿಯವರ ಕಛೇರಿಗೆ ಸಾಕಷ್ಟು ದಾಖಲಾತಿಗಳನ್ನು ನಾನು ಒದಗಿಸಿಕೊಟ್ಟಿದ್ದೇನೆ. ಆದರೆ ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿಲ್ಲ. ಹಿಂದೆ ಸರ್ಕಾರ ಹೇಳಿರುವುದೇನೆಂದರೆ, ವಿದ್ಯುತ್ ಕಳ್ಳತನವಾಗುತ್ತಿದ್ದು, ಇದನ್ನು ಸರಿಪಡಿಸುವುದಕ್ಕಾಗಿ ರಾಜ್ಯದಲ್ಲಿ ಎಷ್ಟು ಕೊಳವೆ ಬಾವಿಗಳು ಇದೆ ಮೊದಲು ಅದರ ಲೆಕ್ಕಾಚಾರ ಸಿಗಬೇಕು. ಅದರ ಆದಾಯವನ್ನು ಗಮನದಲ್ಲಿಟ್ಟುಕೊಂಡು ನಾವು ವಿದ್ಯುಚ್ಛಕ್ತಿ ಸರಬರಾಜನ್ನು ಮಾಡಿಕೊಡುತ್ತೇವೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಇದೇ ಸದನದಲ್ಲಿ ಮುಖ್ಯಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ವಿಚಾರದ ಬಗ್ಗೆ ಮಾತನಾಡಿದ್ದಾರೆ. ಆದರೆ ಮೀಟರನ್ನು ಅಳವಡಿಸುವ ಬಗ್ಗೆ ಸಹ ಈ ಸದನದಲ್ಲಿ ವಿಚಾರ ಪ್ರಸ್ತಾವವಾಗಿದೆ. ಈ ಅಧಿವೇಶನದಲ್ಲಿ ಪ್ರಸ್ತಾಪವಾದ ವಿಚಾರ, ಅದಕ್ಕೆ ಸದನ ಸಮಿತಿ ರಚನೆಯಾಗಿ ಮೀಟರನ್ನು ಅಳವಡಿಸಕೊಡದು ಎಂದು ಒಂದು ನಿರ್ಣಯವನ್ನು ಮಾಡಿದರೂ ಸಹ ಇವತ್ತು ರೈತರು ಕಂಗಾಲಾಗಿರುವಂತಹ ಸಂದರ್ಭದಲ್ಲಿ ಜೊತೆಗೆ ಒಂದು ಸಾರಿ ಅಲ್ಲ, ಮೂರು ಸಾರಿ ವಿದ್ಯುತ್ ದರವನ್ನು ಏರಿಸಿ ಇವತ್ತು ಮೀಟರ್‌ಗಳನ್ನು ಅಳವಡಿಸುತ್ತೇವೆಂದು ಹೇಳಿದರೆ ರೈತರು ಯಾವ ರೀತಿಯಲ್ಲಿ ಜೀವನ ಮಾಡಬೇಕು ಎಂಬುದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ವಿರೋಧಪಕ್ಷದವರಾಗಿ ನಾವು ಹೇಳುವಂತಹ ವಿಚಾರ ಏನೆಂದರೆ ಸರ್ಕಾರ ಯಾವ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಜನರಿಗೆ ಆಶ್ವಾಸನೆಯನ್ನು ನೀಡಿತ್ತೋ, ಉತ್ತಮ ವಿದ್ಯುತ್‌ನ್ನು ರೈತರಿಗೆ ಸರಬರಾಜು ಮಾಡುವ ಬಗ್ಗೆ ಹಾಕಿಕೊಂಡಿರುವಂತಹ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸದೆ ಹೋದಲ್ಲಿ ಪ್ರಾಯಶಃ ನನ್ನ ಜಿಲ್ಲೆ ಮಾತ್ರವಲ್ಲ, ಇಡೀ ಕರ್ನಾಟಕದ ಯಾವುದೇ ಒಬ್ಬ ರೈತ ಮೀಟರನ್ನು ಅಳವಡಿಸುವ ಬಗ್ಗೆ ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸುತ್ತಾನೆ. ಉತ್ತಮ ವಿದ್ಯುತ್‌ನ್ನು ಒದಗಿಸಿಕೊಡುವುದರ ಬಗ್ಗೆ ಸರ್ಕಾರ ನಿರ್ಣಯ ಮಾಡಬೇಕೆಂದು ಹೇಳುತ್ತಾ ಈ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀ ಶರಣಬಸಪ್ಪ ದರ್ಶನಾಪುರ್ (ವಿದ್ಯುತ್ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳ ಅವಧಿಯಲ್ಲಿ ಕೆ.ಇ.ಬಿ. ಇಲಾಖೆಗೆ ಹೆಚ್ಚಿನ ಒಂದು ಮಹತ್ವವನ್ನು ಕೊಟ್ಟು ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದ್ದೇವೆ. ಅದು ವಿದ್ಯುತ್ತಿನ ಜನರೇಷನ್‌ನಲ್ಲಿರಬಹುದು, ಟ್ರಾನ್ಸ್‌ಮಿಷನ್‌ನಲ್ಲಿರಬಹುದು, ವಿಜಿಲೆನ್ಸ್‌ನಲ್ಲಿರಬಹುದು, ಸಿಸ್ಟಮ್ ಇಂಪ್ರೂವ್‌ಮೆಂಟ್‌ನಲ್ಲಿರಬಹುದು, ಈ ಒಂದು ಇಲಾಖೆಗೆ ಸಾಕಷ್ಟು ದುಡ್ಡು ಕೊಟ್ಟು

ಕೆಲಸವನ್ನು ನಾವು ತೆಗೆದುಕೊಂಡಿದ್ದೇವೆ. ಈಗಾಗಲೇ ಇಲ್ಲಿರತಕ್ಕ ಅನೇಕ ಸದಸ್ಯರು ವಿದ್ಯುಚ್ಛಕ್ತಿಯಿಂದ ಆಗುವ ತೊಂದರೆಯ ಬಗ್ಗೆ ಸಾಕಷ್ಟು ತಮ್ಮದೇ ಆದ ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಡೈಲಿ ಪವರ್ ಕನ್‌ಸಮ್‌ಷನ್ ಏನಾಗುತ್ತದೆ, ವರ್ಷ ವರ್ಷ ಎಷ್ಟು ಇನ್‌ಕ್ರೀಸ್ ಆಗುತ್ತದೆ, ಅದರ ಜೊತೆಯಲ್ಲಿ ನಮ್ಮ ಜನರೇಷನ್ ಇನ್‌ಕ್ರೀಸ್ ಆಗುತ್ತಿದೆ. ಈ ಜನರೇಷನ್ ಕಡೆ ನಮ್ಮ ಸರ್ಕಾರ ಕೂಡ ಸಾಕಷ್ಟು ಒತ್ತು ಕೊಟ್ಟು ಬಹಳಷ್ಟು ಯೋಜನೆಗಳಿಗೆ ಅನುಮತಿ ಕೊಟ್ಟಿದೆ. ಈಗಾಗಲೇ ಹೋದ ವರ್ಷ ಸುಮಾರು 70 ರಿಂದ 80 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಿದ್ದೇವೆ. ಈಗ ಬರತಕ್ಕಂತಹ ವರ್ಷದಲ್ಲಿ ಸುಮಾರು 600ರಿಂದ 700 ಅಥವಾ ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ ಕರ್ನಾಟಕದ ಗ್ರಿಡ್‌ಗೆ ಸೇರಿಸತಕ್ಕಂತಹ ಕಾರ್ಯಕ್ರಮ ಇದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ನಾಣಯ್ಯನವರ ಪತ್ರಿಕಾ ಹೇಳಿಕೆ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಈಗಾಗಲೇ ನಾವು ರೈತರಿಗೆ 300 ರೂ.ಎಂದು ಹೇಳಿ 500 ರೂ. ಯಾರಿಂದಲೂ ಕಲೆಕ್ಟ್ ಮಾಡಲಿಲ್ಲ. ನಾವು ಟ್ಯಾರಿಫ್ ಮಾಡಿದಾಗ ಕೃಷಿಗೆ 300 ರೂಪಾಯಿ ಒಂದು ಹೆಚ್.ಪಿ.ಗೆ ಮಾಡಿದ್ದೇವೆ. ಆದರೆ ಪ್ಲ್ಯಾಂಟೇಷನ್ ಕ್ರಾಪ್, ಕಾಫಿ ಇರಬಹುದು, ಆರ್ಕನೆಟ್ ಇರಬಹುದು, ಕೊಕನೆಟ್ ಇರಬಹುದು, ಇಂತಹವುಗಳಿಗೆ 500 ರೂಪಾಯಿ ಪರ್ ಹೆಚ್.ಪಿ. ಮಾಡಿದ್ದೇವೆ. ಇದರಲ್ಲಿ ಮೀಟರ್ ಯಾರಿಗೆ ಅಳವಡಿಸುತ್ತಾರೆ ಅವರಿಗೆ ಒಂದು ರೂಪಾಯಿ 40 ಪೈಸೆಯಂತೆ ಮಾಡಿದ್ದೇವೆ. ಏಕೆಂದರೆ, ಅಲ್ಲಿಯ ಸಾಕಷ್ಟು ಶಾಸಕರೂ ಕೂಡ ಹೇಳಿದರು, ನಮಗೆ ಮೀಟರ್ ಅಳವಡಿಸುವುದರಿಂದ ನಮಗೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ಆ ಭಾಗದಿಂದ ಬಂದಂತಹ ಸಾಕಷ್ಟು ಶಾಸಕರೂ ಕೂಡ ಅಭಿಪ್ರಾಯ ಪಟ್ಟರು. ಅದರ ಪ್ರಕಾರ ಸರ್ಕಾರ ಕೆಲಸ ಮಾಡುತ್ತಿದೆ. ಅಲ್ಲಿರತಕ್ಕಂತಹ ಶಾಸಕರಾಗಲಿ, ರೈತರಾಗಲಿ, ಬೇರೆ ರೈತರಿಂದ 300 ರೂಪಾಯಿ ತೆಗೆದುಕೊಳ್ಳುತ್ತಿದ್ದೀರಿ, ನಮ್ಮ ಭಾಗದಲ್ಲಿ ಬರತಕ್ಕಂತಹ ಪ್ಲ್ಯಾಂಟೇಷನ್‌ಗೆ 300 ರೂಪಾಯಿ ಮಾಡಬೇಕೆಂದೂ ಕೂಡ ಹೇಳಿದರು. ಈ ಒಂದು ನಿಟ್ಟಿನಲ್ಲಿ ನಮ್ಮ ಸರ್ಕಾರ ಕೂಡ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದೆ.

(ಗೊಂದಲ)

ಉಪಾಧ್ಯಕ್ಷರು: ನೀವು ಹೇಳಿದ್ದೆಲ್ಲಾ ಅವರು ಸಮಾಧಾನದಿಂದ ಕೇಳಿದ್ದಾರೆ. ಅವರ ಉತ್ತರ ಹೇಳಿದ ಮೇಲೆ ನೀವು ಮತ್ತೆ ಕೇಳಿ.

ಶ್ರೀ ಎಂ.ಪಿ.ಪ್ರಕಾಶ್: ಅಷ್ಟು ಸಿಟ್ಟಿಗೇಳಬೇಕಾದ ಅಗತ್ಯವಿಲ್ಲ. ತಾವು ಹಿರಿಯರು, ಯುವಕರಿಗೆ ಪ್ರೋತ್ಸಾಹ ಕೊಟ್ಟು ಅವರು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಸಭಾಧ್ಯಕ್ಷರು: ಸೀನಿಯರ್ ಮೆಂಬರ್ಸ್ ಹೀಗೆ ಮಾಡಿದರೆ ಹೇಗೆ? ಕ್ಲ್ಯಾರಿಫಿಕೇಷನ್ ನಂತರ ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ಓರಲ್ಲಾಗಿ ಹೇಳಿದ್ದಾರೆಂದು ಅವರು ಹೇಳಿದ್ದಾರೆ.

ಶ್ರೀ ಶರಣಬಸಪ್ಪ ದರ್ಶನಾಪೂರ: ಉತ್ತರ ಕೊಡುತ್ತಿದ್ದೇನೆ. ನೀವು ಏನೇನು ಹೇಳಿದ್ದೀರಿ ಅದನ್ನೆಲ್ಲಾ ಕೂತು ಕೇಳಿದ್ದೇವೆ. ನಾವು ಇಲ್ಲಿ ಕುಳಿತಿದ್ದೇವೆ, ಎದ್ದು ಹೋಗುತ್ತಿಲ್ಲ. ಬೇಕಾದ ಪ್ರಶ್ನೆ ಕೇಳಬಹುದು. ಏಕೆಂದರೆ ಇದು ಕ್ಯಾಬಿನೆಟ್ ಮುಂದೆ ಬಂದಿದೆ, ಚುನಾವಣೆ ಬಂದಿರುವುದರಿಂದ ಅವರಿಗೆ ಆರ್ಡರ್ ಕೊಡುವುದಕ್ಕಾಗಲಿಲ್ಲ, ಅದಕ್ಕೆ ಓರಲ್ಲಾಗಿ ಇನ್‌ಸ್ಟ್ರಕ್ಷನ್ಸ್ ಕೂಡ ಕೊಟ್ಟಿದ್ದೇವೆ. ನಾಳೆ ಕ್ಯಾಬಿನೆಟ್ ಮುಂದೆ ಈ ವಿಷಯ ಬರುತ್ತಿದೆ.

(ಗೊಂದಲ)

ಚುನಾವಣೆ ಇರುವುದರಿಂದ ನಾವು ಆರ್ಡರ್ ಇಶ್ಯೂ ಮಾಡಲಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅದು ಓರಲ್ ಡಾಕ್ಯುಮೆಂಟೆ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪ ಸಭಾಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ಕೆ.ಇ.ಬಿ. ವಿಚಾರಕ್ಕೆ ಸಂಬಂಧಪಟ್ಟಂತೆ ವಿಧಾನ ಮಂಡಲದ ಜಂಟಿ ಸಮಿತಿ ಮಾಡಿದಾಗ ಅದರಲ್ಲಿ ಯಡಿಯೂರಪ್ಪನವರು, ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಮುನಿಯಪ್ಪನವರು ಅವರೆಲ್ಲಾ ಇದ್ದರು. ಅವರೂ ಕೂಡ ಮೀಟರ್‌ಗಳನ್ನು ಅಳವಡಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ನಿಮ್ಮ ಸಮಿತಿ ಕೊಟ್ಟಿರತಕ್ಕಂತಹ ವರದಿ ಕೂಡ ಇದೆ. ಜಂಟಿ ಸಮಿತಿ ಕೊಟ್ಟಿರತಕ್ಕಂತಹ ವರದಿ ಇದ್ದರೂ ಕೂಡ ಸರ್ಕಾರ ಈ ಬಗ್ಗೆ ಯೋಚನೆ ಮಾಡುತ್ತಿದೆ. ಸಚಿವ ಸಂಪುಟದ ಸಭೆಯಲ್ಲಿ ಅದು ಬರುತ್ತದೆ. ನೀವೆಲ್ಲಾ ಸದಸ್ಯರಾಗಿರತಕ್ಕಂತಹ ಸಮಿತಿಯಿಂದ ಕೊಟ್ಟಿರತಕ್ಕಂತಹ ವರದಿಯಲ್ಲಿ ತಾವು ಮೀಟರ್ ಅಳವಡಿಸಬೇಕೆಂದು ಹೇಳಿದ್ದೀರಿ. ಅದು ಏನೇ ಇರಲಿ, ಇವತ್ತು ಬಂದಿರತಕ್ಕಂಥಾದ್ದರ ಬಗ್ಗೆ ಪ್ರತಿಭಟನೆ ಮಾಡುತ್ತಿದ್ದೀರಿ. ಮಾನ್ಯ ಸಚಿವರು ಮಾತನಾಡುವುದನ್ನು ಕೇಳಿ.

ಶ್ರೀ ವಿ.ಮುನಿಯಪ್ಪ: ನಾವು ಅಪ್ಪಣೆ ಕೊಟ್ಟಿಲ್ಲ, ನಾವು ಕೇವಲ 100 ರೂಪಾಯಿಗೆ ಮಾತ್ರ ಒಪ್ಪಿಗೆ ಕೊಟ್ಟಿದ್ದೆವು. ಅವರು 300 ರೂ.ಎಂದು ಹಾಕಿದ್ದಾರೆ. ಸದನ ಸಮಿತಿಯಲ್ಲಿ ತೀರ್ಮಾನ ಮಾಡಿದ್ದು ಒಂದು ಹೆಚ್.ಪಿ.ಗೆ 100 ರೂಪಾಯಿ ಮಾತ್ರ. ಮೀಟರ್ ಅಳವಡಿಸುವುದನ್ನು ನಾವು ವಿರೋಧ ಮಾಡಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್: ಅದು ಸದನದ ಸ್ವತ್ತು. ತಾವು ನೋಡಿ.... ಆ ಒಂದು ವಿಚಾರದಿಂದ ಸರ್ಕಾರ ಜೋತು ಬೀಳುತ್ತದೆ ಎಂದು ಇಲ್ಲ. ಬದಲಾದಂತಹ ಪರಿಸ್ಥಿತಿಯಲ್ಲಿ ರೈತರ ಬಗ್ಗೆ ನಿಮ್ಮಷ್ಟೇ ಕಾಳಜಿ ಇರತಕ್ಕಂತಹವರು ನಾವೆಲ್ಲರೂ ಇರುವುದರಿಂದ ಸಚಿವ ಸಂಪುಟ ಸಭೆಯಲ್ಲಿ ನಾಳೆ ಈ ವಿಚಾರವನ್ನು ತರುತ್ತೇವೆಂದು

ಮಾನ್ಯ ಸಚಿವರು ಹೇಳುತ್ತಿದ್ದಾರೆ. ದಯವಿಟ್ಟು ತಾವು ಕೇಳಿ.

ಶ್ರೀ ಶರಣ ಬಸಪ್ಪ ದರ್ಶನಾಪುರ್: ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಈಗಾಗಲೇ ಆ ಭಾಗದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗಿನ ಭಾಗದಿಂದ ಬಂದಿರತಕ್ಕಂತಹ ರೈತರಿಗೆ ಅವರಿಗೆ ನಮ್ಮ ಹತ್ತಿರ 500 ರೂಪಾಯಿ ವಸೂಲು ಮಾಡುತ್ತಿದ್ದಾರೆಂದು ಶಂಕೆ ಇದೆ. ನೀವು 300 ರೂಪಾಯಿ ಪರ್ ಹೆಚ್.ಪಿ.ಗೆ ತೆಗೆದುಕೊಳ್ಳಬೇಕು, ಇನ್ನು ಮೂರು ತಿಂಗಳ ಒಳಗೆ ಸುಮಾರು ಒಂದು ಲಕ್ಷ ಕನ್‌ಸ್ಯೂಮರ್ಸ್ ಏನು ಆ ಭಾಗದಲ್ಲಿದ್ದಾರೆ, ಅವರು ಎಲ್ಲರಿಗೂ ಮೀಟರ್ ಅಳವಡಿಸಿಕೊಡುತ್ತೇವೆಂದು ಹೇಳಿದ್ದೇವೆ, ಇದರಿಂದ ಅವರಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ಅವರೂ ಕೂಡ ಒಪ್ಪಿದ್ದಾರೆ. ಈ ಸದನದಲ್ಲಿ ಮಾನ್ಯ ಸದಾನಂದಗೌಡರೂ ಕೂಡ ಒಪ್ಪಿದ್ದಾರೆ. ಮೀಟರ್ ಅಳವಡಿಸುವುದರಿಂದ ನಾವು ಕಡಿಮೆ ವಿದ್ಯುತ್ತನ್ನು ಉಪಯೋಗಿಸುತ್ತೇವೆ, ಏಕೆಂದರೆ ಎರಡು ಮೂರು ತಿಂಗಳು ನಾವು ವಿದ್ಯುತ್ ಉಪಯೋಗಿಸುವುದರಿಂದ ನಾವು ಕೆ.ಇ.ಬಿ.ಗೆ ಕಡಿಮೆ ದುಡ್ಡು ತುಂಬುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಕೆಲಸ ಕೂಡ ಮಾಡುತ್ತೇವೆ. ಇನ್ನು ಜನರೇಷನ್‌ನಲ್ಲಿ ನಾವು ಸಾಕಷ್ಟು ಪ್ರಗತಿ ಕೊಡುವುದಕ್ಕಾಗುವುದಿಲ್ಲ. ನಿಮಗೆ ಗೊತ್ತಿರಬಹುದು, ರಾಯಚೂರಿನಲ್ಲಾಗಲಿ, ನಾನ್ ಕನ್‌ವರ್ಷನಲ್ ಎನರ್ಜಿಯಲ್ಲಿ ಚಿತ್ರದುರ್ಗ, ಕಪ್ಪತಗುಡ್ಡ, ಅನಂತ್‌ಸಾಗರ ಮತ್ತು ಗದಗ್‌ನಲ್ಲಿ ಸಾಕಷ್ಟು ಯೋಜನೆಗಳು ಕೂಡ ಬರುತ್ತಿವೆ, ಮತ್ತು ಕೊಜೆಂಟ್ರಿಕ್ಸ್ ಕೂಡ ಅತಿ ಶೀಘ್ರದಲ್ಲಿ ಬರತಕ್ಕಂತಹ ಯೋಜನೆ ಇರುವುದರಿಂದ ಗೇರುಸೊಪ್ಪ ಇರಬಹುದು, ಕೊಡಸಳ್ಳಿ ಇರಬಹುದು, ಮತ್ತು ಕದ್ರಾ ಇರಬಹುದು, ನಮ್ಮಲ್ಲಿ ಪ್ರತಿ ವರ್ಷ ಕನ್‌ಸಮ್‌ಷನ್ ಬಹಳ ಹೆಚ್ಚಿಗೆ ಹೋಗುತ್ತಿದೆ. ಹೋದ ವರ್ಷದಲ್ಲಿ ಈ ಸಮಯದಲ್ಲಿ ಸುಮಾರು 58-54 ಮಿಲಿಯನ್ ಯೂನಿಟ್‌ವರೆಗೆ ಖರ್ಚಾಗುತ್ತಿತ್ತು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಸುಮಾರು 72 ಮಿಲಿಯನ್ ಯೂನಿಟ್ಸ್‌ವರೆಗೆ ಖರ್ಚಾಗುತ್ತಿದೆ. ಈ ಕಾರಣದಿಂದ ನಮ್ಮಲ್ಲಿರತಕ್ಕಂತಹ ಗ್ರಿಡ್‌ಗಳು ವಿತರಣೆ ಮಾಡದೆ ಹೋದ ವರ್ಷದಿಂದ ಸುಮಾರು 2,000 ದಿಂದ 2,500 ಕೋಟಿ ರೂಪಾಯಿ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಕೊಟ್ಟಿದ್ದೇವೆ. ಸಾಕಷ್ಟು ಲೈನ್ಸ್ ಕೂಡ ನಾವು ಈ ವರ್ಷ ಕನೆಕ್ಷನ್ ಮಾಡಿದ್ದೇವೆ. ಸುಮಾರು 30 ಸಬ್ ಸ್ಟೇಷನ್‌ಗಳನ್ನು ಈ ವರ್ಷ ನಾವು ಕಮಿಷನ್ ಮಾಡಿದ್ದೇವೆ. ಅದರ ಜೊತೆಯಲ್ಲಿ ಸುಮಾರು 14 ಕಡೆ ಕೆಪ್ಯಾಸಿಟರ್ ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಕೆಲಸ ಮಾಡಿದ್ದೇವೆ. ಮಾನ್ಯ ಸಗೀರ್ ಅಹಮದ್‌ರವರ ಕ್ಷೇತ್ರದಲ್ಲಿ ಕೂಡ ಈ ಕೆಲಸ ಮಾಡಿದ್ದೇವೆ. ಅವರು ಮಾತನಾಡಬಾರದಾಗಿತ್ತು, ಅವರು ನೆನ್ನೆ ಬಂದು ನನಗೆ ಧನ್ಯವಾದ ಹೇಳಿ ಹೋಗಿದ್ದಾರೆ. ಆದರೂ ಕೂಡ ಇವತ್ತು ಈ ವಿಷಯ ಎತ್ತಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಅಲ್ಲಿ ಖಾಸಗಿಯಾಗಿ ಅಭಿನಂದನೆ ಸಲ್ಲಿಸಿ ಇಲ್ಲಿ ಸದನದಲ್ಲಿ ಬಂದು...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರ ಮತ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಕ್ಕೆ ಧನ್ಯವಾದಗಳು. ಆದರೆ ರೈತರಿಗೆ ತೊಂದರೆ ಕೊಡುತ್ತಿರಿ ಇದರ ಬಗ್ಗೆ ಪ್ರೊಟೆಸ್ಟ್ ಮಾಡುತ್ತಿದ್ದಾರೆ.

ಉಪಸಭಾಧ್ಯಕ್ಷರು: ಒಳಗೊಂದು, ಹೊರಗೊಂದು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ನಾನಂತೂ ಪ್ರಾರಂಭದಿಂದ ಒಂದೇ ನಮೂನೆಯಾಗಿದ್ದೇನೆ. ಆದರೆ ಇಲ್ಲಿ ಎರಡು-ಮೂರು ನಮೂನೆ ಮಾಡುತ್ತಾರೆ. ಆದ್ದರಿಂದ ಭಯವಾಗುತ್ತದೆ. ಮೂರು ವರ್ಷದಲ್ಲಿ ಮೂರು ನಮೂನೆಯಾಗಿದೆ. ಆದುದರಿಂದ ನಾವು ಒಂದೇ ನಮೂನೆ ಆಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಎರಡು ನಮೂನೆಯ ಅಭಿನಂದನೆ ಇದೆ. ಒಂದು ಖಾಸಗಿಯಾಗಿ, ಇನ್ನೂರು ಸರ್ಕಾರೀ ಅಭಿನಂದನೆ.

ಶ್ರೀ ಶರಣಬಸಪ್ಪ ದರ್ಶನಾಪೂರ್: ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಹೊಸ ಟ್ರಾನ್ಸ್‌ಮಿಷನ್ ಲೈನ್ಸ್ ಮತ್ತು ಟ್ಯಾಪ್‌ಲೈನ್ಸ್ ಹಾಕುವುದಕ್ಕೆ ಸುಮಾರು 55 ಕಾಮಗಾರಿಗಳನ್ನು ಈ ವರ್ಷದಲ್ಲಿ ಪೂರ್ಣಗೊಳಿಸಿದ್ದೇವೆ. ಈ ಒಂದು ವಿಷಯ ಕಳೆದ ಟ್ಯಾರಿಫ್ ಕಮಿಟಿ ಏನಿತ್ತು ಅದರಲ್ಲಿ ಕೂಡ ಬಂದಿತ್ತು, ಈಗಾಗಲೇ ನಾವು ರೈತರಿಗೆ 45 ಪರ್ಸೆಂಟ್ ಕೊಟ್ಟು, ನಮ್ಮ ಇಲಾಖೆಯವರು ಹೇಳುತ್ತಿದ್ದಾರೆ, ಏತಕ್ಕೆ ಅಲ್ಲಿರತಕ್ಕಂತಹವರು, ಇಲ್ಲ ನೀವು 25 ಪರ್ಸೆಂಟ್ ಎಂದು ಹೇಳುತ್ತಾರೆ. ನಾವು ಯಾವ ರೀತಿ ಅಸೆಸ್ ಮಾಡುವುದು? ಇದರ ಬಗ್ಗೆ ಆ ಸಮಿತಿಯಲ್ಲಿ ಚರ್ಚೆ ಕೂಡ ಆಗಿದೆ. ಆ ಕಮಿಟಿ ಮುಖಾಂತರ ಕೆಲವೊಂದು ಕಡೆ ಟ್ರಯಲ್ ಮಾಡಿ ನಾಲ್ಕು ತಾಲ್ಲೂಕುಗಳನ್ನು ಸೆಲೆಕ್ಟ್ ಮಾಡಿ ಮೀಟರ್ ಅಳವಡಿಸಬೇಕೆಂದು ಆ ಸಮಿತಿಯಲ್ಲಿ ತೀರ್ಮಾನ ಕೂಡ ಆಗಿದೆ. ಅದೇ ಪ್ರಕಾರ ನಾವು ಏನು ಮೀಟರ್ ಹಾಕುತ್ತೇವೆ, ಆ ಮೀಟರ್ ಪ್ರಕಾರ ಛಾರ್ಜ್ ಮಾಡುತ್ತಿಲ್ಲ. ಈಗ ಏನು ನಾವು 300 ರೂಪಾಯಿ ಪರ್ ಹೆಚ್.ಪಿ. ಶುಲ್ಕ ವಿಧಿಸುತ್ತೇವೆ, ಅದನ್ನೇ ನಾವು ರೈತರಿಂದ ಕಲೆಕ್ಟ್ ಮಾಡುತ್ತೇವೆ. ಮೀಟರ್ ಅಳವಡಿಸುವ ಜಾಗದಲ್ಲಿ ನಾವು ಯಾರೂ ಮೀಟರ್‌ನಿಂದ ತೆಗೆದುಕೊಳ್ಳುವುದಿಲ್ಲ. ಮೀಟರ್ ಅಳವಡಿಸುವುದರಿಂದ ಥೆಫ್ಟ್ ಅನ್ನು ಕಂಡುಹಿಡಿಯಬಹುದು. ಬಹಳಷ್ಟು ಥೆಫ್ಟ್ ಕೂಡ ಆಗುತ್ತಿದೆ. ಈ ವರ್ಷ ವಿಜಿಲೆನ್ಸ್‌ನಲ್ಲಿ ಸಾಕಷ್ಟು ಕೇಸ್‌ಗಳನ್ನು ಬುಕ್ ಮಾಡಿ ಸುಮಾರು ನಾಲ್ಕು ವರ್ಷದಲ್ಲಿ ಬರತಕ್ಕಂತಹ ಮಡ್ಡನ್ನು ನಾವು ಒಂದೇ ವರ್ಷದಲ್ಲಿ ವಿಜಿಲೆನ್ಸ್ ಮುಖಾಂತರ ಕಲೆಕ್ಟ್ ಮಾಡಿದ್ದೇವೆ. ಥೆಫ್ಟ್ ಕೂಡ ಆಗುತ್ತಿದೆ. ಥೆಫ್ಟ್ ಮುಖಾಂತರ ಟ್ರಾನ್ಸ್‌ಮಿಷನ್‌ನಲ್ಲಿ ಕೂಡ ನಮಗೆ 18 ರಿಂದ 20 ಪರ್ಸೆಂಟ್ ಲಾಸ್ ಇದೆ ಎಂದು ನಮ್ಮ ಸದಸ್ಯರ ವಾದ ಇತ್ತು. ಈ ರೀತಿ ಅಸೆಸ್ ಮಾಡಬೇಕಾದರೆ ಇರಿಗೇಷನ್ ಸೆಕ್ಟಾರ್‌ನಲ್ಲಿ ನಾವು ಕೊಡುತ್ತಿರುವ ವಿದ್ಯುತ್ತಿನ ಯೂನಿಟ್‌ಅನ್ನು ಅಸೆಸ್ ಮಾಡುವುದಕ್ಕೆಂದು ಮೀಟರ್ ಅಳವಡಿಸುವುದಕ್ಕೆ ತೀರ್ಮಾನ ಕೂಡ ಮಾಡಿದ್ದೇವೆ.

ಅದರ ಪ್ರಕಾರ ಸರ್ಕಾರ ಕೂಡ ಕೆಲಸ ಮಾಡುತ್ತಿದೆ. ನಾವು ಮೀಟರ್ ಅಳವಡಿಸಿದ ಯಾರಿಂದಲೂ ಕೂಡ ಪರ್ ಯೂನಿಟ್‌ಗೆ 50 ಪೈಸೆ ಇರಬಹುದು, 1.40 ಪೈಸೆ ಇರಬಹುದು, ನಾವು ಅದನ್ನು ತೆಗೆದುಕೊಳ್ಳುತ್ತಿಲ್ಲ. ಈಗ ನಾವು 300 ರೂಪಾಯಿ ಪರ್ ಹೆಚ್.ಪಿ. ತೆಗೆದುಕೊಳ್ಳುತ್ತೇವೆ. ಇದೇ ರೇಟ್ ಎಲ್ಲಾ ಕಡೆಯೂ ಇದೆ ಎಂದು ಮಾನ್ಯ ಎಲ್ಲಾ ಸದಸ್ಯರಿಗೆ. ಮತ್ತು ಕರ್ನಾಟಕ ರಾಜ್ಯದ ರೈತರಿಗೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಬಯಸುತ್ತೇನೆ. ಈಗಾಗಲೇ ಸಾಕಷ್ಟು ಹೆಚ್ಚಿನ ಆದಾಯ ಕೂಡ ಟ್ಯಾರಿಫ್ ಮುಖಾಂತರ ಬಂದಿದೆ, ನೀವು ಏನೂ ಮಾಡುತ್ತಿಲ್ಲ ಎಂದು ಹೇಳಿದರು, ನಾವು ಕೆಪಿಸಿಯವರಿಗೆ ದುಡ್ಡು ಕೊಡುತ್ತಿದ್ದೇವೆ. ಸುಮಾರು ನಾಲ್ಕು ತಿಂಗಳ ಮೊದಲು ಕೆಪಿಸಿಯವರಿಗೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈಗ ಅದು 60 ಕೋಟಿ ರೂಪಾಯಿ ಮತ್ತು ಅದರ ಜೊತೆಗೆ ಸರ್ಕಾರದಿಂದ 25 ಕೋಟಿ ರೂಪಾಯಿ ಒಟ್ಟು 85 ಕೋಟಿ ರೂಪಾಯಿ ಪ್ರತಿ ತಿಂಗಳು ಕೊಡುತ್ತಿದ್ದೇವೆ. ಈಗ ಅಲ್ಲಿಯೂ ಕೂಡ ಬಿಲ್ಲಿಂಗ್ ಜಾಸ್ತಿಯಾಗಿದೆ. ರಾಯಚೂರು ಥರ್ಮಲ್ ಯೂನಿಟ್‌ಗೆ ಇರತಕ್ಕಂತಹ ಕೋಲ್ ರೇಟ್ ಕೂಡ 18 ರಿಂದ 20 ಪರ್ಸೆಂಟ್‌ನಷ್ಟು ಜಾಸ್ತಿಯಾಗಿದೆ. ನಮ್ಮ ಬಿಲ್ಲಿಂಗ್‌ನಿಂದ ಬರತಕ್ಕಂಥದ್ದೂ ಕೂಡ ಜಾಸ್ತಿಯಾಗಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಒಂದು ರೀತಿಯ ತೊಂದರೆಗಳಾದವು, ಈ ಒಂದು ಅರ್ಬನ್ ಗ್ರಿಡ್‌ಗೆ ಸುಮಾರು 10 ಗಂಟೆ ಪವರನ್ನು ನಾವು ಮೂರು ಫೇಸ್‌ಗಳಲ್ಲಿ ಕೊಡುತ್ತಿದ್ದೇವೆ. 6 ರಿಂದ 12, 12 ರಿಂದ 6, ಎರಡು ಶಿಫ್ಟ್ ಮತ್ತು ರಾತ್ರಿಯಲ್ಲಿ ಕೂಡ ನಾಲ್ಕು ನಾಲ್ಕು ಗಂಟೆ ಶಿಫ್ಟ್ ಕೊಟ್ಟು ಸುಮಾರು 10 ಗಂಟೆ ನಾವು ವಿದ್ಯುತ್ ಕೊಡುತ್ತಿದ್ದೇವೆ.

(ಗೊಂದಲ)

2.30 ಪಿ.ಎಂ

ಉಪಾಧ್ಯಕ್ಷರು: ಅವರು ಮೊದಲು ಉತ್ತರವನ್ನು ಕೊಡಲಿ ನಂತರ ನೀವು ಒಬ್ಬೊಬ್ಬರಾಗಿ ಕ್ಲಾರಿಫಿಕೇಷನ್‌ನ್ನು ಕೇಳಿ. ನೀವೆಲ್ಲಾ ಹಿರಿಯ ಸದಸ್ಯರಾಗಿ ಹೀಗೆ ಮಾಡಿದರೆ ಹೇಗೆ?

ಶ್ರೀ ಶರಣಬಸಪ್ಪ ದರ್ಶನಾಪೂರ್: ನಮ್ಮ ರಾಜ್ಯದಲ್ಲಿ ಜನರೇಷನ್ ಸ್ಟೇಶನ್‌ನಲ್ಲಿ ಬಹಳಷ್ಟು ತೊಂದರೆ ಇದೆ. ಅದು ರಾಮಗೊಂಡಮ್‌ನಲ್ಲಿ ಇರಬಹುದು, ನೈವೇಲಿ ಲಿಗ್‌ನೈಟ್‌ನಲ್ಲಿ ಇರಬಹುದು ಅಥವಾ ರಾಯಚೂರು ಯೂನಿಟ್‌ನಲ್ಲಿ ಇರಬಹುದು. ಈ ಒಂದು ಜನರೇಷನ್ ತೊಂದರೆಯಿಂದಾಗಿ ನಮ್ಮ ಕಾರ್ಯಾಚರಣೆಯಲ್ಲಿ ಒಂದೇ ಸ್ಕೀಮ್ ಏನು ಕೊಟ್ಟಿದ್ದೇವೆ ಅದರಲ್ಲಿ ಬಹಳಷ್ಟು ಏರುಪೇರು ಕೂಡ ಆಗಿದೆ. ಅದರ ಬಗ್ಗೆ ನಾವು ಇಲ್ಲ ಎಂದು ಹೇಳಿಕೊಳ್ಳುತ್ತಿಲ್ಲ. ಆದರೆ ಈಗ ಕೂಡ ನಾವು ಹೆಚ್ಚಿನ ರೀತಿಯಿಂದ ಬರತಕ್ಕಂಥ ವಿದ್ಯುಚ್ಛಕ್ತಿ ಏನು ಇದೆ ನಮ್ಮ ಗ್ರಿಡ್ ವಿದ್ಯುಚ್ಛಕ್ತಿ ಏನು ಜಮಾ ಆಗುತ್ತದೆ ಆ ವಿದ್ಯುಚ್ಛಕ್ತಿಯನ್ನು ನಾವು ಯಾವ ರೀತಿಯಾಗಿ ಕೊಡಬೇಕು ಎನ್ನುವಂಥ ಯೋಜನೆ

ಮಾಡಿದ್ದೇವೆ. ಹಾಗೂ ಟೈಮ್ ಕೂಡ ಕೊಟ್ಟಿದ್ದೇವೆ. ಎಷ್ಟು ಸಮಯದಿಂದ, ಎಷ್ಟು ಸಮಯ ನಾವು ಕೊಡುತ್ತಿದ್ದೇವೆ ಎಂದು ಟೈಮ್ ಕೂಡ ಕೊಟ್ಟಿದ್ದೇವೆ. ಅದರಲ್ಲಿ ಏನಾದರೂ ಒಂದು ಏರುಪೇರಾದರೆ ಇಂತಹ ಒಂದು ಜನರೇಷನ್ ಸ್ಟೇಷನ್, ಏನಾದರೂ ಆದರೆ ನಾವು ಏನು ಮಾಡಬೇಕು? ಇದು ಒಂದು ಅನಿವಾರ್ಯ ಪರಿಸ್ಥಿತಿ. ಯಾರೇ ಆಗಲಿ ಈ ಜಾಗಕ್ಕೆ ಬಂದರೆ ಇದನ್ನೇ ಮಾಡಬೇಕಾಗುತ್ತದೆ. ಇದಕ್ಕೆ ಬೇರೆ ವಿಧಿಯೇ ಇಲ್ಲ. ಅದರ ಜೊತೆಗೆ ನಾವು ಮುಖ್ಯವಾಗಿ ಸಿಸ್ಟಮನ್ನು ಇಂಪ್ರೂವ್‌ಮೆಂಟ್ ಮಾಡಿ, ಜನರೇಷನ್‌ನ್ನು ಹೆಚ್ಚಿಗೆ ಮಾಡುವ ಕಡೆಗೆ ಸರ್ಕಾರದ ಗಮನವನ್ನು ಕೊಡುತ್ತಿದ್ದೇವೆ. ರೈತರಿಗೆ ಯಾವುದೇ ರೀತಿಯ ತೊಂದರೆಯನ್ನು ಕೊಡುವುದಿಲ್ಲ. ಅವರಿಗೆ ಮೀಟರ್ ಹಾಕಿದ್ದೇವೆ ಎಂದ ತಕ್ಷಣ ಅವರಿಂದ ಅದರ ಪ್ರಕಾರ ರೇಟ್ ತೆಗೆದುಕೊಳ್ಳುತ್ತಿಲ್ಲ ಆದಕಾರಣ ಅವರು ಭಯ ಪಡಬೇಕಾಗಿಲ್ಲ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳಬಯಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ ನಾನು ಹೆಚ್ಚಿಗೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದೀಗ ಮಾನ್ಯ ಮಂತ್ರಿಗಳು ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಮುಂದೆ ಬಹಳ ಮುಖ್ಯವಾಗಿ ಇರತಕ್ಕಂಥ ಪ್ರಶ್ನೆ ಎಂದರೆ ನಮ್ಮ ರಾಜ್ಯದಲ್ಲಿ ರೈತರು ಪಂಪ್‌ಸೆಟ್‌ಗಳನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ಹತ್ತು ತಾಸು ಕರೆಂಟ್ ಕೊಡುತ್ತಿದ್ದೇವೆ, ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಕೋಲಾರದಿಂದ ತುಮಕೂರಿನಿಂದ, ಬೀದರ್‌ನಿಂದ, ಬೆಂಗಳೂರು ರೂರಲ್‌ನಿಂದ ಪಂಪ್‌ಸೆಟ್ ಇಟ್ಟುಕೊಂಡಿರುವ ಅನೇಕ ಜನ ನಮ್ಮಲ್ಲಿಗೆ ಬಂದು ದಿನಕ್ಕೆ ಹತ್ತು ತಾಸು ಕರೆಂಟ್ ಕೊಡುವುದು ಬಿಡಿ, ಸುಮಾರು ಎಂಟು ಹತ್ತು ದಿವಸದಿಂದ ನಮ್ಮಲ್ಲಿ ಕರಂಟೇ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಸುಮ್ಮನೆ ದಿನಕ್ಕೆ ಎಂಟು ಹತ್ತು ತಾಸು ಕರೆಂಟ್ ಕೊಡುತ್ತೇವೆ ಎಂದು ಹೇಳುತ್ತಿರುವುದು ಸರಿಯಲ್ಲ. ವಿಶೇಷವಾಗಿ ಈ ಇಲಾಖೆಯ ಉಸ್ತುವಾರಿ ಇರತಕ್ಕಂಥವರು ಮಾನ್ಯ ಮುಖ್ಯಮಂತ್ರಿಗಳು. ಮಾನ್ಯ ದರ್ಶನಾಪೂರ್‌ರವರ ಕೂಡ ಮಂತ್ರಿಗಳು ಅವರು ಉತ್ತರ ಕೊಡಬಾರದೆಂದು ನಾನು ಹೇಳುತ್ತಿಲ್ಲ. ಇಷ್ಟೊಂದು ದೊಡ್ಡ ಖಾತೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪಾದನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಪದೇ ಪದೇ ಅವರು ಹೇಳಿದರು. ಆದರೆ ಈ ಮೂರು ವರ್ಷದಲ್ಲಿ ಅವರು ಆ್ಯಡ್ ಮಾಡಿದ್ದು ಎಂದರೆ ಐವತ್ತು ಮೆಗಾವ್ಯಾಟ್ ಮಾತ್ರ. ನೀವು ಎಂಭತ್ತು ಎಂದು ಹೇಳುತ್ತಿದ್ದೀರಿ. ಆದರೆ ನಿಮ್ಮ ಫೆಬ್ರವರಿಯ ಕೊನೆಯ ಫರ್‌ಫಾರ್ಮೆನ್ಸ್ ನೋಡಿದಾಗ ಅದು ಐವತ್ತು ಎಂದು ತೋರಿಸುತ್ತಿದೆ. ಆ ಫಿಗರ್ಸ್ ನೀವು ಕೊಟ್ಟಂಥ ಪುಸ್ತಕದಲ್ಲಿ ಇವೆ. ಬೇಕಾದರೆ ತಾವು ತೆಗೆದು ನೋಡಬಹುದು. ನೀವು ಹೇಳಿದಂಥ ಎಂಭತ್ತು ಮೆಗಾವ್ಯಾಟನ್ನು ಒಪ್ಪಿಕೊಂಡರೂ ಕೂಡ ಇನ್ನು ಕಡಿಮೆ

ಇರುವುದು ಸುಮಾರು ಎರಡು ಸಾವಿರದ ಐನೂರು ಮೆಗಾವ್ಯಾಟ್. ನೀವು ಇವೊತ್ತು ಬರೀ ಎಂಭತ್ತು ಮೆಗಾವ್ಯಾಟ್ ಉತ್ಪಾದನೆ ಮಾಡಿ ನಾವು ಅಷ್ಟು ಮಾಡಿದ್ದೇವೆ, ಇಷ್ಟು ಮಾಡಿದ್ದೇವೆ ಎಂದು ಶಹಾಭಾಸ್‌ಗಿರಿ ಹೇಳಿಕೊಂಡು ಹೊರಟಿದ್ದೀರಿ. ಇನ್ನೊಂದು ಕಡೆ ಹತ್ತು ತಾಸ್ ಕರೆಂಟ್ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಹತ್ತು ದಿವಸದಿಂದ ಕೆಲವೊಂದು ಕಡೆ ಒಂದು ತಾಸು ಕೂಡ ಕರೆಂಟ್ ಇಲ್ಲದೆ ಇವೊತ್ತು ಕೊಟ್ಯಾಂತರ ಬೆಲೆ ಬಾಳುವ ರೈತರ ಬೆಳೆ ನಾಶ ಆಗುತ್ತಿದೆ. ಇದನ್ನು ಬಹಳ ಲಘುವಾಗಿ ಇವೊತ್ತು ಸರ್ಕಾರ ತೆಗೆದುಕೊಂಡಿದೆ. ಏತಕ್ಕೆ ಈ ರೀತಿ ತೆಗೆದುಕೊಂಡಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಯಾವ ಸರ್ಕಾರ ಇದ್ದರೂ ಕೂಡ ಇಷ್ಟೇ ಮಾಡುತ್ತದೆ ಎಂದು ಏನು ನೀವು ಹೇಳಿದ್ದರಲ್ಲಾ, ಅದು ಸತ್ಯಕ್ಕೆ ದೂರವಾದ ಮಾತು, ಏತಕ್ಕೆಂದರೆ ಹಿಂದೆ ಕೂಡ ಇಷ್ಟೇ ಉತ್ಪಾದನೆ ಇತ್ತು. ಆದರೂ ಕೂಡ ಸರ್ಕಾರ ಲುಕ್ಸಾನನ್ನು ಸಹಿಸಿಕೊಂಡು ರೈತರಿಗೆ ಸಹಾಯ ಮಾಡತಕ್ಕಂಥದ್ದನ್ನು ಮಾಡಿದರು. ಇವೊತ್ತು ನೀವು ಸದನದ ಸಮಿತಿಯ ರಿಪೋರ್ಟ್ ಬಗ್ಗೆ ಹೇಳುತ್ತಿದ್ದೀರಿ, ಅವರು ನೂರು ರೂಪಾಯಿ ಶಿಫಾರಸ್ಸು ಮಾಡಿದ್ದಾರೆ ಎಂದು ಹೇಳಿದ್ದೀರಿ. ಅವರು ನೂರು ರೂಪಾಯಿ ಶಿಫಾರಸ್ಸು ಮಾಡಿದರೆ ನೀವು ಐನೂರು ರೂಪಾಯಿ ಮಾಡಿದಿರಾ? ಇದೇನು ವಿಚಿತ್ರ? ನಾನು ಹೇಳುವುದೇನೆಂದರೆ, ಕೆಲವು ಕನ್ಸಿಷನ್ಸ್‌ನ್ನು ನಾವು ಗೊತ್ತಿದ್ದರೂ ಕೊಡಬೇಕಾಗುತ್ತದೆ. ಅದರಿಂದ ಲುಕ್ಸಾನ್ ಆಗುತ್ತಿರಬಹುದು ನಿಜ. ಆದರೆ ಆ ಲುಕ್ಸಾನನ್ನು ಭರಿಸತಕ್ಕಂಥ ಶಕ್ತಿಯನ್ನು ಸರ್ಕಾರ ತಂದುಕೊಳ್ಳಬೇಕಾಗುತ್ತದೆ. ಏಕೆಂದರೆ ರೈತರಿಗೆ, ಕೆಲವು ವೀಕರ್ ಸೆಕ್ಷನ್ಸ್‌ಗಳಿಗೆ ನೀವು ಸಹಾಯ ಮಾಡುವಾಗ ಅಲ್ಲಿ ಲಾಭ ಬರುತ್ತದೆ ಎಂದು ಇಟ್ಟುಕೊಳ್ಳಬಾರದು, ಅದರಿಂದ ಅಪ್ರತ್ಯಕ್ಷವಾದ ಲಾಭ ರಾಜ್ಯಕ್ಕೆ ಹಾಗೂ ದೇಶಕ್ಕೆ ಆಗುತ್ತದೆ. ಏಕೆಂದರೆ ಅವನು ಬೆಳೆಯುವ ಬೆಳೆ ಕೋಟ್ಯಾಂತರ ಜನರಿಗೆ ಶಕ್ತಿ ಕೊಡುವಾಗ ನೀವು ಸರ್ಕಾರದ ಖಜಾನೆಯಿಂದ ಕೆಲವು ದುಡ್ಡನ್ನು ಕೊಡಬೇಕಾಗುತ್ತದೆ. ಇದು ಬರೀ ಕಮರ್ಷಿಯಲ್ ಯುನಿಟ್ ಎಂದು ಹೇಳಿ ನೀವು ಬರೀ ಕಮರ್ಷಿಯಲ್ ದೃಷ್ಟಿಯಿಂದ ನೋಡಿಕೊಂಡು ಹೋದರೆ ರೈತರಿಗೆ ನೀವು ಸಹಾಯ ಮಾಡಿದ ಹಾಗೆ ಆಗುತ್ತದೆಯೇ? ಆ ದೃಷ್ಟಿಯಿಂದಲೇ ಹಿಂದಿನ ಸರ್ಕಾರ ಇದಕ್ಕೆ ಸಹಾಯ ಮಾಡಿತ್ತು. ಆ ಸಹಾಯವನ್ನು ನೀವು ವಿಥ್‌ಡ್ರಾ ಮಾಡಿಕೊಂಡಿದ್ದೀರಿ. ಮೀಟರ್ ಫಿಕ್ಸ್ ಮಾಡಿದ್ದೀರಿ. ಹಾಗೂ ಒಂದೊಂದು ಪೋಲಿಗೂ ಸಹ ಡಿಪಾಸಿಟ್ ತೆಗೆದುಕೊಂಡು ಪೋಲನ್ನು ಹಾಕುತ್ತಿದ್ದೀರಿ. ಅದರ ಜೊತೆಗೆ ಫೆನಾಲ್ಟಿ ಹಾಕುತ್ತಿದ್ದೀರಿ. ಒಂದಲ್ಲ ಅನೇಕ ರೀತಿಯಿಂದ ರೈತರಿಗೆ ಎಷ್ಟು ಕಿರುಕುಳ ಕೊಡಬೇಕು ಅಷ್ಟನ್ನು ಕೊಡುತ್ತಿದ್ದೀರಿ. ಅದರ ಶಿಕ್ಷೆಯನ್ನು ನೀವು ಅನುಭವಿಸಿದ್ದೀರಿ ಎಂದು ಕೆಲವರು ಹೇಳಿದರು. ಏಕೆಂದರೆ ಜನ ಬೇಸತ್ತಿದ್ದಾರೆ. ನೀವು ಸೋಲಲು ಅದೂ ಕೂಡ ಒಂದು ನೆಗೆಟಿವ್ ಫ್ಯಾಕ್ಟರ್. ನಾನು ರಾಜಕೀಯ ಬೆರೆಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿಲ್ಲ. ಇದು ಫ್ಯಾಕ್ಟ್ ಇದೆ. ಇಷ್ಟಾದರೂ ಕೂಡ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಕಣ್ಣು ತೆರೆಯುತ್ತಿಲ್ಲ. ಕೆ.ಪಿ.ಸಿ. ಹಾಗೂ ಕೆ.ಇ.ಬಿ. ಇವು ನಿಮ್ಮ ಸಂಸ್ಥೆಗಳು ಅದನ್ನು ನೀವು ಹೇಗೆ ನಡೆಸುತ್ತೀರೋ ಹಾಗೆ

ನಡೆಸಿ ಎಂದು ಹೇಳಿದರೆ ಹೇಗೆ? ಕೆ.ಎಸ್.ಆರ್.ಟಿ.ಸಿ. ಕೂಡ ನಿಮ್ಮ ಸಂಸ್ಥೆ ನೀವೇ ನೋಡಿಕೊಳ್ಳಿ ಎಂದು ಅವರಿಗೆ ಹೇಳಿದರೆ ಹೇಗೆ? ಇವೆಲ್ಲವೂ ಕೂಡ ಸರ್ವೀಸ್ ಓರಿಯೆಂಟೆಡ್ ಸಂಸ್ಥೆಗಳು. ಆಸ್ಪತ್ರೆಗಳು, ಕೆ.ಎಸ್.ಆರ್.ಟಿ.ಸಿ., ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಇವೆಲ್ಲವೂ ಕೂಡ ವೆಲ್‌ಫೇರ್ ಸ್ಟೇಟ್ಸ್‌ನಲ್ಲಿ ಸರ್ವೀಸ್ ಓರಿಯೆಂಟೆಡ್ ಸಂಸ್ಥೆಗಳು. ಇವುಗಳಿಗೆ ಸ್ವಲ್ಪ ಕಡಿಮೆ ಬಿದ್ದರೂ ಕೂಡ ನೀವು ಬೇರೆ ರೀತಿಯಿಂದ ಇದಕ್ಕೆ ಹಣ ಮೊಬಿಲೈಸ್ ಮಾಡಬೇಕಾಗುತ್ತದೆ. ಇವೊತ್ತು ನೀವು ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಿಂದ ಹಣ ಕಲೆಕ್ಟ್ ಮಾಡುತ್ತಿದ್ದೀರಿ, ಏತಕ್ಕೆ ಮಾಡುತ್ತಿದ್ದೀರಿ? ಜನ ಕುಡಿದು ನಿಮಗೆ ಹಣ ಕೊಡುತ್ತಿದ್ದಾರೆ, ಇದು ಅವರ ದುಡಿಮೆಯ ಹಣ, ಅದು ಟ್ಯಾಕ್ಸ್ ಅಲ್ಲ. ಅಂತಹದ್ದು ನಿಮಗೆ ಅನೇಕ ರಿಸೋರ್ಸಸ್ ಇದ್ದರೂ ಕೂಡ ಆ ರಿಸೋರ್ಸ್‌ಸ್‌ನ್ನು ತಂದು ಇದನ್ನೆಲ್ಲಾ ಸರಿ ಮಾಡತಕ್ಕಂಥದ್ದನ್ನು ಬಿಟ್ಟು, ಇಲ್ಲ ನಾವು ಇದನ್ನು ಸರಿಯಾಗಿ ನಡೆಸಬೇಕು, ನಾವು ಕಮರ್ಷಿಯಲ್ಲಾಗಿ ನಡೆಸಬೇಕು ಎಂದು ನೀವು ಹೇಳಿಕೊಂಡು ಬಂದರೆ ನೀವು ರೈತರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆಯೇ? ಹತ್ತು-ಹನ್ನೊಂದು ಸಾವಿರ ಪಂಪ್‌ಸೆಟ್ಸ್ ಅಂದರೆ ಒಂದು ಕೋಟಿ ಜನರಿಗೆ ಅಫೆಕ್ಟ್ ಆಗತಕ್ಕಂಥ ಯೋಜನೆ ಇದು. ಅದರ ಜೊತೆಗೆ ಪರ್ ಹೆಕ್ಟೇರ್‌ಗೆ ಐನೂರು ರೂಪಾಯಿ ಪರ್ ಹಾರ್ಸ್‌ಪವರ್ ಮಾಡಿದ್ದಾರೆ, ಮತ್ತು ಪ್ರತಿಯೊಂದು ಯೂನಿಟ್‌ಗೆ ಒಂದು ರೂಪಾಯಿ ನಲವತ್ತು ಪೈಸೆ ಕೊಡಬೇಕು ಎಂದು ಏನು ಮಾಡಿದ್ದಾರೆ, ಇದನ್ನೆಲ್ಲವನ್ನೂ ನಾವು ನೋಡಿದಾಗ ನಿಜವಾಗಲೂ ಇವರಿಗೆ ರೈತರ ಬಗ್ಗೆ ಏನೂ ಕಾಳಜಿ ಇಲ್ಲ ಎಂದು ನನಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದಕ್ಕಾಗಿ ನಾವು ಈ ಮನೆಯಲ್ಲಿ ಎಷ್ಟು ಸಾರಿ ಧರಣಿ ಮಾಡಬೇಕು? ಎಷ್ಟು ಸಾರಿ ನಾವು ಹಠ ಹಿಡಿಯಬೇಕು? ಈಗಾಗಲೇ ನಾವು ಮೂರು ಸಾರಿ ಮಾಡಿದ್ದೇವೆ. ಮೂರು ಸಾರಿ ಇವರು ಟ್ಯಾರಿಫ್ ಏರಿಸಿಕೊಂಡು ಬಂದಿದ್ದಾರೆ, ಬಸ್ಸಿನ ದರ ಏರಿಸಿದ್ದಾರೆ, ನೀರಿನ ದರ ಏರಿಸಿದ್ದಾರೆ, ಹಾಲಿನ ದರ ಏರಿಸಿದ್ದಾರೆ. ಎಲೆಕ್ಟ್ರಿಸಿಟಿಯಂತು ನೇರವಾಗಿ ರೈತರಿಗೆ ಸಂಬಂಧಪಟ್ಟಂಥದ್ದು ನಾವೆಲ್ಲರೂ ಕೂಡ ರೈತರಲ್ಲವೇನು ಎಂದು ಹೇಳಿಕೊಳ್ಳುತ್ತಾ ಅವರು ಸಮರ್ಥನೆ ಮಾಡುತ್ತಾ ಹೋದರು. ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಸಮರ್ಥನೆ ಮಾಡಿಕೊಂಡರು ಎಂದರೆ ಅವರೆಲ್ಲರೂ ಕೊಡುವುದಕ್ಕೆ ತಯಾರಿದ್ದಾರೆ ನೀವು ಏತಕ್ಕೆ ಅದನ್ನು ಅಲ್ಲಗಳೆಯುತ್ತೀರಿ ಎಂದರು. ನೀವು ಒಂದು ಕಡೆ ಕರೆಂಟು ಕೊಡುವುದಿಲ್ಲ, ಎಲೆಕ್ಟ್ರಿಸಿಟಿಯನ್ನು ಕೊಡುವುದಿಲ್ಲ, ಇನ್ನೊಂದು ಕಡೆ ವಸೂಲಿ ಮಾಡುವುದನ್ನು ಬಿಡುವುದಿಲ್ಲ. ಅಂದರೆ ನಿಮಗೆ ಹೊಟ್ಟೆಗೆ ಇಲ್ಲದಿದ್ದರೂ ಪರವಾಗಿಲ್ಲ, ನೀವು ಉಪವಾಸವಿದ್ದರೂ ಪರವಾಗಿಲ್ಲ ನಮಗೆ ಟ್ಯಾಕ್ಸ್ ಕೊಡಿ ಎನ್ನುವಂಥ ಒಂದು ಪರಿಸ್ಥಿತಿಯನ್ನು ನೀವು ತಂದು ಇಟ್ಟಿದ್ದೀರಿ. ಇಂತಹ ಕೆಟ್ಟ ಸರ್ಕಾರ ಖಂಡಿತವಾಗಿ ಕೂಡ ಎಂದೂ ಯಾರೂ ನೋಡಿದ್ದಿಲ್ಲ. ಆದಕಾರಣ ಸೆಂಟ್ರಲ್ ಗ್ರಿಡ್‌ನಿಂದ ತರಬೇಕೋ. ಅಥವಾ ಅಕ್ಕಪಕ್ಕದ ರಾಜ್ಯದಿಂದ ತರಬೇಕೋ ಎಲ್ಲಿಂದ ತರಬೇಕೋ ಅದನ್ನು ಅರಿತುಕೊಂಡು ಆ ಜವಾಬ್ದಾರಿಯನ್ನು ಅರಿತುಕೊಂಡು ಅವರು ಕೆಲಸವನ್ನು ಮಾಡುತ್ತಿಲ್ಲ ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ, ರೈತರಿಗೆ

ತೊಂದರೆ ಮಾಡುತ್ತಿದ್ದಾರೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಬೆಳೆಯನ್ನು ನಾಶಮಾಡುತ್ತಿದ್ದಾರೆ. ಅದಕ್ಕಾಗಿ ಅವು ತಾಳಿರುವ ಈ ನಿಲುವನ್ನು ಅವರ ಧೋರಣೆಯನ್ನು ನೋಡಿಕೊಂಡು ಜನ ಇವೊತ್ತು ಬೇಸತ್ತಿದ್ದಾರೆ. ಇದರಿಂದ ರಾಜ್ಯದ, ದೇಶದ ಪ್ರೊಡಕ್ಟಿವಿಟಿ, ಉತ್ಪಾದನೆ ಏನು ಇದೆ ಅದು ಕುಂಠಿತವಾಗಿದೆ. ಅದಕ್ಕೂ ಕೂಡ ಜವಾಬ್ದಾರಿಯನ್ನು ಇವರು ಹೊತ್ತುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾವು ಅವರು ಮಾಡುತ್ತಿರುವ ಧೋರಣೆ ಹಾಗೂ ಕೃತಿಯ ವಿರುದ್ಧ ನಾವೆಲ್ಲರೂ ಕೂಡ ಪಕ್ಷದ ವತಿಯಿಂದ ಪ್ರತಿಭಟನೆಯನ್ನು ಮಾಡಿ ವಾಕೌಟ್ ಮಾಡುತ್ತೇವೆ. ಈಗ ಚುನಾವಣೆ ಹಿನ್ನೆಲೆ ನೋಡಿಕೊಂಡು ಈಗಲಾದರೂ ಅವರಿಗೆ ಬುದ್ಧಿ ಬಂದು ಅವರ ಧೋರಣೆಯನ್ನು ಸುಧಾರಣೆ ಮಾಡಿಕೊಳ್ಳತಕ್ಕಂಥದ್ದು ಸರಿ ರೈತರಿಗೆ ಕನ್ಸಿಷನ್ ಕೊಡತಕ್ಕಂಥದ್ದು ಮಾಡುತ್ತಾರೆ ಎಂದು ಹೇಳಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ನಾವು ಎಷ್ಟೇ ಕೇಳಿಕೊಂಡರೂ ಅವರಿಗೆ ಚಿಂತೆ ಇಲ್ಲ. ಈ ಪ್ರಸ್ತಾವನೆಯನ್ನು ನಾವು ಇಂದು ಒಂದೇ ಧ್ವನಿಯಿಂದ ಅಂದರೆ ನಮ್ಮ ಪಕ್ಷದವರು, ಬಿ.ಜೆ.ಪಿ.ಯವರು, ವಾಟಾಳ್ ನಾಗರಾಜ್‌ರವರು ಇನ್ನು ಅನೇಕರು ಒಂದೇ ಧ್ವನಿಯಿಂದ ಪ್ರಸ್ತಾವನೆಯನ್ನು ಮಂಡಿಸಿದರೂ ಕೂಡ ಮಾನ್ಯ ಮಂತ್ರಿಗಳು ಯಾವುದೇ ರೀತಿಯಾದ ಸರಿಯಾದ ಉತ್ತರವನ್ನು ಕೊಡದೆ ಅಲಕ್ಷ್ಯ ಮಾಡಿದ್ದಾರೆ. ಇನ್ನು ಮಾನ್ಯ ಮುಖ್ಯಮಂತ್ರಿಗಳಿಗಂತೂ ಅದರ ಚಿಂತನೆ ಇಲ್ಲ ಬಿಡಿ. ಅವರು ಬರೀ ತನ್ನ ಕುರ್ಚಿ ಹೇಗೆ ಉಳಿಯುತ್ತದೆ ಎನ್ನುವ ಚಿಂತನೆಯಲ್ಲೇ ಮೂರನೇ ಮಹಡಿಯಲ್ಲಿ ಕುಳಿತುಕೊಳ್ಳುತ್ತಾರೆ. ಇಲ್ಲ ಎಂದರೆ ಕಾವೇರಿಯಲ್ಲಿ ಕುಳಿತುಕೊಳ್ಳುತ್ತಾರೆ. ಅವರ ಗಮನ ಬೇರೆ ಎಲ್ಲೂ ಕೂಡ ಇಲ್ಲ. ಅದಕ್ಕೆ ಈ ಪರಿಸ್ಥಿತಿ ಉಂಟಾಗಿದೆ. ಇದನ್ನು ನಾವು ಪ್ರೊಟೆಸ್ಟ್ ಮಾಡಿ ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

\+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷರೇ, ಬೇರೆಯಾದಂತಹ ಕಾರಣಕ್ಕೋಸ್ಕರ ಒಂದು ಸತ್‌ಸಂಪ್ರದಾಯ ಇಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿ ನಾವು ವೆಲ್‌ನಲ್ಲಿ ಕುಳಿತುಕೊಳ್ಳುವುದನ್ನು ನಿಲ್ಲಿಸಿದ್ದೇವೆ. ಏಕೆಂದರೆ ಇದರಿಂದ ಒಳ್ಳೆಯದಾಗುವುದಿಲ್ಲವೆಂದು. ಇಲ್ಲದೇ ಇದ್ದರೆ ಇದು ಯಾವ ರೀತಿಯ ಇಶ್ಯೂ ಇದೆ ಎಂದರೆ ಈ ರಾಜ್ಯದ 12 ಲಕ್ಷ ರೈತರ ಕುಟುಂಬಕ್ಕೆ ಸಂಬಂಧಪಟ್ಟಂತಹ ವಿಚಾರದಲ್ಲಿ ತಾವು ಮೀಟರ್ ಹಾಕುವುದಿಲ್ಲವೆಂದು ಹೇಳುವವರೆಗೂ ಧರಣಿ ಮಾಡಿ, ಸತ್ಯಾಗ್ರಹ ಮಾಡಿ ಸದನದ ಕಾರ್ಯಕಲಾಪ ಸ್ಥಗಿತಗೊಳಿಸಬೇಕಾದಂತಹ ವಿಷಯ. ಆದರೆ ಎಲ್ಲಾದಕ್ಕೂ ವೆಲ್‌ನಲ್ಲಿ ಹೋಗಬೇಕೆಂದು ಇಲ್ಲ. ಅದಕ್ಕಾಗಿ ಸದನದ ಕಾರ್ಯಕಲಾಪ ಮುಂದೆ ಹೋಯಿತು ಎಂದು ಪತ್ರಿಕೆಯ ಮುಖಪುಟದಲ್ಲಿ ಬಂದು ಅದರಿಂದ ಪ್ರಚಾರ ತೆಗೆದುಕೊಳ್ಳುವಂತಹ ಅಗತ್ಯವೂ ಇಲ್ಲ. ನಾನು ಒಂದು ಮಾತು ಹೇಳುತ್ತೇನೆ, ಇವತ್ತು ಸ್ಪಷ್ಟವಾಗಿ ಎದ್ದು

ನಿಂತುಕೊಂಡು ಈ ಮೀಟರ್‌ನ್ನು ಅಳವಡಿಸುವುದಿಲ್ಲವೆಂದು ತಾವು ಹೇಳಿಲ್ಲ. ಅದರ ಬದಲು ಮೀಟರ್ ಅಳವಡಿಸುತ್ತೇವೆ ಎಂದು ಹೇಳಿದ್ದಾರೆ. 12 ಲಕ್ಷ ರೈತ ಕುಟುಂಬಕ್ಕೆ ನಾವು ರೈತನ ಮಕ್ಕಳು ಎಂದು ಹೇಳಿಕೊಂಡು, ಅವರ ಮಾರಣ ಹೋಮ ಮಾಡುವಂತಹ ತೀರ್ಮಾನ ತೆಗೆದುಕೊಂಡಿದ್ದೀರಿ. ಇದರ ಉದ್ದೇಶ ಏನು? ಇದರ ಉದ್ದೇಶ ದುರುದ್ದೇಶದಿಂದ ಕೂಡಿದೆ. ನಂತರ ಪರ್‌ಯೂನಿಟ್ ಇಷ್ಟು ಎಂದು ಚಾರ್ಜ್ ಮಾಡಬೇಕು ಎನ್ನುವಂತಹ ಮೊದಲ ಹೆಜ್ಜೆ ತಾವು ಇಡುತ್ತಿದ್ದೀರಿ. ಅದಕ್ಕಾಗಿ ಯೋಚನೆ ಮಾಡುತ್ತಿದ್ದೇವೆ, ಬಹುಶಃ ಈ ಸದನದ ಕಾರ್ಯಕಲಾಪದಲ್ಲಿ ಬಜೆಟ್ ಅಧಿವೇಶನದ ದಿವಸ ಒಂದು ದಿವಸ ಇರಬೇಕಾಗುತ್ತದೆ. ಅದಾದಮೇಲೆ ಇಡೀ ರಾಜ್ಯದಲ್ಲಿ ನಾನು ಪ್ರವಾಸ ಮಾಡುತ್ತೇನೆ. 4-5 ಲಕ್ಷ ರೈತರಿಂದ 25-26ನೇ ತಾರೀಖಿನ ದಿವಸ ವಿಧಾನಸಭೆ ಮುತ್ತಿಗೆ ಹಾಕಿಸುತ್ತೇನೆ. ಶಾಸಕರ ಭವನದಲ್ಲಿ ರೈತರ ಮಕ್ಕಳು ಎಂದು ಹೇಳಿಕೊಂಡು ಯಾವ ಶಾಸಕರು ಇದ್ದಾರೆ, ನಿಮ್ಮ ನಿಮ್ಮ ಕ್ಷೇತ್ರದವರ ಶಾಸಕರ ಮನೆ ಮುಂದೆ ನಮ್ಮ ರೈತರು ಬಂದು ಕುಳಿತುಕೊಳ್ಳುತ್ತಾರೆ. ನಿಮಗೆ ಎಲ್ಲಿಯವರೆಗೆ ದಿಗ್ಬಂಧನ ಹಾಕುತ್ತೇನೆ ಎಂದರೆ ಇಲ್ಲಿ ಅಲ್ಲ ಶಾಸಕರ ಭವನದಿಂದ ಅಧಿವೇಶನದವರೆಗೂ ಕೂಡ ಯಾರು ರೈತರ ಮಕ್ಕಳು ಎಂದು ಶಾಸಕರಾಗಿದ್ದಂತಹವರು ಬರುತ್ತಾರೆ, ಅವರಿಗೆ ಯಾರು ಪೊಲೀಸರು ರಕ್ಷಣೆ ಬರುತ್ತಾರೆ? ಈ ರಾಜ್ಯದ ಜನತೆಗೆ ಸದನದ ಮೂಲಕ ಕರೆ ಕೊಡುತ್ತೇನೆ. ನಾನು ವೆಲ್‌ನಲ್ಲಿ ಕುಳಿತುಕೊಳ್ಳುವುದಿಲ್ಲ. 19ನೇ ತಾರೀಖು ರಾಜ್ಯದ ರೈತರ ಜೊತೆ ಬರುತ್ತೇನೆ. ಪ್ರವಾಸ ಮಾಡುತ್ತೇನೆ, 4-6 ಲಕ್ಷ ರೈತರುಗಳನ್ನು ಕರೆದುಕೊಂಡು ಬಂದು ನಾನು ವಿಧಾನಸೌಧ ಮುತ್ತಿಗೆ ಹಾಕಿಸುವುದಿಲ್ಲ. ಶಾಸಕರ ಭವನವನ್ನು ಮುತ್ತಿಗೆ ಹಾಕಿಸುತ್ತೇನೆ. ನಿಮ್ಮ ಮಂತ್ರಿಗಳು, ನಿಮ್ಮ ಶಾಸಕರು ಎಲ್ಲೆಲ್ಲಿ ಇದ್ದಾರೆ ಅವರ ಮನೆ ಮುಂದೆ ಧರಣಿ ಕುಳಿತುಕೊಂಡು ಕೊನೆಗೆ ನೀವು ಸದನಕ್ಕೆ ಬಂದು ಯಡಿಯೂರಪ್ಪನವರೇ, ತಪ್ಪಾಯಿತು ಎಂದು ಕ್ಷಮಾಪಣೆ ಕೇಳಿ ಮೀಟರ್ ಅಳವಡಿಸುವುದನ್ನು ಕೈಬಿಡುತ್ತೇವೆ ಎಂದು ಹೇಳುವವರೆಗೂ ಹೋರಾಟವಾಗುತ್ತದೆ. ಅದನ್ನು ನೋಡಿ. ನಿಮಗೆ ವಿನಾಶಕಾಲೇ ವಿಪರೀತಿ ಬುದ್ಧಿ ಎಂದು ಹೇಳುತ್ತಾ, ಠೇವಣಿ ಕಳೆದುಕೊಂಡ ಮೇಲೂ ಸಹ ನಿಮ್ಮ ಯೋಗ್ಯತೆಗೆ ತಕ್ಕಂತೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳ ಜೊತೆ, ಗ್ರಾನೈಟ್ ಖದೀಮರ ಜೊತೆ, ಎಕ್ಸೈಜ್ ಲೂಟಿದಾರರ ಜೊತೆ ಶಾಮೀಲಾಗಿದ್ದೀರಿ, ಸಾವಿರಾರು ಕೋಟಿ ರೂಪಾಯಿ ಲೂಟಿಯಾಗುತ್ತಿದೆ. ಇವತ್ತು ರೈತರ ಜೀವದ ಬಗ್ಗೆ ಚೆಲ್ಲಾಟ ಮಾಡುವುದಕ್ಕೆ ನಿಮ್ಮ ಸ್ವಾರ್ಥಕ್ಕೋಸ್ಕರ ಹೊರಟ್ಟಿದ್ದೀರಿ. ಏಕೆ ರೈತ ಓಟು ಕೊಡಲಿಲ್ಲವೇ? ಠೇವಣಿ ಕಳೆದುಕೊಂಡಿರಿ ಎಂದೇ, ಮಂತ್ರಿಗಳು ಮನೆಗೆ ಹೋದರು ಎಂದೇ? ಬಹುಶಃ ಇದು ಅಧಿಕಾರದ ಮದ. ಈ ನಾಡಿನ ಜನರ ಪರವಾಗಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರುವ ನಾವು ಹೇಳುತ್ತಿರುವಂತಹ ಒಂದೊಂದು ಮಾತು, ನನ್ನ ಕ್ಷೇತ್ರದ ಲಕ್ಷಾಂತರ ಜನರ ಪ್ರತಿನಿಧಿಯಾಗಿ ಅವರ ಭಾವನೆ ವ್ಯಕ್ತಪಡಿಸುವುದಕ್ಕೆ ಇಲ್ಲಿಗೆ ಬಂದಾಗ ಯಾವುದೋ ಅಧಿಕಾರಿಯ ಮಾತನ್ನು ಕೇಳಿಕೊಂಡು ಈ ರೀತಿ ಮಾಡುತ್ತಿದ್ದೀರಿ. ಅಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಆದರೆ ಅದನ್ನು ರಿಪೇರಿ ಮಾಡುವುದಕ್ಕೆ

ಯೋಗ್ಯತೆ ಇಲ್ಲ. ಅಲ್ಲಿ ಸಾವಿರಾರು ಕೋಟಿ ರೂಪಾಯಿ ಲೂಟಿಯಾಗಿದೆ, ಸರ್ವನಾಶವಾಗಿದೆ. ಇದನ್ನು ಸರಿಪಡಿಸುವಂತಹ ಯಾವುದೇ ಯೋಗ್ಯತೆ ಇಲ್ಲದೆ ಮತ್ತೆ ಐ.ಪಿ. ಸೆಟ್‌ಗಳಿಗೆ ಮೀಟರ್ ಹಾಕುತ್ತೇವೆ ಎಂದು ಹೇಳುವಂತಾದ್ದು ಆದರೆ ಬಹುಶಃ ನಿಮ್ಮ ಕೊನೆಗಾಲ ಸಮೀಪವಾಗಿರಬೇಕಾದರೆ ಯಾರು ನಿಮ್ಮನ್ನು ರಕ್ಷಣೆ ಮಾಡುವುದಕ್ಕಾಗುತ್ತದೆ? ನಾನು ಈ ಮಾತನ್ನು ಹೇಳುತ್ತಾ, ಗೌರವದಿಂದ ನಾನು ಇಲ್ಲಿಂದ ಹೋಗುತ್ತಿದ್ದೇನೆ. ಜನತೆಗೆ ಕರೆ ಕೊಡುತ್ತೇನೆ. ಲಕ್ಷಾಂತರ ಜನ ಖರ್ಚು ಮಾಡಿಕೊಂಡು ಬಡಿಗೆ ತೆಗೆದುಕೊಂಡು ಶಾಸಕರ ಭವನಕ್ಕೆ ಬನ್ನಿ. ಇವತ್ತು ಸರ್ಕಾರದ ಪರವಾಗಿ ನಿಂತಿರುವವರನ್ನು ಬಹಿಷ್ಕಾರ ಮಾಡಿ ಎಂದು ಕರೆಯನ್ನು ಕೊಡುತ್ತೇನೆ. ಹೋರಾಟ ಯಾವರೀತಿ ಆಗುತ್ತದೆಂದು ಕಾದು ನೋಡಿ. ನಾನು ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ನಮಗೆ ಸರ್ಕಾರದ ಉತ್ತರದಿಂದ ಸಮಾಧಾನ ತಂದಿಲ್ಲ. ನಾವು ನಿರಂತರವಾಗಿ ಸರ್ಕಾರದ ವಿರುದ್ಧ ಇದು ರೈತರ ವಿರೋಧಿ ಸರ್ಕಾರ ಎಂದು ಹೇಳುತ್ತಿದ್ದೇನೆ. ಒಂದೇ ಸಮವಾಗಿ ವಿದ್ಯುಚ್ಛಕ್ತಿ ಬಗ್ಗೆ ಈ ಸದನದಲ್ಲಿ ಹತ್ತಾರು ಭಾರಿ ಸಭೆಗಳನ್ನು ಮಾಡಿದ್ದೇವೆ. ಈ ಸಭೆಗಳಿಗೆ ರೈತರ ಬಗ್ಗೆ ಸ್ವಲ್ಪ ಕೂಡ ಕಾಳಜಿ ಇಲ್ಲ. ಇದು ರೈತ ವಿರೋಧಿ ಸರ್ಕಾರ ಎಂದು ಹೇಳಿ ನಾವು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ರೈತ ವಿರೋಧಿ ಸರ್ಕಾರವನ್ನು ನಾನೂ ಕೂಡ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಕೂಡ ಸಭಾತ್ಯಾಗ ಮಾಡಿದರು)

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಉಪಾಧ್ಯಕ್ಷರೇ, ಈಗ 11 ಲಕ್ಷ ಪಂಪ್‌ಸೆಂಟ್‌ಗಳಿವೆ ಇದಕ್ಕೆ ಇವತ್ತು ಇವರು ಸೆಕ್ಯೂರಿಟಿ ಡೆಪಾಸಿಟ್ ಕೇಳುತ್ತಿದ್ದಾರೆ. ಯಾರಿಗೂ ಕೂಡ ಅದಕ್ಕೆ ಮುನ್ಸೂಚನೆ ನೋಟೀಸ್ ಕೊಟ್ಟಿಲ್ಲ. ಸೆಕ್ಯೂರಿಟಿ ಡೆಪಾಸಿಟ್ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ಇವತ್ತು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಮುಂದೆ ನೀವೂ ಕೊಡತಕ್ಕಂಥ ಸಂದರ್ಭದಲ್ಲಿ ಯಾವ ಕಾನೂನು ತರುತ್ತೀರೋ, ನಿಯಮಾವಳಿ ಮಾಡುತ್ತೀರೋ ಆ ಪ್ರಕಾರ ಮಾಡಿ. ಈ ಹಾಲಿ ಏನು ಪಂಪ್‌ಸೆಟ್ ಇದೆ ಅದಕ್ಕೆ ಸೆಕ್ಯೂರಟಿ ಡೆಪಾಸಿಟ್ ಕೇಳಬೇಕಾದಂತಹ ಅಗತ್ಯವಿಲ್ಲ. ಅದಕ್ಕೆ ನೀವು ನೋಟೀಸ್

ಕೂಡ ಕೊಟ್ಟಿಲ್ಲ. ಅದು ಏನೂ ಇಲ್ಲದೆ ಓರಲ್ ಆಗಿ ಹೇಳಿದ್ದೀರಲ್ಲಾ, ಓರಲ್ ಆಗಿ ಇನ್‌ಸ್ಟ್ರಕ್ಷನ್ ತೆಗೆದುಕೊಂಡು ಹೋಗಿ ಪಂಪ್‌ಸೆಟ್‌ಗಳಿಗೆ ಇವತ್ತು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಇವತ್ತು ಬೇಸಿಗೆ ಕಾಲ ಬಂದಿದೆ. ಇದರಲ್ಲಿ ಬಾಗಾಯಿತು ಇಟ್ಟುಕೊಂಡಿರುವವರು ಇವತ್ತು ಡಿಸ್‌ಕನೆಕ್ಟ್ ಮಾಡಿದರೆ ಅವರ ಕತೆ ಏನಾಗಬೇಕು? ನಮ್ಮಲ್ಲಿ ಬಾಗಾಯಿತುದಾರರು ಇದ್ದಾರೆ. ಹಿಂಗಾರು ಬರತಕ್ಕಂಥ ಕಾಲ. ಒಂದು ದಿವಸವೇನಾದರೂ ನೀರು ಇಲ್ಲದೆ ಒಣಗಿ ಹೋಯಿತು ಎಂದರೆ ಮುಂದಿನ ಸಾರಿ ಫಸಲು ಹಾಳಾಗಿ ಹೋಗುತ್ತದೆ. ಆ ದೃಷ್ಟಿಯಿಂದ ದಯವಿಟ್ಟು ನನಗೆ ಮಂತ್ರಿಗಳಿಂದ ಒಂದು ಆಶ್ವಾಸನೆ ಬೇಕು. ಯಾವುದೇ ಕಾರಣಕ್ಕೆ ಈಗಾಗಲೇ ಇರತಕ್ಕಂಥ ಪಂಪ್‌ಸೆಟ್‌ಗಳಿಗೆ ತಾವು ಸೆಕ್ಯೂರಿಟಿ ಡೆಪಾಸಿಟ್‌ಗಳನ್ನು ಕೇಳಕೂಡದು. ಆ ಆಶ್ವಾಸನೆಯನ್ನು ಕೊಡಬೇಕು. ಆದರೆ ಸೆಕ್ಯೂರಿಟಿ ಡೆಪಾಸಿಟ್‌ನ್ನು ಕೊಡಬೇಕೆಂದು ಯಾವಾಗ ಆದೇಶ ಹೊರಡಿಸಿದ್ದೀರಿ? ದಯವಿಟ್ಟು ಹೇಳಬೇಕು. ಇನ್ನು ಎರಡನೆಯದಾಗಿ ಕೆ.ಪಿ.ಸಿ.ಯವರಿಗೆ ಪ್ರತಿ ತಿಂಗಳು 85 ಕೋಟಿ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ ಎಂದು ಹೇಳಿದರೆ, ಅದನ್ನು ಯಾವ ತಾರೀಖಿನಂದು ತೀರ್ಮಾನ ಮಾಡಿದಿರಿ? ಎಷ್ಟು ತಿಂಗಳು ಕೊಟ್ಟಿದ್ದೀರಿ ಹೇಳಿ ನೋಡೋಣ?

ಶ್ರೀ ಶರಣಬಸಪ್ಪ ದರ್ಶನಾಪೂರ್: ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಈ ಒಂದು ವಿದ್ಯುತ್ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ಆಗಿದೆ. ಇದನ್ನು ನಾವೇನು ಅಧಿವೇಶನಕ್ಕಿಂತ ಮೊದಲೇ ಮಾಡಿದಂತಹ ರೇಟ್ಸ್ ಏನಲ್ಲ. ಹೋದಸಲ ನಾವೇನು ಟ್ಯಾರಿಫ್ ರಿವಿಷನ್ ಮಾಡಿದ್ದೇವೆ, ಆಗ ಇದೆಲ್ಲಾ ಮಾಡುವಂತಹ ಒಂದು ನಿಯಮಗಳು. ಈಗ ಏನು ಹೊಸದಾಗಿ ಮಾಡಿಲ್ಲ. ಮೊದಲು ಜೂನ್ ಜುಲೈ ತಿಂಗಳಿನಲ್ಲಿ ಮಾಡಿದಂಥಾದ್ದನ್ನೇ ನಾವು ಅಳವಡಿಸಿಕೊಂಡು ಬರುತ್ತಿದ್ದೇವೆ. ಇದನ್ನು ಈಗ ಏನು ರೈತರುಗಳಿಗೆ ಮೀಟರ್ ಹಾಕಬೇಕೆನ್ನುವ ವಿಚಾರದಲ್ಲಿ ಎಲೆಕ್ಷನ್ ಆದಮೇಲೆ ತಕ್ಷಣ ನಾವು ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮೀಟರ್ ಹಾಕುವುದು ಅಲ್ಲ. ಸೆಕ್ಯೂರಿಟಿ ಡೆಪಾಸಿಟ್ ಬಗ್ಗೆ ಹೇಳಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಇಂಡಿಯನ್ ಎಲೆಕ್ಟ್ರಿಸಿಟಿ ಆ್ಯಕ್ಟ್ ಪ್ರಕಾರ ಇಷ್ಟು ಡೆಪಾಸಿಟ್ ಕೊಡಬೇಕೆಂದು ಇದೆ. ಅದರಲ್ಲೂ ಮೊದಲು ಯಾವುದೋ ಒಂದು ಕಾರಣದಿಂದ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುಚ್ಛಕ್ತಿ ನೀಡುತ್ತಿದ್ದರು. ಈಗ ಮನೆಗಳಿಗೆ ಮೂರು ತಿಂಗಳು ಮಿನಿಮಂ ಡೆಪಾಸಿಟ್ ಇಡಬೇಕು ಎಂದು ಇದೆ. ಅದೇರೀತಿ ಐ.ಪಿ.ಸೆಟ್‌ಗಳಿಗೆ ಕೂಡ ಮಿನಿಮಂ ಡೆಪಾಸಿಟ್ ಇಡಬೇಕು ಎಂದು ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಎಲ್ಲಿದೆ?

ಶ್ರೀ ಸಿ.ಬೈರೇಗೌಡ: ಕಾನೂನಿನ ಪ್ರಕಾರ ಇದೆ. ಸರ್ಕಾರದ ನಿಲುವನ್ನು ಸ್ಪಷ್ಟಮಾಡುವುದಕ್ಕೆ ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕು. ಐ.ಪಿ.ಸೆಟ್‌ಗಳಿಗೆ ಮಿನಿಮಂ ಡೆಪಾಸಿಟ್ ಇಷ್ಟು ಇಡಬೇಕೆಂದು ಇದೆ. ಮೊದಲು 50 ರೂಪಾಯಿ ಇತ್ತು, ನಂತರ ನೂರುರೂಪಾಯಿ ಆಯಿತು. ಈಗ 300 ರೂಪಾಯಿ ಆಗಿರುವ ಕಾರಣದಿಂದ, ಐ.ಪಿ. ಸೆಟ್‌ಗಳಿಗೆ ಮಿನಿಮಂ ಡೆಪಾಸಿಟ್ ಇಡಬೇಕು, ಹಾಗೂ ಎಲ್ಲಿ ಕೊರತೆ ಇದೆ, ಆ ಕೊರತೆಯನ್ನು ತುಂಬಿಸಬೇಕು ಎನ್ನುವ ಕಾರಣದಿಂದ ಕೆ.ಇ.ಬಿ.ಯವರು ರೈತರಿಗೆ ನೀಡಿದ್ದಾರೆ. ನಾನು ವಿಚಾರ ಮಾಡಿ ಬಿಲ್ ಕೊಟ್ಟಿರತಕ್ಕಂಥಾದ್ದರ ಬಗ್ಗೆ ನೋಡಿ ವಿದ್ಯುತ್ ಮಂಡಲಿ ಅಧಿಕಾರಿಗಳನ್ನು ಕರೆಸಿ ಇದು ಯಾವ ಬಾಬತ್ತಿಗೆ ನೀಡಿದ್ದೀರಿ, ಏನು ಎನ್ನುವುದನ್ನು ತಿಳಿದುಕೊಂಡು ಬಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಊರಿನಲ್ಲಿ ತಿಳಿದುಕೊಂಡು ಬಂದು ಹೇಳುತ್ತಿದ್ದೇನೆ. ಎಲ್ಲಾ ಓರಲ್ ಇನ್ಸ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ಒಬ್ಬರಿಗೂ ನೋಟೀಸ್ ಕೊಟ್ಟಿಲ್ಲ.

ಶ್ರೀ ಸಿ.ಬೈರೇಗೌಡ: ಓರಲ್ ಅಲ್ಲ. ನಿಯಮಾವಳಿ ಏನಿದೆ ಎನ್ನುವುದನ್ನು ದಯವಿಟ್ಟು ತಿಳಿದುಕೊಂಡು ಹೇಳಿ. ಅದರ ಪ್ರಕಾರ ಮಾಡಿರತಕ್ಕಂಥಾದ್ದು. ಓರಲ್ ಆಗಿ ಹೇಳಿರತಕ್ಕಂಥಾದ್ದು ಅದನ್ನು ಹೇಳುತ್ತೇನೆ. ದಕ್ಷಿಣ ಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವವರು ಐಪಿ ಸೆಟ್‌ಗಳನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ನಾವು ಕೊಡುತ್ತಿರುವಂತಹ ವಿದ್ಯುಚ್ಛಕ್ತಿ ಐ.ಪಿ.ಸೆಟ್‌ಗಳಿಗೆ ಕನ್ಸಿಷನಲ್ ಟ್ಯಾರಿಫ್ ಇರತಕ್ಕಂಥಾದ್ದು. ಎಂದರೆ ವ್ಯವಸಾಯಕ್ಕೆ ಉಪಯೋಗ ಮಾಡುವಂತಹ ವಿದ್ಯುತ್ ಪಂಪ್‌ಸೆಟ್‌ಗಳಿಗೆ ನಾವು ಕನ್ಸಿಷನಲ್ ಟ್ಯಾರಿಫನ್ನು ಕೊಡುತ್ತಿದ್ದೇವೆ. ಇವರು ಉಪಯೋಗ ಮಾಡುತ್ತಿರುವಂತಾದ್ದು, ಪ್ಲಾಂಟೇಷನ್ ಕ್ರಾಫ್. ಕಾಫಿ ಬೆಳೆಯುತ್ತಾರೆ, ಕಾಫಿಗೆ ಸ್ಪ್ರಿಂಕ್ಲರ್ ಉಪಯೋಗಿಸುತ್ತಾರೆ. ಈ ಪ್ಲಾಂಟೇಷನ್ ಕ್ರಾಫ್‌ಗೆ ನಾವು ಹೆಚ್ಚಿನ ಟ್ಯಾರಿಫ್ ವಿಧಿಸಬೇಕಾಗಿ ಬಂತು. ನಮ್ಮಲ್ಲಿ ಇರತಕ್ಕಂಥ ನಮ್ಮ ಶಾಸನಸಭೆ ಸದಸ್ಯರಾಗಿರತಕ್ಕಂಥವರು ಮತ್ತು ಮಂತ್ರಿಮಂಡಲದ ಸದಸ್ಯರಾಗಿರುವವರಿಗೆ ಸಹ ಇದು ಹೆಚ್ಚಾಗುತ್ತದೆ, ಏಕೆಂದರೆ ಇದು ಸೀಜನಲ್ ಆಗಿ ಉಪಯೋಗಿಸತಕ್ಕಂಥಾದ್ದು. ಕೆಲವು ಸಂದರ್ಭದಲ್ಲಿ ವರ್ಷದಲ್ಲಿ ಒಂದು ದಿವಸ ಕೂಡ ಉಪಯೋಗಿಸುವುದಿಲ್ಲ. ನೀವು ಬೇರೆ ರೀತಿಯಲ್ಲಿ ಆ ಟ್ಯಾರಿಫ್‌ನ್ನು ವಿಧಿಸಿ, ನಮಗೆ ಉಪಯೋಗವಾಗುತ್ತದೆ ಎಂದರು. ಆದುದರಿಂದ ಅಲ್ಲಿ ಮೀಟರ್‌ಅನ್ನು ಅಳವಡಿಸಿ ಮೀಟರ್ ಪ್ರಕಾರ ಇದನ್ನು ನಮಗೆ ಕೊಡಿ ಎನ್ನುವ ಬೇಡಿಕೆ ಬಂದ ಕಾರಣದಿಂದ ನಾವು ಅವರಿಗೆ 500 ರೂಪಾಯಿಯವರೆಗೂ ನಿಗದಿ ಪಡಿಸಿದ್ದೆವು. ಈಗ ಅದು ಬೇಡ ಎಂದು ಹೇಳಿ ಚುನಾವಣೆ ಬಂದ ಕಾರಣ 500 ರೂಪಾಯಿ ಬದಲಿಗೆ 300 ರೂಪಾಯಿಗೆ

ಇಳಿಸಬೇಕು ಎಂದು ನಿರ್ದೇಶನ ಕೂಡ ನೀಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದರು, ಮೀಟರ್ ಎಂದು. ಇದೇ ಸದನದ ಸಮಿತಿ ವರದಿ ನಾನು ಓದುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಪ್ರಶ್ನೆ ಮಾಡಿರತಕ್ಕಂಥಾದ್ದು ಸೆಕ್ಯೂರಿಟಿ ಡೆಪಾಸಿಟ್ ಬಗ್ಗೆ.

ಶ್ರೀ ಸಿ.ಬೈರೇಗೌಡ: ಡೆಪಾಸಿಟ್ ಬಗ್ಗೆ ಹೇಳಿದ್ದೇನೆ, ನಿಯಮಾವಳಿ ತೆಗೆದು ನೋಡಿ. ಇದು ಮೊದಲು 50 ರೂಪಾಯಿ, 100 ರೂಪಾಯಿ, ಹಾಗೂ 300 ರೂಪಾಯಿಯವರೆಗೂ ಆಯಿತು. ಯಾರಿಗೆ ಈ ಮಿನಿಮಂ ಡೆಪಾಸಿಟ್ ಕೊರತೆ ಇದೆಯೋ ಆ ಕೊರತೆಯನ್ನು ತುಂಬಿಸಿ ಎಂದು ಅವರಿಗೆ ನೋಟೀಸ್ ನೀಡಿರತಕ್ಕಂಥಾದ್ದು.

ಶ್ರೀ ಕಾಗೋಡು ತಿಮ್ಮಪ್ಪ: ನೋಟೀಸ್ ಯಾರಿಗೂ ಕೊಟ್ಟಿಲ್ಲ. ಯಾವ ನಿಯಮಾವಳಿ ಪ್ರಕಾರ ನೀವು ಅವರಿಗೆ ಹಾಲಿ ಪಂಪ್‌ಸೆಟ್ ಇಟ್ಟುಕೊಂಡಿರುವವರಿಗೆ ನೀವು ಸೆಕ್ಯೂರಿಟಿ ಡೆಪಾಸಿಟ್ ಕೊಡಬೇಕು ಎಂದು ನೋಟೀಸ್ ಕೊಟ್ಟಿಲ್ಲ.

ಶ್ರೀ ಸಿ.ಬೈರೇಗೌಡ: ಅದನ್ನೇ ಕೊಟ್ಟಿರತಕ್ಕಂಥದ್ದು. ಡಿಪಾಸಿಟ್ ಕಡಿಮೆ ಇದೆ, ಕೊರತೆ ಇರತಕ್ಕಂಥದ್ದನ್ನು ತುಂಬಿಸಿ ಎಂದು ನೋಟಿಸ್ ಕೊಟ್ಟಿರತಕ್ಕಂಥದ್ದು.

ಶ್ರೀ ಕಾಗೋಡು ತಿಮ್ಮಪ್ಪ: ಯಾರಿಗೂ ನಿಯಮಾವಳಿ ಪ್ರಕಾರ ನೋಟಿಸನ್ನು ಕೊಟ್ಟಿಲ್ಲ.

ಉಪಾಧ್ಯಕ್ಷರು: ನೋಟಿಸನ್ನೂ ಕೊಟ್ಟಿಲ್ಲ ಎಂದರೆ ಹಣವನ್ನು ತುಂಬಬೇಡಿ ಎಂದು ಹೇಳಿ. ನೋಟೀಸ್ ಕೊಟ್ಟಿಲ್ಲ ಎಂದರೆ ಹಣವನ್ನು ತುಂಬುತ್ತಾರೇಕೆ?

ಶ್ರೀ ಕಾಗೋಡು ತಿಮ್ಮಪ್ಪ: ಅವರು ಡಿಸ್ಕನೆಕ್ಟ್ ಮಾಡುತ್ತಿದ್ದಾರೆ.

ಶ್ರೀ ಸಿ.ಬೈರೇಗೌಡ: ಅವರು ನಿಯಮಾವಳಿ ಪ್ರಕಾರ ಇಲ್ಲ ಎಂದು ಹೇಳುತ್ತಾರೆ. ನಿಯಮಾವಳಿ ಪ್ರಕಾರ ಇಲ್ಲದಿದ್ದ ಪ್ರಸಂಗದಲ್ಲಿ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಬಹಳ ವೀರಾವೇಶದಿಂದ ಮಾತನಾಡಿದ್ದಾರೆ. ಹೀಗೆ ಮಾಡುತ್ತೀರಿ, ಹಾಗೆ ಮಾಡುತ್ತೀರಿ ಎನ್ನತಕ್ಕಂಥದ್ದನ್ನು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ: ಸರ್ಕಾರದ ವರ್ತನೆಯನ್ನು ಪ್ರತಿಭಟಿಸಿ ನಾನೂ ಕೂಡ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

+ ಶ್ರೀ ಸಿ.ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಯಾರ ನಿರ್ದೇಶನದ ಮೇಲೆ ಕೆಲಸ ಮಾಡಬೇಕಾಗುತ್ತದೆ? ಈ ಸಭೆಯ ಸಮಿತಿಯ ವರದಿ ಇದೆ, ನಾನು ಇದನ್ನು ಈ ಸಭೆಯ ಗಮನಕ್ಕೆ ಮತ್ತು ಈ ಸಭೆಯ ಮೂಲಕ ರಾಜ್ಯದ ರೈತರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇಲ್ಲಿ ಕುಳಿತು ಏನು ಬೇಕಾದರೂ ಮಾತನಾಡಬಹುದು ಎಂದು ಹೇಳುವುದಾದರೆ ಅವರು ಮಾತನಾಡಿದಂಥ ರೀತಿಯಲ್ಲಿ ಇಲ್ಲಿ ಕುಳಿತು ಸರ್ಕಾರ ಕೆಲಸ ಮಾಡುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ರೀತಿನೀತಿಗಳು ಇದ್ದಾವೆ, ನಿಯಮಾವಳಿಗಳು ಇದ್ದಾವೆ, ಕಾನೂನು ಇದೆ. ಸಭೆಯಲ್ಲಿ ಏನು ತೀರ್ಮಾನವಾಗುತ್ತದೆ ಆ ತೀರ್ಮಾನದ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ನಾನು ಇವೊತ್ತಿನ ದಿವಸ ತಮ್ಮ ಮೂಲಕ ಈ ಸಭೆಯ ಮೂಲಕ ರಾಜ್ಯದ ರೈತರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ.

Karnataka Legislature - Report on Power Tariff Revision by Joint Committee constituted by both the House presented on 30-7-1996. Page 28 Para 9 (iv)

Government may direct the KEB to conduct a special drive to recover outstanding revenue arrears within six months.

Government of Karnataka may clear dues outstanding against Urban Water Supply Board, BWSSB and other local bodies;

9.5. Government may direct the KEB to fix energy meters to all the IP sets in order to assess the correct consumption of energy by agricultural Sector. To start with the KEB may fix energy meter for IP Sets which are serviced with effect from 1st Decembeer 1996. It may also be asked to service defunct IP sets in the State. ಈ ಸದನ ಸಮಿತಿಯ ಅಭಿಪ್ರಾಯದ ಪ್ರಕಾರ ಸರ್ಕಾರ ಕೆಲಸ ಮಾಡಬೇಕೋ ಅಥವಾ ಇವರು ಯಾರೋ ಒಬ್ಬರು ವೀರಾವೇಶದಿಂದ ಹೇಳಿದಂಥ ಮಾತುಗಳ ಪ್ರಕಾರ ನಾವು ಕೆಲಸ ಮಾಡಬೇಕೋ ಎಂಬುದರ ಬಗ್ಗೆ ದಯವಿಟ್ಟು ತಾವು ಮಾರ್ಗದರ್ಶನ

ಮಾಡಬೇಕು. ಆ ಸಮಿತಿಯ ವರದಿ ಇಲ್ಲಿ ಇದೆ. ಆ ವರದಿಯ ಪ್ರಕಾರ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತು ಬಹಳ ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಕೂಡ ತಿಳಿಸಿದ್ದಾರೆ. ಏನೆಂದರೆ ಇರತಕ್ಕಂಥ ವಿದ್ಯುತ್ತಿನಲ್ಲಿ ಈ ಬಾಬಿಗೆ ಎಷ್ಟು ವಿದ್ಯುತ್ ಖರ್ಚಾಗುತ್ತಿದೆ ಎನ್ನತಕ್ಕಂಥದ್ದನ್ನು ಅಳತೆ ಮಾಡುವುದಕ್ಕೋಸ್ಕರ ವಿದ್ಯುತ್ ಮೀಟರನ್ನು ಅಳವಡಿಸುತ್ತಿರುವಂತದ್ದು. ನಾನು ಒತ್ತಿ ಒತ್ತಿ ಒಂದುಸಾರಿ ಅಲ್ಲ, ಲಕ್ಷ ಸಾರಿ ಅಲ್ಲ, ಕೋಟಿ ಸಾರಿ ಸರ್ಕಾರದ ಪರವಾಗಿ ಇದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ವಿದ್ಯುತ್ ಮೀಟರನ್ನು ಅಳವಡಿಸುತ್ತಿರುವಂಥಾದ್ದು ಎಷ್ಟು ವಿದ್ಯುತ್ ಖರ್ಚಾಗುತ್ತಿದೆ ಎಂಬುದನ್ನು ಅಳತೆ ಮಾಡುವುದಕ್ಕೋಸ್ಕರ ಮಾತ್ರ. ಯಾವುದೇ ಕಾರಣದಿಂದ ಈ ಮೀಟರ್ ಆಧಾರದಮೇಲೆ, ಯೂನಿಟ್ ಆಧಾರದಮೇಲೆ ರೈತರಿಗೆ ವಿದ್ಯುತ್ ಚಾರ್ಜ್‌ನ್ನು ವಿಧಿಸುವುದಿಲ್ಲ, ಮಾನ್ಯ ಉಪಾಧ್ಯಕ್ಷರೆ, ಏಕೆ ಈ ತೀರ್ಮಾನಕ್ಕೆ ಬಂದಿದ್ದೇವೆ ಎಂಬುದನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಪರಿಸ್ಥಿತಿ ಯಾವ ತರಹ ಆಗುತ್ತಿದೆ ಎನ್ನುವುದಕ್ಕೆ ಇದೊಂದು ಚಿತ್ರ ಇದೆ. Statement showing the consumption of metered and un-metered category. ಇವೊತ್ತು ನಮ್ಮಲ್ಲಿ ಬಳಕೆ ಆಗುತ್ತಿರುವಂಥ ವಿದ್ಯುತ್ತಿನಲ್ಲಿ ಎಷ್ಟು ಭಾಗ ಮೀಟರ್ ಆಗಿ ಬಿಲ್ ಕಳುಹಿಸಿ ಚಾರ್ಜ್ ಮಾಡುತ್ತಿದ್ದೇವೆ. ಎಷ್ಟು ಭಾಗ ಮೀಟರ್ ಇಲ್ಲದೆಯೇ ವಿದ್ಯುತ್ತನ್ನು ಬಳಕೆ ಮಾಡಿ ಕಡಿಮೆ ಮಾರುತ್ತಿದ್ದೇವೆ ಎನ್ನುವುದಕ್ಕೆ ಅಂಕಿಅಂಶಗಳೂ ಕೂಡ ಇದೆ. ಅದನ್ನು ನಾನು ಈಗಲೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಸ್ವಲ್ಪ ಸಮಯವಕಾಶ ಬೇಕಾಗುತ್ತದೆ. ಏಕೆಂದರೆ ಬಹಳ ತೀರ್ಮಾನವಾದಂಥ ಆಪಾದನೆಗಳನ್ನು ಸರ್ಕಾರದ ಮೇಲೆ ಮಾಡಿರುವ ಕಾರಣದಿಂದ ಸರ್ಕಾರ ತನ್ನ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಏಪ್ರಿಲ್ 97ರಲ್ಲಿ ಗ್ರಾಸ್ ಎನರ್ಜಿ ಅವೇಲಬಲ್ 1716 ಮಿಲಿಯನ್ ಯೂನಿಟ್ಸ್ ಇದೆ. ಇದರಲ್ಲಿ ಮೀಟರ್‌ದ್ದು ಎಷ್ಟು ಇದ್ದಾವೆ ಎಂದರೆ 631 ಮಿ.ಯೂ. ಮಾತ್ರ. ಕೇವಲ 1716 ಮಿಲಿಯನ್ ಯೂನಿಟ್ಸ್‌ನಲ್ಲಿ ಮೀಟರ್ ಆಗಿರತಕ್ಕಂಥದ್ದು ಎಷ್ಟು ಎಂದರೆ ಶೇಕಡ 36.77 ಮಿಲಿಯನ್ ಯೂನಿಟ್ಸ್. ಉಳಿದಂತೆ ಶೇಕಡ 63.23 ಅಷ್ಟು ವಿದ್ಯುತ್ ಮೀಟರ್ ಆಗಲಿಲ್ಲ. ಅದು 18.5ರಷ್ಟು ಏನು ಟಿ ಅಂಡ್ ಡಿ ಲಾಸಸ್ ಎಂದು ಹೇಳುತ್ತಾರೆ, ಐ.ಪಿ. ಸೆಟ್‌ದ್ದೂ ಕೂಡ ಇದರಲ್ಲಿ ಬರುತ್ತದೆ. ಈ ರೀತಿಯಾಗಿ ಎಷ್ಟು ವಿದ್ಯುತ್ ಖರ್ಚಾಗುತ್ತದೆ ಎಂಬುದನ್ನು ನೋಡಬೇಕು ಎನ್ನುವ ಕಾರಣಕ್ಕೋಸ್ಕರ ಆ ಸಮಿತಿಯ ವರದಿಯ ಆಧಾರದಮೇಲೆ ಮೀಟರನ್ನು ಅಳವಡಿಸಬೇಕು ಎನ್ನತಕ್ಕಂಥದ್ದನ್ನು ಮಾಡಿದ್ದೇವೆ. ಅದರ ಜೊತೆಯಲ್ಲಿ ಮಾನ್ಯ ಖರ್ಗೆಯವರು ಮತ್ತೊಂದು ಮಾತು ಹೇಳಿದರು. ಅವರು ಏನು ಹೇಳಿದರು ಎಂದರೆ, ಅವರು ವಿದ್ಯುತ್ತನ್ನು ಉತ್ಪಾದನೆ ಮಾಡತಕ್ಕಂಥದ್ದಕ್ಕೆ ಏನೂ ಮಾಡಲಿಲ್ಲ ಎಂದು. ಇವೊತ್ತು ವಿದ್ಯುತ್ ಉತ್ಪಾದನೆ ಎಷ್ಟು ಆಗಿದೆ ಎಂಬುದನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ರಾಜ್ಯದಲ್ಲಿ ದಾಖಲೆ ವಿದ್ಯುತ್

ಉತ್ಪಾದನೆಯಾಗಿದೆ. ಯಾವೊತ್ತೂ ಕೂಡ ಆಗದಿರುವಷ್ಟು ವಿದ್ಯುತ್ತಿನ ಉತ್ಪಾದನೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅದೃಷ್ಟಕ್ಕೆ ಈ ಸಾರಿ ನಮ್ಮ ಜಲ ವಿದ್ಯುತ್ ಯೋಜನೆಗಳಲ್ಲಿ ಹೆಚ್ಚು ಉತ್ಪಾದನೆ ಮಾಡತಕ್ಕಂಥದ್ದು ಅಷ್ಟೇ ಅಲ್ಲದೆಯೆ ರಾಯಚೂರಿನಲ್ಲಿ ಇರತಕ್ಕಂಥ ನಮ್ಮ ಯೂನಿಟ್‌ಗಳ ಮೂಲಕವೂ ಕೂಡ ಹೆಚ್ಚಿನ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. 1994-95ರ ಏಪ್ರಿಲ್‌ನಲ್ಲಿ ಪ್ರತಿದಿನಕ್ಕೆ ಉತ್ಪಾದನೆ ಆಗಿರತಕ್ಕಂಥದ್ದು 54.1 ಮಿಲಿಯನ್ ಯೂನಿಟ್ ಆದರೆ 1997-98ರಲ್ಲಿ 55.6 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಆಯ್ತಿತು. ನಾನು ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಸದನದ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. 1994-95ರ ಫೆಬ್ರವರಿ ತಿಂಗಳಿನಲ್ಲಿ 64.7 ಮಿಲಿಯನ್ ಯೂನಿಟ್ ಪ್ರತಿ ದಿವಸಕ್ಕೆ ಉತ್ಪಾದನೆಯಾದರೆ ಅದೇ 23-2-98ರವರೆಗೂ 70.6 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿದ್ದಾರೆ. ಇದು ಹಿಂದಿನದಕ್ಕೆ ಹೋಲಿಸಿದರೆ ಒಂದು ದಾಖಲೆಯೆ ಸರಿ. ಅಂದರೆ ಇವತ್ತಿನ ದಿವಸ ಅಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಏನೂ ಮಾಡಲಿಲ್ಲ ಎಂಬುದನ್ನು ಅವರು ಅಂಕಿಅಂಶಗಳ ಆಧಾರವೇ ಇಲ್ಲದೆ....

(ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್)ರವರು ಪೀಠವನ್ನು ಅಲಂಕರಿಸಿದರು)

ಒಂದಕ್ಕೊಂದು ಸಂಬಂಧ ಇಲ್ಲದೇ ಇರತಕ್ಕಂಥ, ತಾಳೆ ಇಲ್ಲದೇ ಇರತಕ್ಕಂಥ ಅಂಕಿಅಂಶಗಳನ್ನು ನೀಡಿ ಏನೂ ಮಾಡಲಿಲ್ಲ ಎಂದು ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥದ್ದಕ್ಕೆ ನಾನು ನನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಅದನ್ನು ತಳ್ಳಿ ಹಾಕುವುದಕ್ಕೆ ಇಚ್ಛೆಪಡುತ್ತೇನೆ. ಈವತ್ತು ಕೆಲವು ಕಡೆ ವಿದ್ಯುತ್ತಿನ ಅಡಚಣೆಗಳು ಇದ್ದಾವೆ, ಅಂತಹ ವಿಭಾಗದಿಂದ ನಾನೂ ಕೂಡ ಬರುತ್ತಿದ್ದೇನೆ, ತಾವೂ ಕೂಡ ಬರುತ್ತಿದ್ದೀರಿ. ಕೆಲವು ಜಿಲ್ಲೆಗಳಲ್ಲಿ ತೊಂದರೆ ಇದೆ. ಅದಕ್ಕೆ ಕಾರಣ ಏನೆಂದರೆ ಇವೊತ್ತು ಈ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್‌ಗೆ ಹಾಕಿರತಕ್ಕಂಥ ಲೈನ್‌ಗಳು ಬಹಳ ಓಬೀರಾಯನ ಕಾಲದ ಲೈನುಗಳು ಆಗಿದ್ದಾವೆ. ಇವೊತ್ತು ವಿದ್ಯುತ್ತಿನ ಉತ್ಪಾದನೆ ಕೂಡ ಜಾಸ್ತಿಯಾಗಿದೆ, ಬಳಕೆಯೂ ಕೂಡ ಜಾಸ್ತಿಯಾಗಿರುವುದರಿಂದ, ಇವೊತ್ತು ಆ ನಮ್ಮ ಲೈನುಗಳು ಓವರ್‌ಲೋಡನ್ನು ತಡೆಯತಕ್ಕಂಥ ಶಕ್ತಿ ಇಲ್ಲ. ಟ್ರಾನ್ಸ್‌ಫಾರ್ಮರ್ಸ್ ಕೂಡ ಓವರ್‌ಲೋಡ್ ಆಗುತ್ತಿದ್ದಾವೆ. ಈ ಕಾರಣದಿಂದ ಕೆಲವು ಕಡೆಗಳಲ್ಲಿ ಅಡತಡೆಗಳು ಉಂಟಾಗುತ್ತಿದೆ. ಅದರ ಜೊತೆಗೆ ನನಗೆ ಗೊತ್ತಿರುವ ಹಾಗೆ ಇವೊತ್ತು ನಮ್ಮ ಸದರನ್ ಗ್ರಿಡ್ ದಕ್ಷಿಣ ಭಾರತದ ಜಾಲ ಎಂಬುದು ಇದೆ. ಈ ಜಾಲದಲ್ಲಿ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿಗಳು ಇವೆ. ಇಲ್ಲಿ ಉತ್ಪಾದನಾ ಘಟಕಗಳೂ ಕೂಡ ಇದ್ದಾವೆ. ಮುಖ್ಯವಾಗಿರತಕ್ಕಂಥ ಉತ್ಪಾದನಾ ಘಟಕವೆಂದರೆ ಆಂಧ್ರದಲ್ಲಿ ಇರತಕ್ಕಂಥ ರಾಮಗುಂಡಂ ಮತ್ತು ಈ ಕಡೆ ಇರತಕ್ಕಂಥ ನೈವೇಲಿ ಪವರ್ ಕಾರ್ಪೊರೇಷನ್ ಮತ್ತು ಮದ್ರಾಸ್‌ನಲ್ಲಿ ಇರತಕ್ಕಂಥ ಅಟಾಮಿಕ್ ಪವರ್ ಸ್ಟೇಷನ್‌ನಿಂದ

ನಮಗೆ ವಿದ್ಯುತ್ ಬರಬೇಕಾಗಿರತಕ್ಕಂಥದ್ದು ಇದೆ. ಕೆಲವು ಕಡೆ ಕೆಲವು ಯೂನಿಟ್‌ಗಳಷ್ಟು ವಿದ್ಯುತ್ ನಿಂತು ಹೋಗಿರುತ್ತದೆ. ಉದಾಹರಣೆಗೆ ರಾಮಗುಂಡಂನಲ್ಲಿ 500 ಮೆ.ವ್ಯಾ. ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಾ ಇರತಕ್ಕಂಥ ಘಟಕ ಕೆಟ್ಟು ಹೋಯಿತು. ಅದು ಕೆಲಸ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಒಂದು ಗ್ರಿಡ್‌ನಲ್ಲಿ 500 ಮೆ.ವ್ಯಾ. ವಿದ್ಯುತ್ ಒಂದುಸಾರಿ ಕಡಿಮೆ ಆಯಿತು ಎಂದರೆ ಇದರ ಪರಿಣಾಮ ಇಡೀ ದಕ್ಷಿಣ ಭಾರತದಲ್ಲಿ ಆಗುತ್ತದೆ. ಈ ಪರಿಣಾಮ ನಮ್ಮರಾಜ್ಯದ ಮೇಲೂ ಕೂಡ ಆಯಿತು. ಅದೇ ಸಂದರ್ಭದಲ್ಲಿ - ನೈವೇಲಿ ಪವರ್ ಕಾರ್ಪೊರೇಷನ್‌ನಿಂದ ನಮಗೆ ಬರಬೇಕಾಗಿರತಕ್ಕಂಥ ಪಾಲು ಬರಲಿಲ್ಲ. ಅದೂ ಕೂಡ ಸ್ವಲ್ಪ ತೊಂದರೆಯಾಯಿತು. ರಾಮಚೂರುನಲ್ಲಿರುವಂತಹ ಒಂದು ಘಟಕ ಕೂಡ ಕೆಲವು ದಿವಸಗಳು ನಿಂತ ಕಾರಣದಿಂದ ತೊಂದರೆಯಾಯಿತು. ಈ ಕಾರಣಗಳಿಂದ ಇವತ್ತು ಕೆಲವು ದಿವಸಗಳು ಮಾತ್ರ ತೊಂದರೆಯಾಗಿರುವಂಥಾದ್ದು ನಿಜ, ನಾವು ಇಲ್ಲವೆಂದು ಹೇಳುವುದಿಲ್ಲ; ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುತ್ತಾ ಇದ್ದೆ, ಸಮರ್ಪಕವಾಗಿ ವಿದ್ಯುತ್ ಕೊಡುತ್ತಿದ್ದೇವೆಂಬುದು ಸರ್ಕಾರದ ವಾದವಲ್ಲ. ನಮ್ಮ ಶಕ್ತಿ ಮೀರಿ, ನಮ್ಮ ಕೈ ಮೀರಿ ನಡೆದಂತಹ ಘಟನೆಗಳು, ಮೆಕ್ಯಾನಿಕಲ್ ಫೈಲ್ಯೂರ್ ಮತ್ತು ಟೆಕ್ನಿಕಲ್ ಕಾರಣದಿಂದ ವಿದ್ಯುತ್ ಸರಬರಾಜಿನ ಅಡೆತಡೆಗಳು ಆಗಿರುವಂಥಾದ್ದು ನಿಜ. ಅದನ್ನು ತತ್‌ಕ್ಷಣ ಸರಿಪಡಿಸುವಂತಹ ಬೇರೆ ವ್ಯವಸ್ಥೆಯನ್ನು ಮಾಡುವಂತಹ ಪ್ರಯತ್ನ ಕೂಡ ಸರ್ಕಾರದಿಂದ ವಿದ್ಯುತ್ ಮಂಡಳಿಯಿಂದ ಮತ್ತು ವಿದ್ಯುತ್ ನಿಗಮದಿಂದ ಆಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇಷ್ಟು ಹೇಳುತ್ತಾ ಸರ್ಕಾರದ ವತಿಯಿಂದ ಏನು ಪ್ರಯತ್ನ ನಡೆದಿದೆ, ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದವನ್ನರ್ಪಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 4 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 3.02 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಗಂಟೆ 4.00ಕ್ಕೆ ಸಭೆ ಸೇರಲು ನಿಶ್ಚಯಿಸಿತು)

(ಸದನವು ಮತ್ತೆ 4 ಗಂಟೆ 1 ನಿಮಿಷಕ್ಕೆ ಸಮಾವೇಶಗೊಂಡಿತು)

ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ.ಮಾಮನಿ) ರವರು ಪೀಠವನ್ನಲಂಕರಿಸಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ನೀರಾವರಿ ಸಚಿವರು ಒಂದು ಸ್ಟೇಟ್‌ಮೆಂಟ್ ಕೊಡಬೇಕಾಗಿತ್ತು.

ಉಪಾಧ್ಯಕ್ಷರು: ಆಗಲಿ. ಕೊಡಲಿ.

ಸಚಿವರ ಹೇಳಿಕೆ.

ವಿಷಯ: ದೂದ್‌ಗಂಗಾ ನದಿಯಿಂದ ವೇದಗಂಗಾ ನದಿಗೆ ನೀರು ಬಿಡುವ ಬಗ್ಗೆ.

\+ ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು): ದೂದ್‌ಗಂಗಾ ರಿವರ್‌ನಿಂದ ವೇದಗಂಗಾ ರಿವರ್‌ಗೆ ನೀರು ಬಿಡುವ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ನಮ್ಮ ಮುಖ್ಯಮಂತ್ರಿಗಳು ಕಾಗದ ಬರೆದ ಬಗ್ಗೆ ಫ್ಯಾಕ್ಸ್ ಇಲ್ಲಿ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ತಮಗೆ ಹೇಳಿದ್ದೆ ನಾನು ಫ್ಯಾಕ್ಸ್ ಕಳುಹಿಸಿ ಅದರ ಪ್ರತಿಯನ್ನು ಇಲ್ಲಿ ಕೊಡುತ್ತೇನೆ ಎಂದು. ಮತ್ತೆ ತುಂಗಭದ್ರ ಎಡದಂಡೆ ನಾಲೆಯ ಬಗ್ಗೆ ಬೆಳಗ್ಗೆ ಎಲ್ಲಾ ಹೇಳಿದ್ದೆ. ಕೇವಲ ಒಂದು ಕಾಗದವನ್ನು ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ಫ್ಯಾಕ್ಸ್ ಇವತ್ತೇ ಮಾಡಬೇಕು ಎಂದು ಹೇಳಿದ್ದರು. ಆ ಫ್ಯಾಕ್ಸ್ ಕಾಪಿಯನ್ನು ಉಪಸಭಾಪತಿಯವರಿಗೆ ಕೊಡುತ್ತೇನೆ ಎಂದು ಹೇಳಿದ್ದೆ. ಅದನ್ನು ಕೊಟ್ಟಿದ್ದೇನೆ.

Distributory No.85 which takes off from the Main canal falls under the jurisdiction of Sirawal Irrigation Division in Manvi Taluk. In the case of other distributories, the distributory at No. 85 also has got two segments, in the upper and lower end. The two segments received water in rotation of a week each. The upper end farmers of this distributory received their quota of water and their rotation ends on 9-3-98. From 9-3-98 the lower end farmers were to get water. In fact, these farmers particularly from Manvi and surrounding villages have staged dharna and blocked the road traffic on morning 9-3-98 demanding their full share of water. They have called off their dharna only on an assurance by the Deputy Commissioner, Supperintendent of Police in the afternoon 9-3-98. They ensured that the all lower end of Irrigation officials and Police has been brought into effect round the clock, along with the main canal of the district. In respect of distributory 85, all the upper end pipes were closed on 9-3-98. Following closure, the irrigation officials...